ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

45

ಅಕ್ಟೋಬರ್ 28 ಸೋಮವಾರ 2024

₹4

ಸಂಪುಟ: 45 | ಸಂಚಿಕೆ: 192 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಅಂಬೇಡ್ಕರ್ ಅವರಂತಹ ನಾಯಕರು ಇಂದು ಇದ್ದಿದ್ದರೆ ರೂಪಾಯಿ ಮೌಲ್ಯ ಕುಸಿಯುತ್ತಿರಲಿಲ್ಲ

ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಕ್ರಾಂತಿಕಾರಿ ವಿಚಾರಗಳ ಚಿಂತನ ಮಂಥನ ಕಾರ್ಯಕ್ರಮದಲ್ಲಿ ಚಿತ್ರನಟ, ನಿರ್ದೇಶಕ ಪ್ರಕಾಶ್ ಬೆಳವಾಡಿ ಅಭಿಮತ

ಮೈಸೂರು, ಅ.27(ಬಿಎಲ್‌ಯು)– ಅಂಬೇಡ್ಕರ್ ಅವರಂತಹ ಮಹಾನ್ ನಾಯಕರು ಇಂದು ಇದ್ದಿದ್ದರೆ ಡಾಲರ್ ಮುಂದೆ ರೂಪಾಯಿ ಮೌಲ್ಯ ಕುಸಿಯುತ್ತಿರಲಿಲ್ಲ ಎಂದು ಚಿತ್ರನಟ, ನಿರ್ದೇಶಕ ಪ್ರಕಾಶ್ ಬೆಳವಾಡಿ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಕುವೆಂಪುನಗರದ ಗಾನ ಭಾರತಿ ವೀಣೆಶೇಷಣ್ಣ ಭವನದಲ್ಲಿ ಯುವ ಬ್ರಿಗೇಡ್ ಬೆಳಕು ಹೊಳಪು ಆಯೋಜಿಸಿದ್ದ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಕ್ರಾಂತಿಕಾರಿ ವಿಚಾರಗಳ ಚಿಂತನ ಮಂಥನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, 1924ರ ಅವಧಿಯಲ್ಲೇ, ಡಾ.ಅಂಬೇಡ್ಕರ್ ಡಾಲರ್ ಎದುರಿನ ರೂಪಾಯಿ ಮೌಲ್ಯದ ಬಗ್ಗೆ ಪಿಹೆಚ್.ಡಿ ಪ್ರಬಂಧ ಮಂಡಿಸಿದ್ದರು ಎಂದರು.

ಅಂದು ಭಾರತದ ಒಂದು ರೂಪಾಯಿಗೆ ಒಂದು ಡಾಲರ್ ಮೌಲ್ಯವಿತ್ತು ಆ ದಿನದಲ್ಲೇ ಅಂಬೇಡ್ಕರ್‌ಗೆ ಡಾಲರ್ ಎದುರಿನ ರೂಪಾಯಿ ಮೌಲ್ಯದ ಕುರಿತ ದೂರದೃಷ್ಟಿಯ ಚಿಂತನೆ ಇತ್ತು. ಇಂದು ಒಂದು ಡಾಲರ್‌ಗೆ 88 ರೂಪಾಯಿ ಮೌಲ್ಯವಿದೆ. ಪ್ರಾಯಶಃ ಇಂದು ಅಂಬೇಡ್ಕರ್‌ರಂತಹ ನಾಯಕರು ಇದ್ದಿದ್ದರೆ ಡಾಲರ್ ಎದುರು ರೂಪಾಯಿ ಮೌಲ್ಯ ಕುಸಿಯುತ್ತಿರಲಿಲ್ಲ ಎಂದು ಪ್ರಕಾಶ್ ಬೆಳವಾಡಿ ಅಭಿಪ್ರಾಯಪಟ್ಟರು.

ಅಂಬೇಡ್ಕರ್‌ಗೆ ಜಾತಿ ವ್ಯವಸ್ಥೆಯ ಕಹಿ ಅನುಭವವಿತ್ತು. ಇದನ್ನೆಲ್ಲಾ ಮೆಟ್ಟಿ ನಿಂತು ಹೋರಾಟ ಮಾಡಿದ್ದು. ಬದುಕಿನ ಸವಾಲು ಎದುರಿಸುವ ಮೂಲಕ ವಿದ್ವತ್ತು ಗಳಿಸಿಕೊಂಡಿದ್ದರು. ಅತ್ಯಂತ ಪ್ರಬುದ್ಧ ಬುದ್ಧಿಜೀವಿಯಾಗಿದ್ದರು. ಪಠ್ಯ ಮತ್ತು ನಾಟಕಗಳಲ್ಲಿ ಅಂಬೇಡ್ಕರ್ ಅವರಿಗೆ ಆದ ಅನ್ಯಾಯದ ಬಗ್ಗೆ ಬೆಳಕು ಚೆಲ್ಲಬೇಕು ಎಂದು ಪ್ರಕಾಶ್ ಬೆಳವಾಡಿ ಆಗ್ರಹಿಸಿದರು.

ಅಂಬೇಡ್ಕರ್ ಕುರಿತಂತೆ ಕೆಲವರು ಈಗ ಮಾತನಾಡುವುದನ್ನು ಕೇಳಿದರೆ ಆಶ್ಚರ್ಯ ಅನಿಸುತ್ತದೆ. ಅಷ್ಟೆ ಅಲ್ಲದೆ ಭಯ ಮೂಡಿಸುತ್ತದೆ. ಚಕ್ರವರ್ತಿ ಸೂಲಿಬೆಲೆ ಆಯೋಜಿಸಿರುವ ಈ ಕಾರ್ಯಕ್ರಮವನ್ನು ಕೆಲವರು ಪ್ರಶ್ನೆ ಮಾಡಿದ್ದಾರೆ. ಆದರೆ ಇಂತಹ ಹಾದಿಯಲ್ಲೆ ಸಾಗಬೇಕು, ಇಂತಹದ್ದನ್ನೇ ಆಯ್ಕೆ ಮಾಡಿಕೊಳ್ಳಬೇಕು ಎಂದು ಹೇಳಲು ಇವರು ಯಾರು? ಎಂದು ಅವರು ಪ್ರಶ್ನಿಸಿದರು.



ಮೈಸೂರಿನ ಕುವೆಂಪುನಗರದ ಗಾನ ಭಾರತಿ ವೀಣೆ ಶೇಷಣ್ಣ ಭವನದಲ್ಲಿ ಯುವ ಬ್ರಿಗೇಡ್ ಬೆಳಕು ಹೊಳಪು ಭಾನುವಾರ ಆಯೋಜಿಸಿದ್ದ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಕ್ರಾಂತಿಕಾರಿ ವಿಚಾರಗಳ ಚಿಂತನ ಮಂಥನ ಕಾರ್ಯಕ್ರಮವನ್ನು ಚಿತ್ರನಟ ಪ್ರಕಾಶ್ ಬೆಳವಾಡಿ ಉದ್ಘಾಟಿಸಿ, ಮಾತನಾಡಿದರು.


2011ರ ನಂತರ ಜನಗಣತಿ ಆಗಿಲ್ಲ. ಅವರ ಹಕ್ಕು ಅವರದು ಎಂಬ ವಾದವನ್ನು ಪಾಲಿಸುವುದಾದರೆ ಈಗಿರುವ ಮೀಸಲಾತಿ ಶೇ.50ರಿಂದ ಶೇ.85ರಷ್ಟು ಏರಿಕೆಯಾಗುತ್ತದೆ. ಈಗ ಒಳ ಮೀಸಲಾತಿ ಜಾರಿಗೊಳಿಸಲು ಸುಪ್ರೀಂಕೋರ್ಟ್ ನಿರ್ದೇಶಿಸಿದೆ. ಇದನ್ನು ನೋಡಿದರೆ ಮುಂದಿನ ಚುನಾವಣೆ ಜಾತಿ ಆಧಾರಿತವಾಗಿ ನಡೆಯಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಇಂದು ಸಂವಿಧಾನದಲ್ಲಿ ಬಹಳಷ್ಟು ಬದಲಾವಣೆಗಳಾಗಿವೆ. ಈ ಹಿಂದೆ ರಾಜ್ಯಸಭಾ ಸದಸ್ಯರಾಗಿ ಆಯ್ಕೆಯಾಗುವವರು ಅದೇ ರಾಜ್ಯದ ನಾಗರಿಕರಾಗಿರಬೇಕು ಎಂಬ ನಿಯಮವಿತ್ತು. ಈ ಹಿಂದೆ ಅಸ್ಸಾಂ ರಾಜ್ಯದಿಂದ ರಾಜ್ಯಸಭಾ ಸದಸ್ಯರಾಗಿ ಆಯ್ಕೆಯಾಗಲು ಹೋದ ಡಾ.ಮನಮೋಹನ್ ಸಿಂಗ್ ಚುನಾವಣೆಯಲ್ಲಿ ಸೋಲನ್ನು ಅನುಭವಿಸಿದ್ದರು. ಆದರೆ ಈಗ ಎಲ್ಲಾ ಕಾನೂನು ನಿಯಮ ಬದಲಾವಣೆಯಾಗಿದ್ದು, ಯಾರು, ಯಾವ ರಾಜ್ಯದಲ್ಲಾದರೂ ಆಯ್ಕೆಯಾಗಬಹುದಾಗಿದೆ ಎಂದು ಹೇಳಿದರು.

ವಿದೇಶದ ಕಾರ್ಯಕ್ರಮಗಳಲ್ಲಿ ಭಾರತ ಸರಿ ಇಲ್ಲ ಎಂದು ಭಾರತೀಯರು ಪ್ರತಿಪಾದಿಸುವುದು ಸರಿ ಇಲ್ಲ ಎಂದು ಅಭಿಪ್ರಾಯಪಟ್ಟ ಪ್ರಕಾಶ್ ಬೆಳವಾಡಿ, ವಿದೇಶಿ ನೆಲದಲ್ಲಿ ಭಾರತದ ವ್ಯವಸ್ಥೆ ಟೀಕಿಸಿದ ರಾಹುಲ್ ಗಾಂಧಿ ಮಾತುಗಳಿಗೆ ಪರೋಕ್ಷ ವಿರೋಧ ವ್ಯಕ್ತಪಡಿಸಿದರು. ಲೇಖಕ ಚಕ್ರವರ್ತಿ ಸೂಲಿಬೆಲೆ, ವೈದ್ಯ ಡಾ.ಚಂದ್ರಶೇಖರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಹಿರಿಯ ನಾಗರಿಕರಿಗೆ ದೀಪಾವಳಿ ಗಿಫ್ಟ್

70 ವರ್ಷ ದಾಟಿದವರಿಗೂ ಆರೋಗ್ಯ ವಿಮೆ ಯೋಜನೆ





ನವದೆಹಲಿ, ಅ.27– ದೀಪಾವಳಿ ಹಬ್ಬದ ಸಂದರ್ಭದಲ್ಲೇ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ 70 ವರ್ಷ ದಾಟಿದವರಿಗೆ ವಿಶೇಷ ಆರೋಗ್ಯ ವಿಮೆ ಘೋಷಣೆ ಮಾಡಿದೆ.

ಆಯುಷ್ಮಾನ್ ಭಾರತ್ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ ಅಡಿಯಲ್ಲಿ 70 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನ ಎಲ್ಲಾ ನಾಗರಿಕರಿಗೆ ಅವರ ಆದಾಯದ ಸ್ಥಿತಿಯನ್ನು ಲೆಕ್ಕಿಸದೆ ಆರೋಗ್ಯ ರಕ್ಷಣೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ಅ.29ರಂದು ಬಿಡುಗಡೆ ಮಾಡುವ ಸಾಧ್ಯತೆಯಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

70 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನವರಿಗೆ ಆಯುಷ್ಮಾನ್ ಭಾರತ್ ಆರೋಗ್ಯ ವಿಮಾ ಯೋಜನೆಯಡಿ ವಿಸ್ತೃತ ಯೋಜನೆಯನ್ನು ಪ್ರಧಾನಿ ಪ್ರಾರಂಭಿಸುವ ಸಾಧ್ಯತೆಯಿದೆ. ಇದು ಸುಮಾರು 4.5 ಕೋಟಿ ಕುಟುಂಬಗಳ ಅಂದಾಜು ಆರು ಕೋಟಿ ನಾಗರಿಕರಿಗೆ ಪ್ರಯೋಜನವನ್ನು ನೀಡುತ್ತದೆ ಎಂದು ಮೂಲಗಳು ತಿಳಿಸಿವೆ. ಇದರ ಜೊತೆಗೆ ಪ್ರತಿರಕ್ಷಣೆ ಲಸಿಕೆಗಳ ನೋಂದಣಿಗೆ ಈ ಹಿಂದೆ ಅಭಿವೃದ್ಧಿಪಡಿಸಲಾಗಿದ್ದ U-WIN ಪೋರ್ಟಲ್‌ನಲ್ಲಿ ವಿದ್ಯುನ್ಮಾನ ನೋಂದಣಿಗೆ ಬಳಸಲಾಗುತ್ತದೆ. ಪ್ರಸ್ತುತ ಇದು ಪ್ರಾಯೋಗಿಕ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದೆ. ಅ.29ರಂದು ಈ ಪೋರ್ಟಲ್ ಅನ್ನು ಅಧಿಕೃತವಾಗಿ ಚಾಲನೆ ನೀಡಲಾಗುತ್ತಿದೆ. ಈ ಯೋಜನೆಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಚಾಲನೆ ನೀಡಲಿದ್ದಾರೆ. ಇವೆರಡನ್ನು ಹೊರತುಪಡಿಸಿ, ಇನ್ನೂ ಕೆಲವು ಯೋಜನೆಗಳನ್ನು ಮಂಗಳವಾರ ಪ್ರಾರಂಭಿಸಲಾಗುವುದು ಎಂದು ಮೂಲಗಳು ತಿಳಿಸಿವೆ.

ನಿಖಿಲ್ ಗೆಲುವಿಗಾಗಿ ಚಾಮುಂಡೇಶ್ವರಿಗೆ ವಿಶೇಷ ಪೂಜೆ



ಚನ್ನಪಟ್ಟಣ ಉಪಚುನಾವಣೆಯಲ್ಲಿ ಜೆಡಿಎಸ್–ಬಿಜೆಪಿ ಮೈತ್ರಿ ಅಭ್ಯರ್ಥಿಯಾಗಿ ಕಣಕ್ಕಿಳಿದಿರುವ ನಿಖಿಲ್ ಕುಮಾರಸ್ವಾಮಿ ಗೆಲುವು ಸಾಧಿಸಲಿ ಎಂಬ ಸಂಕಲ್ಪದೊಂದಿಗೆ ನಿಖಿಲ್ ಕುಮಾರಸ್ವಾಮಿ ಅಭಿಮಾನಿಗಳ ಬಳಗದ ವತಿಯಿಂದ ತಾಯಿ ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು. ಬಳಗದ ಅಧ್ಯಕ್ಷ ಪ್ರದೀಪ್ ಕೃಷ್ಣೇಗೌಡ , ಶ್ರೀನಿವಾಸ್, ಧರ್ಮಪಾಲ್ ಗೌಡ, ಮೂರ್ತಿ, ರಮೇಶ್, ಸುಬ್ರಹ್ಮಣ್ಯ, ನಾಗರಾಜು, ಭಾಸ್ಕರ, ಅಭಿಷೇಕ್, ಚಂದ್ರಶೇಖರ್, ವರುಣ ಜೆಡಿಎಸ್ ಅಧ್ಯಕ್ಷ ಎಂ.ಬಾಲಕೃಷ್ಣ ಚಿತ್ರದಲ್ಲಿದ್ದಾರೆ.

ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಪುನರ್ ಸರ್ವೆಗೆ ಒತ್ತಾಯ

ಮೈಸೂರು, ಅ.27(ಎಂಟಿವೈ)– ಸರ್ವೋಚ್ಛ ನ್ಯಾಯಾಲಯದ ಆದೇಶದಂತೆ ರಾಜ್ಯದಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ಪುನರ್ ಸರ್ವೆ ಆರಂಭಿಸುವಂತೆ ಕರ್ನಾಟಕ ರಾಜ್ಯ ನಗರಪಾಲಿಕೆ, ನಗರಸಭೆ, ಪುರಸಭೆಗಳ ಪೌರಕಾರ್ಮಿಕರ ಮಹಾಸಂಘದ ಜಿಲ್ಲಾಧ್ಯಕ್ಷ ಆರ್ಟಿಸ್ಟ್ ಎಸ್.ನಾಗರಾಜು ಒತ್ತಾಯಿಸಿದ್ದಾರೆ.


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಿಂದೆ ಮಲದ ಗುಂಡಿ, ಒಣ ಫಿಟ್ ಗುಂಡಿ ತೆಗೆಯುವ ಹಾಗೂ ಸ್ವಚ್ಛಗೊಳಿಸುವ ಅನೈರ್ಮಲ್ಯ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದ ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ಹಾಗೂ ಅವರ ಕುಟುಂಬಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ದೊರೆಯುವ ಸೌಲಭ್ಯ ಹಾಗೂ ಪುನರ್ವಸತಿ ಕಲ್ಪಿಸಲು ಸರ್ವೆ ಕಾರ್ಯ ಅಗತ್ಯವಾಗಿದ್ದು, ಈಗಾಗಲೇ ಸುಪ್ರೀಂ ಕೋರ್ಟ್ ಸರ್ವೆ ನಡೆಸುವಂತೆ ಆದೇಶಿಸಿದೆ. ಈ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿಯೂ ವಿಳಂಬ ಮಾಡದೇ ಈ ಕಾರ್ಯ ಆರಂಭಿಸಲು ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದರು.

ಮೈಸೂರು ಜಿಲ್ಲೆಯಲ್ಲಿ ಸಮೀಕ್ಷೆ ನಡೆಸಿದ ವೇಳೆ ಅಧಿಕಾರಿಗಳು ಕೆ.ಆರ್.ನಗರ, ಟಿ.ನರಸೀಪುರ, ನಂಜನಗೂಡು, ಪಿರಿಯಾಪಟ್ಟಣ, ಹೆಚ್.ಡಿ.ಕೋಟೆ, ಹುಣಸೂರು ತಾಲೂಕು ಹಾಗೂ ಮೈಸೂರು ನಗರ, ಗ್ರಾಮಾಂತರದ ಕೆಲ ಪ್ರದೇಶ ಗುರುತಿಸಿರಲಿಲ್ಲ. ಹೀಗಾಗಿ ಪುನರ್ ಸರ್ವೆಯಲ್ಲಿ ಮತ್ತೆ ಲೋಪವಾಗದಂತೆ ಕಟ್ಟೆಚ್ಚರ ವಹಿಸಬೇಕು. ಎಲ್ಲೆಡೆ ಇರುವ ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ಕುಟುಂಬಗಳನ್ನು ಗುರುತಿಸಿ, ಅವರಿಗೆ ನ್ಯಾಯ ಒದಗಿಸಲು ಮುಂದಾಗಬೇಕು ಎಂದು ಒತ್ತಾಯಿಸಿದರು.

ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ರಂಗೇಗೌಡ ಅವರು ಸರ್ವೆಗೆ ಸಮಿತಿಯನ್ನು ರಚಿಸಬೇಕು. ಇದರಿಂದಾಗಿ ದಲಿತ ಸಮುದಾಯಕ್ಕೆ ಸೇರಿದ ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ಕುಟುಂಬಗಳಿಗೆ ಆಗಿರುವ ಅನ್ಯಾಯ ಸರಿಪಡಿಸುವಂತೆ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಗಮನಹರಿಸಬೇಕು ಎಂದು ಕೋರಿದರು.

ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ನಗರಪಾಲಿಕೆ, ನಗರಸಭೆ, ಪುರಸಭೆಗಳ ಪೌರಕಾರ್ಮಿಕರ ಮಹಾಸಂಘದ ಮುಖಂಡರಾದ ಆರ್.ಶಿವಣ್ಣ, ಆರ್.ದಾಸು, ಆರ್.ರಾಮು, ಲಕ್ಷ್ಮಣ, ಎನ್.ಪಿ.ಗುರುದತ್ ಹಾಗೂ ಇನ್ನಿತರರು ಇದ್ದರು.

ಜನ್ಮದಿನದ ಅಭಿನಂದನೆ



ಮೈಸೂರು ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ಪ್ರಧಾನ ಅರ್ಚಕ ಶಶಿಶೇಖರ್ ದೀಕ್ಷಿತ್ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಅವರನ್ನು ಕನ್ನೆಗೌಡ ಕೊಪ್ಪಲಿನ ಮುಖಂಡರು ಅಭಿನಂದಿಸಿದರು. ಈ ವೇಳೆ ಶ್ರೀಮತಿ ಲತಾ ದೀಕ್ಷಿತ್, ಮುಖಂಡರಾದ ವಿಕ್ರಾಂತ್ ಪಿ.ದೇವೇಗೌಡ, ಬರಕೀ ಬಂದಿಗೌಡ, ಭೈರವ ಗ್ರೂಪ್ ಮಹಾದೇವ್, ಕೆ.ಜಿ.ಕೊಪ್ಪಲು ಚಾಮುಂಡೇಶ್ವರಿ ದೇವಸ್ಥಾನದ ಅಧ್ಯಕ್ಷ ಗಿರೀಶ್ ಡಿ.ಗೌಡ, ಬರಕೀ ಕೃಷ್ಣಪ್ಪ, ಕಲಾಮಂದಿರ ರಮೇಶ್ ಮತ್ತಿತರರಿದ್ದರು.

ಕೆಎಸ್‌ಟಿಎ ವಾರ್ಷಿಕ ಬಹುಮಾನಕ್ಕೆ ಅರ್ಜಿ

ಮೈಸೂರು,ಅ.27–ಕರ್ನಾಟಕ ವಿಜ್ಞಾನ–ತಂತ್ರಜ್ಞಾನ ಅಕಾಡೆಮಿ ವತಿಯಿಂದ 2024–25ನೇ ಸಾಲಿನ ಕೆಎಸ್‌ಟಿಎ ವಾರ್ಷಿಕ ಬಹುಮಾನ (ದಿವ್ಯಾಂಗ)ಕ್ಕೆ ಅರ್ಹರಿಂದ ಅರ್ಜಿ/ನಾಮನಿರ್ದೇಶನಗಳನ್ನು ಆಹ್ವಾನಿಸಲಾಗಿದೆ. ವಿಜ್ಞಾನ, ತಂತ್ರಜ್ಞಾನ, ಇಂಜಿನಿಯರಿಂಗ್ ಕೃಷಿ, ವೈದ್ಯಕೀಯ (ಸ್ಟ್ರೀಮ್) ವಿಷಯಗಳ ಸಂವಹನಕ್ಕೆ ದಿವ್ಯಾಂಗ ವ್ಯಕ್ತಿಯ ಅತ್ಯುತ್ತಮ ಪ್ರಯತ್ನಗಳನ್ನು ಗುರುತಿಸುವ ಉದ್ದೇಶದಿಂದ ಬಹುಮಾನ ನೀಡಲಾಗುತ್ತಿದ್ದು, ಅರ್ಜಿ/ನಾಮನಿರ್ದೇಶನವನ್ನು www.kstacademy.in ಮೂಲಕ ಜನವರಿ 28, 2025ರೊಳಗೆ ಸಲ್ಲಿಸಬೇಕು. ಆಯ್ಕೆಯಾದ ವ್ಯಕ್ತಿಗೆ ನಗದು ಬಹುಮಾನ, ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಗುತ್ತದೆ. ಮಾಹಿತಿಗೆ www.kstaca demy.in ಸಂಪರ್ಕಿಸಿ.

ಮಚ್ಚಂಡ ಸರಸು ಪೂವಯ್ಯ ನಿಧನ



ಮೈಸೂರು, ಅ.27–ಮೈಸೂರಿನ ನೇತಾಜಿ ನಗರ ನಿವಾಸಿ ದಿವಂಗತ ಮಚ್ಚಂಡ ಪೂವಯ್ಯ ಅವರ ಪತ್ನಿ ಮಚ್ಚಂಡ ಸರಸು ಪೂವಯ್ಯ (ತಾಮನೆ ನಾಟೋಳಂಡ) ಅವರು ಭಾನುವಾರ ನಿಧನರಾದರು. ಅವರಿಗೆ 78 ವರ್ಷ ವಯಸ್ಸಾಗಿತ್ತು. ಮೃತರು ಪುತ್ರಿ ಶಾಂಭವಿ ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದು, ಅಂತ್ಯಕ್ರಿಯೆ ನಾಳೆ (ಅ.28) ಬೆಳಗ್ಗೆ 10.30ಕ್ಕೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಡಾ.ರಾಜೇಂದ್ರ ಶ್ರೀಗಳ ಜಯಂತಿ ಆಚರಣೆ



ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ 109ನೇ ಜಯಂತಿ ನಡೆಯಿತು.

ಮೈಸೂರು,ಅ.27(ಎಸ್‌ಪಿಎನ್)– ಮೈಸೂರು ಸರಸ್ವತಿಪುರಂ ಜೆಎಸ್‌ಎಸ್ ಮಹಿಳಾ ಕಾಲೇಜು ಮಹಿಳಾ ವಸತಿ ನಿಲಯದಲ್ಲಿ ಶ್ರೀಶಿವರಾತ್ರೀಶ್ವರ ಮಹಿಳಾ ಸಮಾಜ ವತಿಯಿಂದ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ 109ನೇ ಜಯಂತಿ ಕಾರ್ಯಕ್ರಮ ಜರುಗಿತು.

ಕಾರ್ಯಕ್ರಮ ಉದ್ಘಾಟಿಸಿದ ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ ಮೈಸೂರು ಜಿಲ್ಲಾಧ್ಯಕ್ಷ ಹಿನಕಲ್ ಬಸವರಾಜು ಮಾತನಾಡಿ, ನಮ್ಮ ಮಕ್ಕಳಿಗೆ ಸುತ್ತೂರು ಮಠದ ಮಾರ್ಗದರ್ಶನದಂತೆ ಲಿಂಗಾಯತ ಪರಂಪರೆಯ ಸಂಸ್ಕೃತಿ–ಸಂಸ್ಕಾರ ನೀಡಿ ಉತ್ತಮ ಪ್ರಜೆಗಳಾಗಿ ರೂಪಿಸಲು ಪ್ರತಿಯೊಬ್ಬರು ಪಣ ತೊಡಬೇಕು ಎಂದು ಸಲಹೆ ನೀಡಿದರಲ್ಲದೆ, ಇತ್ತೀಚಿನ ದಿನಗಳಲ್ಲಿ ಯುವ ಪೀಳಿಗೆ ನಮ್ಮ ಸಂಸ್ಕೃತಿ–ಸಂಸ್ಕಾರಗಳಿಂದ ದೂರ ಉಳಿಯುತ್ತಿರುವುದು ಬೇಸರದ ಸಂಗತಿ ಎಂದು ಹೇಳಿದರು.

ಮೈಸೂರು ಭಾಗದಲ್ಲಿ ಶಿಕ್ಷಣ, ಆರೋಗ್ಯ, ಧಾರ್ಮಿಕ ಹಾಗೂ ಸಮಾಜ ಸೇವೆಗೆ ಸುತ್ತೂರು ಮಠ ತನ್ನದೇ ಆದ ಕೊಡುಗೆ ನೀಡುತ್ತಿದೆ. ಇದಕ್ಕೆ ನೂರಾರು ವರ್ಷಗಳ ಇತಿಹಾಸವಿದೆ. ಹಿಂದಿನ ಡಾ.ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ ದೂರದೃಷ್ಟಿಯ ಫಲವಾಗಿ ಸುತ್ತೂರು ಮಠ ಎಲ್ಲಾ ಕ್ಷೇತ್ರದಲ್ಲೂ ಹೆಮ್ಮರವಾಗಿ ಬೆಳೆದಿದೆ. ರಾಜೇಂದ್ರ ಶ್ರೀಗಳ ಮಾರ್ಗದರ್ಶನದಂತೆ ಈಗಿನ ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರು ಮುನ್ನಡೆಯುತ್ತಿರುವುದು ಸಂತೋಷ ಸಂಗತಿ ಎಂದರು.

ಡಾ.ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ ಕೊಡುಗೆಗಳ ಕುರಿತು ವಿಧಾನ ಪರಿಷತ್ ಮಾಜಿ ಸದಸ್ಯ ತೋಂಟದಾರ್ಯ ಮಾತನಾಡಿದರು. ಈ ವೇಳೆ ಹುಣಸೂರು ಗಾವಡಗೆರೆಯ ಗುರುಲಿಂಗ ಜಂಗಮ ದೇವರ ಮಠದ ಶ್ರೀ ನಟರಾಜ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ವೇದಿಕೆಯಲ್ಲಿ ಡಾ.ಎಂ.ಜಿ.ಆರ್.ಅರಸ್, ಕನ್ನಡ ಸಾಹಿತ್ಯ ಪರಿಷತ್ ಮೈಸೂರು ಘಟಕದ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕಸಾಪ ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್, ಶ್ರೀಶಿವರಾತ್ರೀಶ್ವರ ಮಹಿಳಾ ಸಮಾಜದ ಅಧ್ಯಕ್ಷೆ ರತ್ನ ಹಾಲಪ್ಪಗೌಡ ಇತರರಿದ್ದರು.

ನಲಪಾಡ್ ಬ್ರಿಗೇಡ್ ಅಧ್ಯಕ್ಷೆಯಿಂದ ಮಾಜಿ ಸಚಿವರಿಗೆ ಹನಿಟ್ರ್ಯಾಪ್

ಮೊಬೈಲ್‌ನಲ್ಲಿ ಸಿಕ್ತು 8 ಮಂದಿ ಖಾಸಗಿ ವಿಡಿಯೋ



ಬೆಂಗಳೂರು, ಅ.27– ಕಾಂಗ್ರೆಸ್‌ನ ಮಾಜಿ ಸಚಿವ ಮಾಲೀಕಯ್ಯ ಗುತ್ತೇದಾರ್ ಅವರಿಗೆ ವಾಟ್ಸಪ್ ಮೂಲಕ ವಿಡಿಯೊ ಕರೆಗಳನ್ನು ಮಾಡಿ ಅವುಗಳನ್ನು ರೆಕಾರ್ಡ್ ಮಾಡಿಕೊಂಡು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದ ನಲಪಾಡ್ ಬ್ರಿಗೇಡ್‌ನ ಕಲಬುರಗಿ ಘಟಕದ ಅಧ್ಯಕ್ಷೆ ಹಾಗೂ ಆಕೆಯ ಪತಿಯನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಈ ಆಡಿಯೋ–ವಿಡಿಯೋ ಬಹಿರಂಗಗೊಳಿಸದಿರಲು 20 ಲಕ್ಷ ರೂಗಳಿಗೆ ಬೇಡಿಕೆ ಇಟ್ಟಿದ್ದ ಮಂಜುಳಾ ಪಾಟೀಲ ಹಾಗೂ ಆಕೆಯ ಪತಿ ಶಿವರಾಜ್ ಪಾಟೀಲರನ್ನು ಬಂಧಿಸಲಾಗಿದೆ. ಮಂಜುಳಾ ಪಾಟೀಲ್ ಹನಿಟ್ರ್ಯಾಪ್ ಖೆಡ್ಡಾಗೆ ಮಾಜಿ ಸಚಿವರಷ್ಟೇ ಅಲ್ಲದೇ, ಇನ್ನು ಗಣ್ಯರನ್ನು ಖೆಡ್ಡಾಗೆ ಬೀಳಿಸಿರುವ ಮಾಹಿತಿ ಆಕೆಯ ಮೊಬೈಲ್‌ನಲ್ಲಿ ಪತ್ತೆಯಾಗಿದೆ. ಮಂಜುಳಾ ಹಲವು ವರ್ಷಗಳಿಂದ ಕಾಂಗ್ರೆಸ್‌ನಲ್ಲಿ ಸಕ್ರಿಯವಾಗಿದ್ದು, ಜಿಲ್ಲೆಯ ಮಹಮ್ಮದ್ ನಲಪಾಡ್ ಬ್ರಿಗೇಡ್ ಅಧ್ಯಕ್ಷೆಯಾಗಿದ್ದಳು.

ಹೀಗಾಗಿ ಮಾಲೀಕಯ್ಯಗೆ ಆಕೆಯ ಪರಿಚಯವಾಗಿತ್ತು. ಇಬ್ಬರೂ ಮೊಬೈಲ್‌ನಲ್ಲಿ ಸಲುಗೆಯಲ್ಲಿ ಮಾತನಾಡುತ್ತಿದ್ದರು. ಈ ನಡುವೆ ವಿಡಿಯೋ ಕಾಲ್‌ಗಳನ್ನು ರೆಕಾರ್ಡ್ ಮಾಡಿಕೊಂಡಿದ್ದ ಮಂಜುಳಾ, ಆ ಆಡಿಯೋ–ವಿಡಿಯೋಗಳನ್ನು ಮುಂದಿಟ್ಟು ಹಣಕ್ಕೆ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದರು.

ಡೀಲ್ ಕುದುರಿಸಲು ಬೆಂಗಳೂರಿಗೆ ಆಗಮಿಸಿದ್ದ ದಂಪತಿ ಮಾಲೀಕಯ್ಯ ಪುತ್ರ ರಿತೇಶ್ ಅವರನ್ನು ಭೇಟಿಯಾಗಿದ್ದರು. ಈ ವಿಚಾರವಾಗಿ ರಿತೇಶ್ ನೀಡಿದ ದೂರಿನ ಆಧಾರದ ಮೇಲೆ ಪೊಲೀಸರು ಆರೋಪಿಗಳನ್ನು ಬಂಧಿಸಿದರು. ನಂತರ ಆರೋಪಿಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದು ಕೋರ್ಟ್ ಎಂಟು ದಿನ ಪೊಲೀಸ್ ಕಸ್ಟಡಿಗೆ ನೀಡಿ ಆದೇಶಿಸಿದೆ.

ಬಂಧಿತ ಮಂಜುಳಾ ಪಾಟೀಲ್ ಬ್ಯಾಗ್‌ನಲ್ಲಿ 6 ಸ್ಮಾರ್ಟ್ ಫೋನ್ ಪತ್ತೆಯಾಗಿವೆ. ಈ ಆರು ಫೋನ್‌ಗಳನ್ನು ಸಿಸಿಬಿ ಪೊಲೀಸರು ವಶಕ್ಕೆ ಪಡೆದುಕೊಂಡು ಪರಿಶೀಲಿಸಿದಾಗ ಬರೋಬ್ಬರಿ ಎಂಟು ಜನರ ಖಾಸಗಿ ವಿಡಿಯೋಗಳು ಪತ್ತೆಯಾಗಿವೆ. ಮೊಬೈಲ್‌ನಲ್ಲಿ ಮಾಜಿ ಜಿಲ್ಲಾ ಪಂಚಾಯತಿ ಸದಸ್ಯ, ಪೊಲೀಸ್ ಅಧಿಕಾರಿ, ಪಿಡಬ್ಲ್ಯೂಡಿ ಅಧಿಕಾರಿ ಸೇರಿ 8 ಜನರ ವಿಡಿಯೋಗಳು ಪತ್ತೆಯಾಗಿದ್ದು, ಈ ಬಗ್ಗೆ ಸಿಸಿಬಿ ಪೊಲೀಸರು ಒಂದೊಂದಾಗಿ ಪರಿಶೀಲಿಸುತ್ತಿದ್ದಾರೆ.


ನಟ ದರ್ಶನ್ ಜಾಮೀನು ಭವಿಷ್ಯ ಇಂದು ನಿರ್ಧಾರ



ಬೆಂಗಳೂರು: ನಟ ದರ್ಶನ್ ಜಾಮೀನು ಅರ್ಜಿ ವಿಚಾರಣೆಗೆ ಸೋಮವಾರ (ಅ.28) ಹೈಕೋರ್ಟ್‌ನಲ್ಲಿ ನಡೆಯಲಿದ್ದು, ಜಾಮೀನು ಸಿಕ್ಕರೆ ನಟ ಬಿಡುಗಡೆಯಾಗಲಿದ್ದಾರೆ. ಇಲ್ಲವಾದರೆ, ಮತ್ತಷ್ಟು ದಿನ ಜೈಲುವಾಸ ಮುಂದುವರೆಸಬೇಕಿದೆ. ಕೊಲೆ ಕೇಸ್‌ನಲ್ಲಿ ಬಂಧನವಾಗಿರುವ ನಟ ದರ್ಶನ್ ಅವರಿಗೆ ಸೆಷನ್ಸ್ ನ್ಯಾಯಾಲಯ ಜಾಮೀನು ಮಂಜೂರು ನಿರಾಕರಿಸಿತ್ತು. ಈ ಹಿನ್ನೆಲೆಯಲ್ಲಿ ದರ್ಶನ್ ಪರ ವಕೀಲರು ಅನಾರೋಗ್ಯ ಕಾರಣ ನೀಡಿ ಹೈಕೋರ್ಟ್‌ಗೆ ತುರ್ತು ಜಾಮೀನು ಅರ್ಜಿ ಸಲ್ಲಿಸಿದ್ದರು. ಕಳೆದ ಸೋಮವಾರ ವಿಚಾರಣೆ ನಡೆಸಿದ ಹೈಕೋರ್ಟ್, ಬಳ್ಳಾರಿ ಜೈಲು ಅಧಿಕಾರಿಗಳಿಗೆ ನಟ ಆರೋಗ್ಯ ಮಾಹಿತಿ ನೀಡುವಂತೆ ಸೂಚನೆ ನೀಡಿತ್ತು. ಕೇಸ್‌ನ ವಿಚಾರಣೆಯನ್ನು ಅ.28ಕ್ಕೆ ಮುಂದೂಡಿತ್ತು.

ಈ ಹಿನ್ನೆಲೆ ದರ್ಶನ್ ಅವರ ವೈದ್ಯಕೀಯ ಪರೀಕ್ಷೆಯನ್ನು ಬಳ್ಳಾರಿಯ ಬೀಮ್ಸ್ ವೈದ್ಯರು ಬುಧವಾರ ನಡೆಸಿದ್ದರು. ವೈದ್ಯರು ಕಾರಾಗೃಹದ ಅಧಿಕಾರಿಗಳಿಗೆ ಗುರುವಾರ ವೈದ್ಯಕೀಯ ವರದಿ ಸಲ್ಲಿಸಿದ್ದಾರೆ. ವರದಿ ಆಧಾರದ ಮೇಲೆ ದರ್ಶನ್ ಅವರ ಚಿಕಿತ್ಸೆಗೆ ಸಂಬಂಧಿಸಿದಂತೆ ಜೈಲಿನ ಅಧಿಕಾರಿಗಳು ಮುಂದಿನ ಕ್ರಮ ಕೈಗೊಳ್ಳಲಿದ್ದಾರೆ. ಜತೆಗೆ ಕೋರ್ಟ್‌ಗೂ ನಟನ ಆರೋಗ್ಯದ ಬಗ್ಗೆ ವರದಿ ನೀಡಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

28.10.2024 ಸೋಮವಾರ, ಮಳೆ ನಕ್ಷತ್ರ: ಸ್ವಾತಿ, 24.10.2024ರಿಂದ 05.11.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಯುಜ ಮಾಸ, ಕೃಷ್ಣ ಪಕ್ಷ,
ತಿಥಿ: ಏಕಾದಶಿ, ನಕ್ಷತ್ರ: ಪುಬ್ಬ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಕುತ್ತಿಗೆ ಹಾಗೂ ಬೆನ್ನು ನೋವಿಗೆ ಅಕ್ಯೂಪಂಕ್ಚರ್ ಮತ್ತು ಯೋಗ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ರಿಂದ ಸಂಜೆ 4.30 ರವರೆಗೆ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.

■ **ಮೈಸೂರು ವಿಶ್ವವಿದ್ಯಾನಿಲಯ, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರ:** ವಿಶೇಷ ಉಪನ್ಯಾಸ, ಡಾ.ಬಿ.ಆರ್.ಅಂಬೇಡ್ಕರ್ ಪೀಠದ ಸಂದರ್ಶಕ ಪ್ರಾಧ್ಯಾಪಕ ಪ್ರೊ.ರಹಮತ್ ತರೀಕೆರೆ ಅವರಿಂದ 'ಕನ್ನಡ ಸಾಹಿತ್ಯದಲ್ಲಿ ಅಂಬೇಡ್ಕರ್ ರೂಪಕಗಳು' ವಿಷಯ ಕುರಿತು ವಿಶೇಷ ಉಪನ್ಯಾಸ, ಸ್ಥಳ: ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದ ಪ್ರೊ.ಬೆಟ್ರಿಕ್ಸ್ ಡಿಸೌಜ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಮಲೆ ಮಾದೇಶ್ವರ ಸೇವಾ ಸಂಸ್ಥೆ:** ಪವರ್ ಸ್ಟಾರ್ ಪುನೀತ್‌ರಾಜ್‌ಕುಮಾರ್ ಅವರ ಪುಣ್ಯಸ್ಮರಣೆ ಅಂಗವಾಗಿ ನೃತ್ಯ ಪ್ರದರ್ಶನ ಮತ್ತು ವಿವಿಧ ಕ್ಷೇತ್ರಗಳ ಸಾಧಕರಿಗೆ ಡಾ.ಪುನೀತ್ ರಾಜರತ್ನ ಪ್ರಶಸ್ತಿ ಪ್ರದಾನ ಸಮಾರಂಭ, ಮುಖ್ಯ ಅತಿಥಿಗಳು: ಶಾಸಕ ಕೆ.ಹರೀಶ್‌ಗೌಡ, ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ಸುಯೋಗ್ ಆಸ್ಪತ್ರೆ ಸಂಸ್ಥಾಪಕ ಡಾ.ಎಸ್.ಪಿ.ಯೋಗಣ್ಣ, ಸ್ಥಳ: ಗ್ರೀನ್ ಫುಡ್ ಕೋರ್ಟ್ ಸಭಾಂಗಣ, ಐಶ್ವರ್ಯ ಪೆಟ್ರೋಲ್ ಬಂಕ್ ಎದುರು, ಹುಣಸೂರು ರಸ್ತೆ, ಬೆಳಗ್ಗೆ 11 ಗಂಟೆಗೆ.

■ **ಶೇಷಾದ್ರಿಪುರಂ ಎಜುಕೇಷನಲ್ ಟ್ರಸ್ಟ್, ಶೇಷಾದ್ರಿಪುರಂ ಇನ್‌ಸ್ಟ್ಯೂಟ್ ಆಫ್ ಟೆಕ್ನಾಲಜಿ:** ಹೊಸ ವಿದ್ಯಾರ್ಥಿಗಳ ಸ್ವಾಗತ ದಿನ, ಅಧ್ಯಕ್ಷತೆ: ಶೇಷಾದ್ರಿಪುರಂ ಎಜುಕೇಷನಲ್ ಟ್ರಸ್ಟ್ ಅಧ್ಯಕ್ಷ ಎನ್.ಆರ್.ಪಂಡಿತ್ ಆರಾಧ್ಯ, ಮುಖ್ಯ ಅತಿಥಿ: ಶ್ರೀರಾಮಕೃಷ್ಣ ವಿದ್ಯಾಶಾಲಾದ ಸ್ವಾಮಿ ಯುಕ್ತೇಶಾನಂದಜಿ, ಸ್ಥಳ: ಶೇಷಾದ್ರಿಪುರಂ ಇನ್‌ಸ್ಟ್ಯೂಟ್ ಆಫ್ ಟೆಕ್ನಾಲಜಿ ಸಭಾಂಗಣ, ಕಡಕೊಳ ಕೈಗಾರಿಕಾ ಪ್ರದೇಶ, ಮಧ್ಯಾಹ್ನ 3 ಗಂಟೆಗೆ.

■ **ಬಿಇಎಂಎಲ್ ಎಸ್‌ಸಿ/ಎಸ್‌ಟಿ ಎಂಪ್ಲಾಯೀಸ್ ವೆಲ್ಫೇರ್ ಅಸೋಸಿಯೇಷನ್:** ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್‌ರವರ 133ನೇ ಹುಟ್ಟುಹಬ್ಬದ ಸಮಾರಂಭ, ಸ್ಥಳ: ಮಹಾರಾಜ ಶತಮಾನೋತ್ಸವ ಭವನ, ಸಂಜೆ 6 ಗಂಟೆಗೆ.

■ **ರಂಗಭೂಮಿ ಟ್ರಸ್ಟ್, ಕೊಡಗು :** 'ಸತ್ಯವನ್ನೇ ಹೇಳುತ್ತೇವೆ' ನಾಟಕ, ರಚನೆ/ನಿರ್ದೇಶನ: ಅಡ್ಡಂಡ ಕಾರ್ಯಪ್ಪ, ಸ್ಥಳ: ಕಿರುರಂಗಮಂದಿರ, ಕಲಾಮಂದಿರ ಆವರಣ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10–ಚಿಂತನ, ಡಾ.ನವೀನ್‌ಕುಮಾರ್ ಎ.ಜಿ., 6.15–ಗೀತಾರಾಧನ, 6.35 ಮತ್ತು ಸಂಜೆ 6.10: ಅಂಚೆ–ಅಂಕನ? ಆಕಾಶವಾಣಿ ಅಂಕಣ, ಪ್ರಸ್ತುತಿ: ಡಾ.ಅಮ್ಮಸಂದ್ರ ಸುರೇಶ ಹಾಗೂ ಎಂ.ಎನ್.ವಿಜಯಲಕ್ಷ್ಮಿ, ಪ್ರಾಯೋಜಕರು: ಭಾರತೀಯ ಅಂಚೆ, ಮೈಸೂರು ವಿಭಾಗ, 6.40–ಅರಿವಿನ ಶಿಖರ ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ರೋಹಿಣಿ ಸುಧಾಮ್ ಹಾಗೂ ಹಂಸಿನಿ. ಎಸ್.ಕುಮಾರ್, ವ್ಯಾಖ್ಯಾನ–ಡಾ.ಪ್ರದೀಪ್ ಕುಮಾರ್ ಹೆಬ್ರಿ, 6.50–ರೈತರಿಗೆ ಸಲಹೆ, 7.15–"ಭರವಸೆ ಹೊನಲು–ವೈದ್ಯರ ಕಿವಿಮಾತು" ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು –ಟ್ರಸ್ಟ್‌ವೆಲ್ ಆಸ್ಪತ್ರೆ, ಜೆ. ಸಿ. ರಸ್ತೆ, ಬೆಂಗಳೂರು, 8.30–ಹಾಸನಾಂಬೆ ದರ್ಶನ –ಪ್ರಾಯೋಜಿತ ಕಾರ್ಯಕ್ರಮ, ಹಾಸನಾಂಬೆ ದೇವಿಯ ಇತಿಹಾಸ, ದರ್ಶನಕ್ಕೆ ಸಂಬಂಧಿಸಿದ ವರ್ಷ ವರ್ಷದ ಬೆಳವಣಿಗೆಗಳು ಈ ಕುರಿತು ಮಾತನಾಡುತ್ತಾರೆ ಬೈರೋಜಿ ರಾವ್. ನಿರ್ಮಾಣ: ಡಾ.ವಿಜಯ್ ಅಂಗಡಿ, ನಿರ್ವಹಣೆ: ಬಿ.ವಿ.ಶ್ರೀಧರ್, ಪ್ರಾಯೋಜಕರು: ಜಿಲ್ಲಾಡಳಿತ, ಹಾಸನ, 8.45–ಕನ್ನಡ ಚಿತ್ರಗೀತೆಗಳು, 9.00 ನೆನಪಿನಂಗಳ (ಧ್ವನಿ ಭಂಡಾರದಿಂದ) ಹಿರಿಯ ಚಿತ್ರ ಕಲಾವಿದ ಬಸವಣ್ಣಾಚಾರ್ ಅವರೊಂದಿಗೆ ಜಿ.ಕೆ.ರವೀಂದ್ರಕುಮಾರ್ ಅವರು ನಡೆಸಿದ್ದ ಸಂವಾದ, 9.45–ಹಾಸನ ದರ್ಶನ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ಜಿಲ್ಲಾ ಪ್ರವಾಸೋದ್ಯಮ ಇಲಾಖೆ, ಹಾಸನ, 10.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಎಸ್.ಗಾಯತ್ರಿ–ಹಾಡುಗಾರಿಕೆ, 11.00–ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನೇರ ಫೋನ್ ಇನ್ ಕಾರ್ಯಕ್ರಮ–ಗೇಮ್ ಶೋ, ಪ್ರಸ್ತುತಿ: ದಿಗ್ವಿಜಯ್ ಬಿ., 12.05–ವನಿತಾ ವಿಹಾರ–1. ಪ್ರಕೃತಿ ಕುರಿತು ಸಂವೇದನಾ ಶೂನ್ಯರಾಗುತ್ತೆದ್ದೇವೆಯೇ? ವಿದ್ಯಾ ಶಿರಹಟ್ಟಿ ಅವರಿಂದ ಭಾಷಣ. 2. ಹಾವು ಬಂತಲೇ ಹಾವು –ರೂಪಾ ಜೋಶಿ ಅವರಿಂದ ಲಘು ಧಾಟಿಯ ಭಾಷಣ. ಪ್ರಸ್ತುತಿ–ಮಂಜುಳ ಪುರಾಣಿಕ. 12.30–ದೇವರನಾಮ, **ಮಧ್ಯಾಹ್ನ:** 12.45 –ನಮ್ಮ ಆರೋಗ್ಯ : "ಹೃದಯದ ಆರೋಗ್ಯ ಕಾಪಾಡಿಕೊಳ್ಳುವುದು ಹೇಗೆ?" ಕುರಿತು ಮೈಸೂರಿನ ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ಹೃದಯ ವಿಜ್ಞಾನ ವಿಭಾಗದ ನಿರ್ದೇಶಕರು ಹಾಗೂ ಹಿರಿಯ ಹೃದ್ರೋಗ ತಜ್ಞರಾದ ಡಾ.ಕೇಶವಮೂರ್ತಿ. ವಿ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ : ಬೇದ್ರೆ ಮಂಜುನಾಥ್, 1.00–ಚಿತ್ರಗೀತೆಗಳು, 1.20–ಭಾವಗೀತೆಗಳು–ಜಯಂತಿ. ವಿ. ಭಟ್, 2.40 ಚಿತ್ರಗೀತೆಗಳು, 3.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಚಿಟ್ಟಿಬಾಬು–ವೀಣಾವಾದನ, 4.00–ಮಹಿಳಾರಂಗ–"ನಾನು ನನ್ನ ಕಂಪನಿ" ಮನೆಯಲ್ಲಿ ಪೌಷ್ಟಿಕಯುಕ್ತ ಆಹಾರ ಪದಾರ್ಥಗಳನ್ನು ತಯಾರಿಸುವ ಉಷಾ ಶಾಸ್ತ್ರಿ ಅವರೊಂದಿಗೆ ಮಾತುಕತೆ. ಪ್ರಸ್ತುತಿ: ಸಹನ, 4.45–ಹಿಂದಿ ಪಾಠ–ಎಸ್.ಈಶ್ವರಭಟ್, 6.50–ಕೃಷಿರಂಗ: ರೈತಸಂತೆಗಳ ಮಹತ್ವ ಈ ಕುರಿತು ಮಂಡ್ಯದ ಆರ್.ಗೀತಾ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಎನ್.ಕೇಶವ ಮೂರ್ತಿ, 7.45 –ಕನ್ನಡದಲ್ಲಿ ಭಾಷಣ–ಚಿತ್ರದುರ್ಗದ ಜೋಗಿಮಟ್ಟಿ ಬಯಲುಸೀಮೆಯ ಊಟಿ ಮಾತನಾಡುತ್ತಾರೆ: ಎಂ.ಮೃತ್ಯುಂಜಯಪ್ಪ, 9.30–ಕರ್ನಾಟಕ ಶಾಸ್ತ್ರೀಯ ಸಂಗೀತ: ಕೆ.ವಿ. ನಾರಾಯಣಸ್ವಾಮಿ–ಹಾಡುಗಾರಿಕೆ, 10.00–ನಾಟಕ–ನನ್ನ ಮುನ್ನೂ ಮೂಲ ಹಿಂದಿ–ಕೃಷ್ಣಚಂದರ್, ಕನ್ನಡಕ್ಕೆ–ಪ್ರೊ.ಧರಣೇಂದ್ರ ಕುರಕುರಿ ನಿರ್ದೇಶನ–ಸುರೇಖಾ ಸುರೇಶ, 10.30–ಸವಿನೆನಪು

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

45

ಅಕ್ಟೋಬರ್ 28 ಸೋಮವಾರ 2024

ಸಂಪುಟ: 45 | ಸಂಚಿಕೆ: 192 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಮುಡಾದ ಮತ್ತೊಂದು ಬ್ರಹ್ಮಾಂಡ ಭ್ರಷ್ಟಾಚಾರ ಬಯಲು

ಸೆಟ್ಲ್‌ಮೆಂಟ್ ಡೀಡ್ ಹೆಸರಿನಲ್ಲಿ ಮುದ್ರಾಂಕ ಶುಲ್ಕ, ಆದಾಯ ತೆರಿಗೆ ವಂಚನೆ

ವಿಡಿಯೋ, ದಾಖಲಾತಿ ಸಮೇತ ಆರ್‌ಟಿಐ ಕಾರ್ಯಕರ್ತ ಗಂಗರಾಜು ಬಿಡುಗಡೆ

ಮೈಸೂರು, ಅ.27(ಬಿಎಲ್‌ಯು)– ಮುಡಾದ ಬ್ರಹ್ಮಾಂಡ ಭ್ರಷ್ಟಾಚಾರ ಒಂದೊಂದೆ ಬಯಲಾಗುತ್ತಿದೆ. ಸೆಟ್ಲ್‌ಮೆಂಟ್ ಡೀಡ್ ಹೆಸರಿನಲ್ಲಿ ಮುಡಾದ ನಿವೇಶನ ಮಾರಾಟ ಮಾಡಿ ಮುದ್ರಾಂಕ ನೋಂದಣಿ ಶುಲ್ಕ ಹಾಗೂ ಆದಾಯ ತೆರಿಗೆ ಪಾವತಿಸದೆ ವಂಚನೆ ಮಾಡಿರುವ ಹಗರಣವನ್ನು ಆರ್‌ಟಿಐ ಕಾರ್ಯಕರ್ತ ಗಂಗರಾಜು ದಾಖಲಾತಿ ಸಮೇತ ಬಹಿರಂಗಗೊಳಿಸಿದ್ದಾರೆ.

ಈ ಸಂಬಂಧ ಸೆಟ್ಲ್‌ಮೆಂಟ್ ಡೀಡ್ ಹೆಸರಿನಲ್ಲಿ ಲಕ್ಷಾಂತರ ರೂಪಾಯಿ ಪಡೆಯುತ್ತಿರುವ ಹಣದ ವ್ಯವಹಾರದ ವೀಡಿಯೋವೊಂದನ್ನು ಕೂಡ ಗಂಗರಾಜು ಬಿಡುಗಡೆ ಮಾಡಿದ್ದಾರೆ. ಮುಡಾದಿಂದ ಶೇಕಡ 50:50 ಅನುಪಾತದಿಂದ ಪಡೆದ ಮೈಸೂರಿನ ವಿಜಯನಗರ 4ನೇ ಹಂತ 2ನೇ ಫೇಸ್‌ನಲ್ಲಿರುವ 60x40 ಅಳತೆಯ ನಿವೇಶನವನ್ನು ಕಾರ್ತಿಕ ಬಡಾವಣೆಯ ಡೆವಲಪರ್ ಎನ್.ಮಂಜುನಾಥ್ ಎಂಬಾತ ಎಸ್.ಶಿವಣ್ಣ ಎಂಬುವರಿಗೆ ಸೆಟ್ಲ್‌ಮೆಂಟ್ ಡೀಡ್ ಹೆಸರಿನಲ್ಲಿ ಮಾರಾಟ ಮಾಡಿದ್ದಾರೆ ಎಂದು ಹೇಳಿದ್ದಾರೆ. ಈ ವ್ಯವಹಾರದ ಸಮಯದಲ್ಲಿ ಮಂಜುನಾಥ್ ಸಿಎ ನಿವೇಶನ ಖರೀದಿದಾರನಿಂದ 25 ಲಕ್ಷ ರೂಪಾಯಿ ಪಡೆದಿದ್ದಾರೆ ಎಂದು ಆರೋಪಿಸಿರುವ ಗಂಗರಾಜು, ಇದರ ವಿಡಿಯೋವನ್ನು ಕೂಡ ಬಿಡುಗಡೆ ಮಾಡಿದ್ದಾರೆ.

ಸೆಟ್ಲ್‌ಮೆಂಟ್ ಡೀಡ್‌ನಲ್ಲಿ ದಾಖಲಾತಿಯಲ್ಲಿ ನಿವೇಶನವನ್ನು ಎಷ್ಟು ಮೊತ್ತಕ್ಕೆ ಮಾರಾಟ ಮಾಡಲಾಗಿದೆ ಎಂದು ನಮೂದಿಸಿಲ್ಲ. ಉಪ ನೋಂದಣಾಧಿಕಾರಿ ಕಚೇರಿಗೆ ನೋಂದಣಿ ಶುಲ್ಕ ಮಾತ್ರ ಪಾವತಿಸಿದ್ದಾರೆ. ಆದರೆ ನಿವೇಶನದ ಖರೀದಿ ಮೊತ್ತ ನಮೂದಿಸದೆ ಮುದ್ರಾಂಕ ಇಲಾಖೆಗೆ ವಂಚನೆ ಮಾಡಿದ್ದಾರೆ. ಜೊತೆಗೆ ಆದಾಯ ತೆರಿಗೆ ಕೂಡ ಪಾವತಿ ಮಾಡದೆ ಸರ್ಕಾರಕ್ಕೆ ವಂಚನೆ ಮಾಡಿದ್ದಾರೆ ಎಂದು ಆಪಾದಿಸಿದ್ದಾರೆ.


ಗಂಗರಾಜು

ಇಲ್ಲಿ ವಾಸ್ತವವಾಗಿ ಹಣದ ವ್ಯವಹಾರ ನಡೆದಿದ್ದರೂ ಸೆಟ್ಲ್‌ಮೆಂಟ್ ಡೀಡ್ ಮಾಡಿಕೊಂಡು ಮುದ್ರಾಂಕ ಇಲಾಖೆ ಹಾಗೂ ಆದಾಯ ತೆರಿಗೆ ಇಲಾಖೆಗೆ ವಂಚನೆ ಮಾಡಿದ್ದಾರೆ ಎಂದು ಪುನರುಚ್ಚರಿಸಿರುವ ಗಂಗರಾಜು, ಇಂತಹ ನೂರಾರು ಪ್ರಕರಣ ಮುಡಾದಲ್ಲಿ ನಡೆದಿದೆ. ಇದಕ್ಕೆ ಇದು ಸ್ಪಷ್ಟ ಉದಾಹರಣೆಯಾಗಿದೆ ಎಂದು ದೂರಿದ್ದಾರೆ.

ದಾಖಲಾತಿ ಸಮೇತ ವಿಚಾರಣೆಯಲ್ಲಿ ಭಾಗವಹಿಸುವಂತೆ ಇಡಿ (ಜಾರಿ ನಿರ್ದೇಶನಾಲಯ) ನನಗೆ ನೋಟಿಸ್ ನೀಡಿದೆ. ಈ ವಿಚಾರ ಸೇರಿದಂತೆ ಮುಡಾದಲ್ಲಿ ನಡೆದಿರುವ ಹಗರಣಗಳ ಬಗ್ಗೆ ದಾಖಲಾತಿ ಸಮೇತ ಹೇಳಿಕೆ ದಾಖಲಿಸುತ್ತೇನೆ ಎಂದು ಅವರು ತಿಳಿಸಿದ್ದಾರೆ. ಮುಡಾ ಹಗರಣದ ಬಗ್ಗೆ ಈಗ ಇಡಿ ತನಿಖೆ ನಡೆಸುತ್ತಿರುವಂತೆ ಸಿಬಿಐ ಕೂಡ ತನಿಖೆ ನಡೆಸಿದರೆ ಬಹಳಷ್ಟು ಹಗರಣಗಳು ಬಯಲಾಗಲಿವೆ ಎಂದು ಗಂಗರಾಜು ಅಭಿಪ್ರಾಯಪಟ್ಟಿದ್ದಾರೆ.

ಮುದ್ರಾಂಕ ಶುಲ್ಕ ಹಾಗೂ ಆದಾಯ ತೆರಿಗೆ ಪಾವತಿಯಿಂದ ತಪ್ಪಿಸಿಕೊಳ್ಳದಂತೆ ಸರ್ಕಾರ ಹಲವು ರೀತಿಯ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದೆ. ಆದರೆ ಬಹಳಷ್ಟು ನಯವಂಚಕರು ಸೆಟ್ಲ್‌ಮೆಂಟ್ ಡೀಡ್ ಹೆಸರಿನಲ್ಲಿ ಮುದ್ರಾಂಕ ಶುಲ್ಕ ಹಾಗೂ ಆದಾಯ ತೆರಿಗೆ ಪಾವತಿಸದೆ ಸರ್ಕಾರದ ಕಣ್ಣಿಗೆ ಮಣ್ಣೆರಚುತ್ತಿದ್ದಾರೆ. ಈ ಮೂಲಕ ಸರ್ಕಾರ ಚಾಪೆ ಕೆಳಗೆ ನುಗ್ಗಿದರೆ, ವಂಚಕರು ರಂಗೋಲಿ ಕೆಳಗೆ ನುಗ್ಗುತ್ತಿದ್ದಾರೆ. ಮುಡಾದಲ್ಲಿ ನಡೆದಿರುವ ಇಂತಹ ಹಲವು ಹಗರಣಗಳ ಬಗ್ಗೆ ಇಡಿ ಸಮಗ್ರ ತನಿಖೆ ನಡೆಸುತ್ತಿದ್ದು ಇದು ಇನ್ನು ಯಾರ್ಯಾರ ಕೊರಳಿಗೆ ಸುತ್ತಿಕೊಳ್ಳುತ್ತದೆ ಎಂದು ನೋಡಬೇಕಿದೆ.

ಭಾರತದಲ್ಲಿ ಇನ್ಮುಂದೆ — ನಗದು ವ್ಯವಹಾರ ಇರಲ್ಲ


ಮಹತ್ವದ ಸುಳಿವು ಕೊಟ್ಟ ಆರ್‌ಬಿಐ ಗವರ್ನರ್



- ಆರ್‌ಬಿಐ ನೋಟು ಪ್ರಿಂಟ್ ಮಾಡುವ ಪ್ರಮೇಯವೂ ಇಲ್ಲ
- ಮುಂದೆ ಏನಿದ್ದರೂ ಡಿಜಿಟಲ್ ಕರೆನ್ಸಿಯಲ್ಲಿ ಮಾತ್ರ ವ್ಯವಹಾರ

ನವದೆಹಲಿ, ಅ.27– ಭಾರತ ಜಾಗತಿಕ ಮಟ್ಟದಲ್ಲಿ ಅತೀದೊಡ್ಡ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮುತ್ತಿದೆ. ಭಾರತದಲ್ಲಿ ತೆಗೆದುಕೊಂಡ ಕೆಲ ಮಹತ್ವದ ನಿರ್ಧಾರಗಳು ಜಾಗತಿಕ ಮಟ್ಟದಲ್ಲೇ ಭಾರಿ ಸಂಚಲನ ಸೃಷ್ಟಿಸಿದೆ. ಈ ಪೈಕಿ ನರೇಂದ್ರ ಮೋದಿ ಸರ್ಕಾರ ತಂದ ಡಿಜಿಟಲ್ ಇಂಡಿಯಾ ಅತ್ಯಂತ ಮುಖ್ಯ. ಇದೀಗ ಭಾರತ ಮತ್ತೊಂದು ಹಂತದ ಬದಲಾವಣೆಗೆ ತೆರೆದುಕೊಳ್ಳುತ್ತಿದೆ. ಇದು ಜಗತ್ತನ್ನೇ ಬೆರಗಾಗಿಸುವ ಹಾಗೂ ಅನುಸರಿಸುವ ಬದಲಾವಣೆ. ಭಾರತದಲ್ಲಿ ಇನ್ನು ನಗದು ವ್ಯವಹಾರ ಇರುವುದಿಲ್ಲ. ಆರ್‌ಬಿಐ ನೋಟು ಪ್ರಿಂಟ್ ಮಾಡುವ ಪ್ರಮೇಯವೂ ಇಲ್ಲ. ಯಾರ ಬಳಿಯೂ ನಗದು ಇರಲ್ಲ, ವ್ಯವಹಾರವೂ ಇರುವುದಿಲ್ಲ. ಏನಿದ್ದರೂ ಡಿಜಿಟಲ್ ಕರೆನ್ಸಿ ಮಾತ್ರ. ಈ ಮಾತನ್ನು ಭಾರತದ ರಿಸರ್ವ್ ಬ್ಯಾಂಕ್ ಗವರ್ನರ್ ಶಕ್ತಿಕಾಂತ ದಾಸ್ ಹೇಳಿದ್ದಾರೆ.

ಕೋಲ್ಕತಾದಲ್ಲಿ ನಡೆದ ವಾರ್ಷಿಕ ಜಿ30 ಅಂತಾರಾಷ್ಟ್ರೀಯ ಬ್ಯಾಂಕಿಂಗ್ ಸೆಮಿನಾರ್‌ನಲ್ಲಿ ಮಾತನಾಡಿದ ಶಕ್ತಿಕಾಂತ ದಾಸ್, ಈ ಸ್ಫೋಟಕ ಮಾಹಿತಿ ನೀಡಿದ್ದಾರೆ. ಭಾರತದಲ್ಲಿ ಇನ್ಮುಂದೆ ನಗದು ಹಣ ಇರುವುದಿಲ್ಲ, ನಗದು ವಹಿವಾಟುಗಳು ಇರುವುದಿಲ್ಲ. ಎಲ್ಲವೂ ಡಿಜಿಟಲ್ ಕರೆನ್ಸಿ ಎಂದಿದ್ದಾರೆ. ನಾವು ಭವಿಷ್ಯದ ಡಿಜಿಟಲ್ ಕರೆನ್ಸಿಯಿಂದ ಪಲಾಯನ ಮಾಡಲು ಸಾಧ್ಯವಿಲ್ಲ.


ಶಕ್ತಿಕಾಂತ ದಾಸ್

ಸೆಂಟ್ರಲ್ ಬ್ಯಾಂಕ್ ಡಿಜಿಟಲ್ ಕರೆನ್ಸಿಯಿಂದ ಅಂತಾರಾಷ್ಟ್ರೀಯ ಪಾವತಿಗಳು ಅತ್ಯಂತ ಸುಲಭವಾಗಿ ನಡೆಯಲಿದೆ. ಜೊತೆಗೆ ಈ ಪಾವತಿ ಹೆಚ್ಚು ಪರಿಣಾಮಕಾರಿಯಾಗಿದೆ. ವೆಚ್ಚ ಕಡಿಮೆ, ಹಣ ವರ್ಗಾವಣೆ, ವ್ಯವಹಾರದಲ್ಲಿ ವೆಚ್ಚಗಳು ಇರುವುದಿಲ್ಲ. ನೇರವಾಗಿ ಹಾಗೂ ತ್ವರಿತವಾಗಿ ಪಾವತಿ ಮಾಡಲು ಸಾಧ್ಯವಾಗುತ್ತದೆ ಎಂದು ಶಕ್ತಿಕಾಂತ ದಾಸ್ ಹೇಳಿದ್ದಾರೆ. ಇತರ ದೇಶ ಕೂಡ ಡಿಜಿಟಲ್ ಕರೆನ್ಸಿ ಅಳವಡಿಸಿಕೊಂಡರೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಯಾವುದೇ ಸಮಸ್ಯೆಗಳು ಉದ್ಭವವಾಗುವುದಿಲ್ಲ. ಭಾರತ ಸಮರ್ಥವಾಗಿ ಬಳಸಿಕೊಳ್ಳುತ್ತಿದೆ. ಇದು ಅಭಿವೃದ್ಧಿ ಹೊಂದುತ್ತಿರುವ ತಂತ್ರಜ್ಞಾನವಾಗಿರುವ ಕಾರಣ ಇದು ಭವಿಷ್ಯವಾಗಲಿದೆ ಎಂದು ಶಕ್ತಿಕಾಂತ್‌ದಾಸ್ ಹೇಳಿದ್ದಾರೆ.

ಭಾರತದಲ್ಲಿ ಹಣದ ವ್ಯವಹಾರ ಇದೀಗ ಯುಪಿಐ ಮೂಲಕವೇ ಹೆಚ್ಚಾಗಿ ನಡೆಯುತ್ತಿದೆ. ವರ್ಗಾವಣೆ, ಖರೀದಿ ಸೇರಿದಂತೆ ಎಲ್ಲಾ ವಹಿವಾಟಗಳು ಸುಲಭವಾಗಿ ಯುಪಿಐ ಮೂಲಕ ನಡೆಯುತ್ತಿದೆ. ಈ ಡಿಜಿಟಲ್ ಟ್ರಾನ್ಸಾಕ್ಷನ್ ಸಂಪೂರ್ಣವಾಗಿ ಭಾರತ ಆವರಿಸಿಕೊಳ್ಳಲಿದೆ. ಈ ಡಿಜಿಟಲ್ ವಹಿವಾಟಿಗೆ ಮತ್ತಷ್ಟು ಸುರಕ್ಷತೆ ಒದಗಿಸಲು ಎಲ್ಲಾ ತಯಾರಿಗಳು ನಡೆಯುತ್ತಿವೆ. ಭಾರತದಲ್ಲಿ ಸದ್ಯ 1 ಬಿಲಿಯನ್ ■9ನೇ ಪುಟಕ್ಕೆ

ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಮುಡಾ ಹಗರಣ

ಇಡಿ ತನಿಖೆ ಮತ್ತಷ್ಟು ಚುರುಕು, ಇಂದು ನಾಲ್ವರು ಮುಡಾ ಅಧಿಕಾರಿಗಳ ವಿಚಾರಣೆ

ಮೈಸೂರು, ಅ.27(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಮುಡಾ ಹಗರಣ ತನಿಖೆಯನ್ನು ಇಡಿ (ಜಾರಿ ನಿರ್ದೇಶನಾಲಯ) ಮತ್ತಷ್ಟು ಚುರುಕುಗೊಳಿಸಿದ್ದು, ನಾಳೆ (ಅ.28) ಮುಡಾದ ಹಲವು ಅಧಿಕಾರಿಗಳನ್ನು ವಿಚಾರಣೆಗೊಳಪಡಿಸಲಿದೆ.



ಈ ಮೂಲಕ ಇಡಿ ನಡೆಸುತ್ತಿರುವ ತಂತ್ರಜ್ಞಾನ ಆಧಾರಿತ ವೈಜ್ಞಾನಿಕ ಹಾಗೂ ಹಲವು ರೀತಿಯ ತನಿಖೆಯ ಆಯಾಮಗಳು ತೀವ್ರ ಕುತೂಹಲ ಮೂಡಿಸಿದೆ. ಇಡಿ ಸಹಾಯಕ ನಿರ್ದೇಶಕ ಮುರುಳಿ ಕಣ್ಣನ್ ನೇತೃತ್ವದ ತಂಡ ತನಿಖೆ ನಡೆಸುತ್ತಿದ್ದು, ಈಗಾಗಲೇ ಮುಡಾದ ಹಲವು ಅಧಿಕಾರಿಗಳಿಗೆ ಸಮನ್ಸ್ ನೀಡಿದೆ. ಬೆಂಗಳೂರಿನ ಶಾಂತಿನಗರದಲ್ಲಿರುವ ಇಡಿ ಕಚೇರಿಯಲ್ಲಿ ನಿನ್ನೆ ನಡೆದ ವಿಚಾರಣೆಯಲ್ಲಿ ಮುಡಾದ ನಾಲ್ವರು ಅಧಿಕಾರಿಗಳು ಭಾಗಿಯಾಗಿದ್ದರು. ಮೈಸೂರಿನ ವಿಜಯನಗರದಲ್ಲಿ ಸಿದ್ದರಾಮಯ್ಯ ಪತ್ನಿ ಪಾರ್ವತಿ ಅವರು ಶೇಕಡ 50:50 ಅನುಪಾತದಲ್ಲಿ 14 ನಿವೇಶನ ಪಡೆದಿರುವ ಬಗ್ಗೆ ಇಡಿ ಹಲವು ಅಧಿಕಾರಿಗಳನ್ನು ವಿಚಾರಣೆಗೊಳಪಡಿಸಿ ಹೇಳಿಕೆಗಳನ್ನು ದಾಖಲಿಸುತ್ತಿದೆ.


ಮುಡಾದ ವಿಶೇಷ ಭೂಸ್ವಾಧೀನಾಧಿಕಾರಿ ಕಚೇರಿಯ ವ್ಯವಸ್ಥಾಪಕಿ ಶೃತಿ, ಮುಡಾ ಆಯುಕ್ತ ಜಿ.ಟಿ.ದಿನೇಶ್‌ಕುಮಾರ್ ಅವರ ಸ್ಟೆನೋಗ್ರಾಫರ್ ಚಂದ್ರು, ವಿಶೇಷ ತಹಸೀಲ್ದಾರ್ ರಾಜಶೇಖರ್ ■9ನೇ ಪುಟಕ್ಕೆ

ಸಿಐಡಿ ತನಿಖೆ ಪ್ರಕರಣಗಳ ವಿಚಾರಣೆಗೆ ವಿಶೇಷ ಕೋರ್ಟ್ ರಚನೆ

ಬೆಂಗಳೂರು, ಅ.27– ತಾನು ತನಿಖೆ ನಡೆಸುವ ಪ್ರಕರಣಗಳ ವಿಚಾರಣೆಗೆ ಜನಪ್ರತಿನಿಧಿಗಳ ನ್ಯಾಯಾಲಯ ಮಾದರಿ ವಿಶೇಷ ನ್ಯಾಯಾಲಯ ಸ್ಥಾಪಿಸುವಂತೆ ರಾಜ್ಯ ಸರ್ಕಾರಕ್ಕೆ ಅಪರಾಧ ತನಿಖಾ ಇಲಾಖೆ (ಸಿಐಡಿ) ಪ್ರಸ್ತಾವನೆ ಸಲ್ಲಿಸಿದೆ. ಈ ಪ್ರಸ್ತಾವನೆಗೆ ಗೃಹ ಇಲಾಖೆ ಕೂಡ ಸಕಾರಾತ್ಮಕವಾಗಿ ಸ್ಪಂದಿಸಿದ್ದು, ಕಾನೂನು ಇಲಾಖೆ ಜತೆ ಸಮಾಲೋಚಿಸಿ ವಿಶೇಷ ನ್ಯಾಯಾಲಯ ಸ್ಥಾಪನೆಗೆ ನಿರ್ಧಾರವನ್ನು ಸರ್ಕಾರ ಪ್ರಕಟಿಸಲಿದೆ ಎಂದು ತಿಳಿದು ಬಂದಿದೆ. ಪ್ರಸ್ತುತ ಅಪರಾಧ ಕೃತ್ಯಗಳ ಸಂಬಂಧ ಎಫ್‌ಐಆರ್ ದಾಖಲಾಗುವ ವ್ಯಾಪ್ತಿಯ ನ್ಯಾಯಾಲಯಕ್ಕೆ ಸಿಐಡಿ ಆರೋಪ ಪಟ್ಟಿ ಸಲ್ಲಿಸುತ್ತಿದ್ದು, ಆ ನ್ಯಾಯಾಲದಲ್ಲಿ ಪ್ರಕರಣಗಳ ವಿಚಾರಣೆ ನಡೆಯುತ್ತದೆ. ಹೀಗಾಗಿ ಬೆಂಗಳೂರಿನಲ್ಲೇ ಸಿಐಡಿ ವಿಶೇಷ ನ್ಯಾಯಾಲಯ ಸ್ಥಾಪಿಸುವಂತೆ ಸರ್ಕಾರಕ್ಕೆ ಸಿಐಡಿ ಡಿಜಿಪಿ ಡಾ. ಎಂ.ಎ.ಸಲೀಂ ಮನವಿ ಮಾಡಿದ್ದಾರೆ.

ಸಿಐಡಿ ಕೇಂದ್ರ ಸ್ಥಾನವು ಬೆಂಗಳೂರಿನಲ್ಲಿದೆ. ರಾಜ್ಯದ ವಿವಿಧೆಡೆ ವರದಿಯಾಗುವ ಬಹುಮುಖ್ಯ ಪ್ರಕರಣಗಳು ತನಿಖೆಗೆ ಸಿಐಡಿಗೆ ವರ್ಗಾವಣೆಯಾಗುತ್ತದೆ. ಆದರೆ ತನಿಖೆ ಪೂರ್ಣಗೊಳಿಸಿ ಆರೋಪ ಪಟ್ಟಿ ಸಲ್ಲಿಸಿದ ಬಳಿಕ ನ್ಯಾಯಾಲಯದ ವಿಚಾರಣೆಗೆ ಜಿಲ್ಲೆಗಳಿಗೆ ಪ್ರತಿ ಬಾರಿ ಸಿಐಡಿ ಅಧಿಕಾರಿಗಳು ತೆರಳಬೇಕಾಗುತ್ತದೆ. ಇದರಿಂದ ಅಧಿಕಾರಿಗಳಿಗೆ ಪ್ರಯಾಣ ಮಾತ್ರವಲ್ಲದೆ ಪ್ರಕರಣಗಳ ಮೇಲೆ ನಿಗಾವಹಿಸಲು ಕೂಡ ಅನಾನುಕೂಲವಾಗುತ್ತದೆ. ಈ ಸಮಸ್ಯೆ ಹಿನ್ನೆಲೆಯಲ್ಲಿ ಸಿಐಬಿ ಮಾದರಿ ವಿಶೇಷ ನ್ಯಾಯಾಲಯ ಸ್ಥಾಪಿಸುವಂತೆ ಡಿಜಿಪಿ ಕೋರಿದ್ದಾರೆ. ಜನಪ್ರತಿನಿಧಿಗಳ ವಿರುದ್ಧ ರಾಜ್ಯದಲ್ಲಿ ದಾಖಲಾಗುವ ಪ್ರಕರಣಗಳನ್ನು ಬೆಂಗಳೂರಿನ ವಿಶೇಷ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದೆ. ಇದರಿಂದ ಆ ಪ್ರಕರಣಗಳ ತ್ವರಿತ ಇತ್ಯರ್ಥಕ್ಕೂ ಅನುಕೂಲವಾಗಿದೆ ಎಂದು ಅಧಿಕಾರಿಗಳು ಹೇಳುತ್ತಾರೆ.

ಶ್ರೀ ರವಿಶಂಕರ್ ಗುರೂಜಿಗೆ ರಿಪಬ್ಲಿಕ್ ಆಫ್ ಫಿಜಿಯಿಂದ ಅತ್ಯುನ್ನತ ಪೌರ ಪ್ರಶಸ್ತಿ



ಬೆಂಗಳೂರು, ಅ.27– ದಕ್ಷಿಣ ಪೆಸಿಫಿಕ್ ರಾಷ್ಟ್ರವಾದ ಫಿಜಿಯು ತನ್ನ ಅತ್ಯುನ್ನತ ಪೌರ ಪ್ರಶಸ್ತಿಯನ್ನು ಜಾಗತಿಕ ಆಧ್ಯಾತ್ಮಿಕ ಗುರುಗಳಾದ, ಮಾನವತಾವಾದಿ ನಾಯಕರಾದ ಗುರುದೇವ್ ಶ್ರೀ ರವಿಶಂಕರ್ ಗುರೂಜಿಗೆ ನೀಡಿ, ಅವರನ್ನು ಸನ್ಮಾನಿಸಿತು.

ಮಾನವ ಸ್ಫೂರ್ತಿಯನ್ನು ನಿರಂತರವಾಗಿ ಎತ್ತಿ ಹಿಡಿಯಲು ಅವರು ಮಾಡುತ್ತಿರುವ ಕಾರ್ಯಕ್ಕಾಗಿ, ವಿವಿಧ ಸಮುದಾಯಗಳನ್ನು ಶಾಂತಿ ಮತ್ತು ಸಾಮರಸ್ಯದ ಮೂಲಕ ಒಂದಾಗಿ ತರುವ ಅವರ ಕಾರ್ಯಕ್ಕಾಗಿ ಅವರಿಗೆ ಈ ಪ್ರಶಸ್ತಿಯನ್ನು ನೀಡಲಾಯಿತು. ಗುರುದೇವರಿಗೆ 'ಹಾನರರಿ ಆಫಿಸರ್ ಆಫ್ ದಿ ಆರ್ಡರ್ ಆಫ್ ಫಿಜಿ' ಬಿರುದನ್ನು ಫಿಜಿ ರಿಪಬ್ಲಿಕ್‌ನ ಅಧ್ಯಕ್ಷ ■9ನೇ ಪುಟಕ್ಕೆ

2 ಸಲ ಸೋತ ನನ್ನ ಮಗನನ್ನು ಈ ಬಾರಿ ಗೆಲ್ಲಿಸುವಂತೆ ಹಾಸನಾಂಬೆಯಲ್ಲಿ ಬೇಡಿಕೊಂಡಿದ್ದೇನೆ

ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ


ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ, ಕುಟುಂಬ ಸಮೇತ ಹಾಸನಾಂಬೆಯ ದರ್ಶನ ಪಡೆದರು.

ಹಾಸನ, ಅ.27– ಈ ಬಾರಿ ನನ್ನ ಮಗ ಚುನಾವಣೆಗೆ ನಿಂತಿದ್ದಾನೆ. ಕೆಲ ಕಾರಣಗಳಿಂದ ಕಳೆದ ಎರಡು ಬಾರಿ ಚುನಾವಣೆಯಲ್ಲಿ ಸೋತಿದ್ದಾನೆ. ಈ ಬಾರಿ ಚುನಾವಣೆಯಲ್ಲಿ ಗೆಲ್ಲಿಸುವಂತೆ ಹಾಸನಾಂಬೆಯಲ್ಲಿ ಬೇಡಿಕೊಂಡಿದ್ದೇನೆ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ತಿಳಿಸಿದ್ದಾರೆ.

ಇಂದು(ಭಾನುವಾರ) ಹಾಸನಾಂಬೆ ದರ್ಶನ ಪಡೆದ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಪ್ರತಿವರ್ಷ ಹಾಸನಾಂಬೆ ನಾಡಿನ ಜನತೆಗೆ ವಿಶೇಷ ದರ್ಶನ ನೀಡುವುದನ್ನು ನಾವು ನೋಡಿದ್ದೇವೆ. ಈ ಬಾರಿ ಹಾಸನ ಜಿಲ್ಲಾಡಳಿತದಿಂದ ಉತ್ತಮವಾಗಿ ವ್ಯವಸ್ಥೆ ಕಲ್ಪಿಸಿ ದರ್ಶನಕ್ಕೆ ಅವಕಾಶ ಮಾಡಿದೆ. ಭಕ್ತರ ಪರವಾಗಿ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ತಿಳಿಸಿದ್ದಾರೆ. ಇಂದು(ಭಾನುವಾರ) ಹಾಸನಾಂಬೆ ದರ್ಶನ ■9ನೇ ಪುಟಕ್ಕೆ

ಯಾವುದೇ ತನಿಖಾ ಸಂಸ್ಥೆ ಫೋನ್ ಅಥವಾ ವಿಡಿಯೋ ಕರೆ ಮೂಲಕ ಸಂಪರ್ಕಿಸುವುದಿಲ್ಲ

ಡಿಜಿಟಲ್ ಅರೆಸ್ಟ್ ಬಗ್ಗೆ ಪ್ರಧಾನಿ ಮೋದಿ ಜನತೆಗೆ ಎಚ್ಚರಿಕೆ

ನವದೆಹಲಿ, ಅ.27– 'ಡಿಜಿಟಲ್ ಅರೆಸ್ಟ್' ಎಂಬ ಸೈಬರ್ ಅಪರಾಧದ ಬಗ್ಗೆ ಭಾನುವಾರ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, ಸೈಬರ್ ಕ್ರೈಂ ಹಗರಣಗಳು ಇಂದು ಎಲ್ಲಾ ವರ್ಗದ ಜನರ ಮೇಲೆ ಪರಿಣಾಮ ಬೀರುತ್ತಿದೆ, ಇಂತಹ ಸಂದರ್ಭಗಳಲ್ಲಿ ಜನರು ಯೋಚಿಸುವುದನ್ನು ನಿಲ್ಲಿಸಿ, ಕ್ರಮ ಕೈಗೊಳ್ಳುವ ಮಂತ್ರವನ್ನು ಅಳವಡಿಸಿಕೊಳ್ಳಬೇಕೆಂದು ಜನರಿಗೆ ಸಲಹೆ ನೀಡಿದರು.



ತಮ್ಮ ತಿಂಗಳ ರೇಡಿಯೊ ಕಾರ್ಯಕ್ರಮ 'ಮನ್ ಕಿ ಬಾತ್'ನಲ್ಲಿ ಇಂದು ಸೈಬರ್ ಕ್ರೈಂ ವಿಷಯದ ಬಗ್ಗೆ ಮಾತನಾಡಿರುವ ಅವರು, ತನಿಖಾ ಸಂಸ್ಥೆಗಳು ಈ ಸಮಸ್ಯೆಯನ್ನು ಎದುರಿಸಲು ರಾಜ್ಯಗಳೊಂದಿಗೆ ಕೆಲಸ ಮಾಡುತ್ತಿವೆ. ಈ ಅಪರಾಧಗಳಿಂದ ರಕ್ಷಿಸಿಕೊಳ್ಳುವಲ್ಲಿ ಜಾಗೃತಿ ಅಗತ್ಯ ಎಂದು ಹೇಳಿದರು. ಸೈಬರ್ ಕ್ರೈಂಗೆ ತುತ್ತಾದವರ ಬಗ್ಗೆ ವಿವರವಾದ ಮಾಹಿತಿಯನ್ನು ಸಂಗ್ರಹಿಸಿದ ನಂತರ ಜನರ ಭಯವನ್ನು ನಿವಾರಿಸಲು ಅಪರಾಧಿಗಳು ತನಿಖಾ ಸಂಸ್ಥೆ ಅಧಿಕಾರಿಗಳಂತೆ ಹೇಗೆ ಪೋಸ್ ನೀಡುತ್ತಾರೆ ಎಂಬುದನ್ನು ತೋರಿಸಲು ಪ್ರಧಾನಿ ವಿಡಿಯೊವೊಂದನ್ನು ಪ್ರದರ್ಶಿಸಿದರು. ■9ನೇ ಪುಟಕ್ಕೆ

ಶಬರಿಮಲೆ ಯಾತ್ರಾರ್ಥಿಗಳಿಗೆ ವಿಮಾನದ ಕ್ಯಾಬಿನ್ ಬ್ಯಾಗ್‌ನಲ್ಲಿ 'ಇರುಮುಡಿ' ಸಾಗಿಸಲು ಅನುಮತಿ

ತಿರುವನಂತಪುರಂ, ಅ.27– ಕೇರಳದ ಶಬರಿಮಲೆ ದೇವಸ್ಥಾನಕ್ಕೆ ತೆರಳುವ ಯಾತ್ರಾರ್ಥಿಗಳು ವಿಮಾನಗಳ ಕ್ಯಾಬಿನ್ ಬ್ಯಾಗ್‌ನಲ್ಲಿ 'ಇರುಮುಡಿ'ಯನ್ನು ಸಾಗಿಸಬಹುದು ಎಂದು ನಾಗರಿಕ ವಿಮಾನಯಾನ ಸಚಿವ ಕೆ.ರಾಮಮೋಹನ್ ನಾಯ್ಡು ತಿಳಿಸಿದರು.

ಈ ಕುರಿತು ತಮ್ಮ ಎಕ್ಸ್ ಖಾತೆಯಲ್ಲಿ ಮಾಹಿತಿ ಹಂಚಿಕೊಂಡ ಅವರು, ನವೆಂಬರ್ ಮಧ್ಯದಿಂದ ಜನವರಿ ಕೊನೆಯವರೆಗೆ ಶಬರಿಮಲೆಗೆ ಯಾತ್ರಾರ್ಥಿಗಳು ತೆರಳುತ್ತಾರೆ.



2025ರ ಜನವರಿ 20 ರವರೆಗೆ ಯಾತ್ರಾರ್ಥಿಗಳು ವಿಮಾನಗಳ ಕ್ಯಾಬಿನ್ ಬ್ಯಾಗ್‌ನಲ್ಲಿ ತೆಂಗಿನಕಾಯಿಯನ್ನು ತೆಗೆದುಕೊಂಡು ಪ್ರಯಾಣಿಸಬಹುದು ಹಾಗೂ ಈ ಸೀಮಿತ ಅವಧಿಯಲ್ಲಿ ಮಾತ್ರ ತೆಗೆದುಕೊಂಡು ಹೋಗಲು ಅನುಮತಿಸಲಾಗಿದೆ ಎಂದು ತಿಳಿಸಿದ್ದಾರೆ.

ಸದ್ಯದ ನಿಯಮಗಳ ಪ್ರಕಾರ ವಿಮಾನಗಳ ಕ್ಯಾಬಿನ್ ಬ್ಯಾಗ್‌ನಲ್ಲಿ ತೆಂಗಿನಕಾಯಿ ತೆಗೆದುಕೊಂಡು ಹೋಗಲು ಅನುಮತಿಯಿಲ್ಲ. ಶಬರಿಮಲೆಗೆ ಹೋಗುವವರಿಗೆ ಯಾತ್ರೆ ಸುಲಭವಾಗಿರಲಿ ಎನ್ನುವ ಕಾರಣಕ್ಕೆ ಈ ನಿರ್ಧಾರ ಕೈಗೊಳ್ಳಲಾಗಿದೆ. ಮಂಡಲಂ–ಮಕರ ವಿಳಕ್ಕು ತೀರ್ಥಯಾತ್ರೆಯ ಅವಧಿಯಲ್ಲಿ 'ಇರುಮುಡಿ'ಯಲ್ಲಿ (ತುಪ್ಪ ತುಂಬಿದ ತೆಂಗಿನಕಾಯಿ ■9ನೇ ಪುಟಕ್ಕೆ

ಹಳ್ಳಿಕಾರ ಸಮುದಾಯವನ್ನು ಪ್ರವರ್ಗ 1ಕ್ಕೆ ಸೇರಿಸಲು ಸೂಕ್ತ ತೀರ್ಮಾನ

ಬೆಂಗಳೂರು, ಅ.27– ಹಳ್ಳಿಕಾರ ಸಮುದಾಯವನ್ನು ಪ್ರವರ್ಗ 1ಕ್ಕೆ ಸೇರಿಸಬೇಕೆಂಬ ಬೇಡಿಕೆ ಬಗ್ಗೆ ವರದಿ ತರಿಸಿಕೊಂಡು ನಂತರ ಸೂಕ್ತ ತೀರ್ಮಾನ ಮಾಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭಾನುವಾರ ಭರವಸೆ ನೀಡಿದ್ದಾರೆ.



ರಾಜ್ಯ ಹಳ್ಳಿಕಾರರ ಸಂಘ ಆಯೋಜಿಸಿದ್ದ ಹಳ್ಳಿಕಾರ ಸಮುದಾಯದ ಸಮಾವೇಶ ಹಾಗೂ ವಿದ್ಯಾರ್ಥಿವೇತನ ವಿತರಣಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಹಳ್ಳಿಕಾರ ಸಮುದಾಯದ ಬಗ್ಗೆ ಸಹಾನುಭೂತಿ ಇದೆ. ಹಳ್ಳಿಕಾರ ಸಮುದಾಯವನ್ನು ಪ್ರವರ್ಗ 3ಎಗೆ ಸೇರಿಸಿದ್ದು ಸರಿಯಲ್ಲ. ಪ್ರವರ್ಗ 1ಕ್ಕೆ ಸೇರಿಸಬೇಕೆಂಬ ಬೇಡಿಕೆ ಬಗ್ಗೆ ವರದಿ ತರಿಸಿಕೊಂಡು ನಂತರ ಸೂಕ್ತ ತೀರ್ಮಾನ ಮಾಡುತ್ತೇನೆ ಎಂದರು.


ಸಮಾಜದಲ್ಲಿನ ವಿವಿಧ ಜಾತಿಯ ಆರ್ಥಿಕ, ಸಾಮಾಜಿಕ ಸ್ಥಿತಿ ಗತಿ ತಿಳಿಯಲು ಜಾತಿ ■9ನೇ ಪುಟಕ್ಕೆ

ಯೋಗೇಶ್ವರ್ ಗೆದ್ದರೆ ಡಿಕೆಶಿ ಸಿಎಂ ಸಾಧ್ಯತೆ

ಕಾಂಗ್ರೆಸ್ ಶಾಸಕರಾದ ಶಿವಲಿಂಗೇಗೌಡ, ಪುಟ್ಟಣ್ಣ ಸ್ಫೋಟಕ ಹೇಳಿಕೆ

ಚನ್ನಪಟ್ಟಣ, ಅ.27– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಸೈಟು ಹಂಚಿಕೆ ಪ್ರಕರಣ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ರಾಜೀನಾಮೆಗೆ ಒತ್ತಡ ಹೆಚ್ಚಿದ್ದು, ಶೀಘ್ರದಲ್ಲೇ ರಾಜೀನಾಮೆ ನೀಡುತ್ತಾರೆ ಎಂಬ ಸುದ್ದಿ ಹರಿದಾಡಿದ್ದವು. ಅಲ್ಲದೇ ಕಾಂಗ್ರೆಸ್‌ನಲ್ಲೇ ಮುಂದಿನ ಸಿಎಂ ಬಗ್ಗೆ ರಾಜಕೀಯ ಬೆಳವಣಿಗೆಗಳು ಜೋರಾಗಿದ್ದವು. ಮುಂದಿನ ಸಿಎಂ ತಾವೇ ಎಂದು ಹಿರಿಯ ಕಾಂಗ್ರೆಸ್ ಶಾಸಕರು ಬಹಿರಂಗ ಹೇಳಿಕೆ ನೀಡಲು ಶುರು ಮಾಡಿದ್ದರು. ಆದರೆ ಇದಕ್ಕೆ ಹೈಕಮಾಂಡ್ ಬ್ರೇಕ್ ಹಾಕಿತ್ತು.

ಇದೀಗ ಉಪ ಚುನಾವಣೆ ಸಮರದಲ್ಲಿ ಸಿಎಂ ವಿಚಾರ ಸದ್ದು ಮಾಡಲಾರಂಭಿಸಿದೆ. ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ. ಯೋಗೇಶ್ವರ್ ಗೆದ್ದರೆ ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿ ಆಗುವ ಸಾಧ್ಯತೆ ಇದೆ ಎಂದು ಕಾಂಗ್ರೆಸ್ ಶಾಸಕರಾದ ಶಿವಲಿಂಗೇಗೌಡ ಮತ್ತು ಪುಟ್ಟಣ್ಣ ಭಾನುವಾರ ಹೇಳುವ ಮೂಲಕ ಕಾಂಗ್ರೆಸ್‌ನಲ್ಲಿ ಸಂಚಲನ ಮೂಡಿಸಿದ್ದಾರೆ.


ಸಿ.ಪಿ. ಯೋಗೇಶ್ವರ್


ಶಿವಲಿಂಗೇಗೌಡ


ಪುಟ್ಟಣ್ಣ

ಇಂದು ಚನ್ನಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿರುವ ಶಾಸಕ ಶಿವಲಿಂಗೇಗೌಡ, ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿ ಆಗುವ ಉಪ ಚುನಾವಣೆ ಇದು. ಉಪ ಚುನಾವಣೆ ಫಲಿತಾಂಶ ಡಿ.ಕೆ.ಶಿವಕುಮಾರ್ ನಾಯಕತ್ವವನ್ನು ತೋರಿಸುತ್ತದೆ. ನೀವು ಯಾವುದೇ ಕಾರಣಕ್ಕೂ ಡಿ.ಕೆ.ಶಿವಕುಮಾರ್ ಅವರನ್ನು ಬಿಟ್ಟುಕೊಡಬಾರದು. ರಾಜ್ಯದ ರಾಜಕಾರಣದ ತಿರುವು ಚನ್ನಪಟ್ಟಣ ಕ್ಷೇತ್ರದಿಂದ ಶುರುವಾಗುತ್ತೆ ಎಂದು ಹೇಳಿದರು.

ಡಿ.ಕೆ.ಶಿವಕುಮಾರ್ ಅವರಿಗೆ ಡಿ.ಕೆ. ಸುರೇಶ್‌ರನ್ನು ನಿಲ್ಲಿಸಿ ಗೆಲ್ಲಿಸಿಕೊಳ್ಳಲು ಆಗುತ್ತಿರಲಿಲ್ಲವೇ ಎಂದು ಪ್ರಶ್ನಿಸಿದ ಅವರು, ಆದರೆ ಯೋಗೇಶ್ವರ್ ಒಳ್ಳೆ ಕೆಲಸ ಮಾಡಿದ್ದಾರೆ. ರಾಜಕೀಯ ಜೀವನ ಉಳಿಸಿಕೊಳ್ಳಲು ಕುಮಾರಸ್ವಾಮಿ ಬಿಜೆಪಿಗೆ ಹೋದರು. ಇಲ್ಲದಿದ್ದರೆ ಎಚ್‌ಡಿಕೆ ರಾಜಕಾರಣ ಮುಗಿದೇ ಹೋಗುತ್ತಿತ್ತು. ಕುಮಾರಸ್ವಾಮಿ ತಮ್ಮ ಕುಟುಂಬ ಅಷ್ಟೇ ಬದುಕಿದರೆ ಸಾಕು ಎಂಬ ಮನೋಭಾವದಲ್ಲಿದ್ದಾರೆ ಎಂದು ಎಚ್‌ಡಿಕೆ ವಿರುದ್ಧ ವಾಗ್ದಾಳಿ ನಡೆಸಿದರು. ■9ನೇ ಪುಟಕ್ಕೆ


ಡಿ.ಕೆ. ಶಿವಕುಮಾರ್

ನಕ್ಕರೆ ಅದೇ ಸ್ವರ್ಗ

ಜಡ್ಜ್ : ಬೆಂಕಿಕಡ್ಡಿ ಹಚ್ಚಿ ಅದನ್ನೇಕೆ ಪೊಲೀಸ್ ಅಧಿಕಾರಿಯ ಜೇಬಿನಲ್ಲಿ ಇಟ್ಟೆ?

ಗುಂಡ : ಜಾಮೀನು ಬೇಕಾದ್ರೆ ಮೊದಲು ನನ್ನ ಜೇಬು ಬೆಚ್ಚಗೆ ಮಾಡು ಅಂದ್ರು, ಅದಕ್ಕೆ....

ಮೈಸೂರು ಮಿತ್ರ

ಸೋಮವಾರ, 28 ಅಕ್ಟೋಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಬೆಲೆಬಾಳುವ ವಸ್ತುಗಳಿಗಿಂತ ಮೌಲ್ಯಗಳು ಬಹಳ ಮುಖ್ಯ....

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { 'ಕಪ್ಪೆ ತಕ್ಕಡಿಯಲ್ಲಿ ಹಾಕಿದ ಹಾಗೆ'

ನಿಮ್ಮ ಪತ್ರಗಳು

■ ಸಾಹಿತ್ಯೇತರ ಕನ್ನಡ ಸಮ್ಮೇಳನ ಅಧ್ಯಕ್ಷರ ಆಯ್ಕೆ ಸೂಕ್ತವಲ್ಲ...

ಮಾನ್ಯರೆ,

ಮಂಡ್ಯದಲ್ಲಿ ಮುಂಬರುವ ಡಿಸೆಂಬರ್‌ನಲ್ಲಿ ನಡೆಸಲು ನಿರ್ಧರಿಸಿರುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ದಿನಾಂಕ ಹತ್ತಿರವಾಗುತ್ತಿದ್ದಂತೆ, ಅದರ ಸುತ್ತಲೂ ಚರ್ಚೆಗಳು, ವಾಗ್ವಾದಗಳು ಆರಂಭವಾಗುತ್ತಿವೆ. ಸಾಹಿತ್ಯ ಸಮ್ಮೇಳನ ಸಾಹಿತಿಗಳ ಸಮ್ಮೇಳನ ಅಲ್ಲ, ಅದು ಕನ್ನಡಿಗರ ಸಮ್ಮೇಳನ ಎಂದು ಈ ಹಿಂದೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ವಾದಿಸಿದ್ದರು. ಆದರೆ ಅವರು ಈ ಬಾರಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು ಸಾಹಿತಿಗಳೇ ಏಕಾಗಬೇಕು? ಕನ್ನಡಕ್ಕೆ ಕೊಡುಗೆ ನೀಡಿದವರು ಬೇರೆ ಬೇರೆ ಕ್ಷೇತ್ರಗಳಲ್ಲೂ ಇದ್ದಾರೆ. ಅವರನ್ನು ಯಾಕೆ ಸಮ್ಮೇಳನದ ಅಧ್ಯಕ್ಷರನ್ನಾಗಿ ಮಾಡ ಬಾರದು ಎಂಬ ಪ್ರಸ್ತಾಪ ಮುಂದಿಟ್ಟು ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರ ಆಯ್ಕೆಯ ವಿಷಯದಲ್ಲಿ ಚರ್ಚೆಗೆ ಕಾರಣರಾಗಿದ್ದಾರೆ.

ಎಷ್ಟೇ ಆದರೂ ಕನ್ನಡ ಸಾಹಿತ್ಯ ಸಮ್ಮೇಳನ ಎಂದ ಮೇಲೆ ಅಲ್ಲಿ ಕನ್ನಡ ಸಾಹಿತಿಗಳಿಗೆ ಗೌರವ ಸಿಗಲೇಬೇಕು. ಕನ್ನಡ ಸಾಹಿತ್ಯಕ್ಕೆ ಮೊದಲ ಆದ್ಯತೆ ಇರಲೇ ಬೇಕು. ಒಂದುವೇಳೆ ಕನ್ನಡ ಸಾಹಿತ್ಯ ಕ್ಷೇತ್ರವಲ್ಲದ ವ್ಯಕ್ತಿ ಸಮ್ಮೇಳನಾಧ್ಯಕ್ಷರಾದರೆ ನಮ್ಮ ಕನ್ನಡ ಸಾಹಿತ್ಯ ಹಿನ್ನೆಲೆಗೆ ಸರಿಯುತ್ತದೆ ಎಂಬುದು ದಿಟ. ಕನ್ನಡ ಸಾಹಿತ್ಯ ಪರಿಷತ್ ಆರಂಭದಿಂದ ಈವರೆಗೆ 86 ಸಾಹಿತ್ಯ ಸಮ್ಮೇಳನಗಳು ನಾಡಿನ ವಿವಿಧೆಡೆ ನಡೆದಿವೆ. ಈ ಅವಧಿಯಲ್ಲಿ ಸಾಹಿತ್ಯ ಕ್ಷೇತ್ರಕ್ಕೆ ಗಮನಾರ್ಹ ಕೊಡುಗೆ ನೀಡಿದವರು ಮಾತ್ರ ಸಮ್ಮೇಳನಾಧ್ಯಕ್ಷರಾಗಿ, ಆಯಾ ಕಾಲದಲ್ಲಿ ಕನ್ನಡ ನಾಡು–ನುಡಿ ಸಮಸ್ಯೆಗಳನ್ನ ಸಮ್ಮೇಳನಗಳಲ್ಲಿ ಪ್ರಸ್ತಾಪಿಸಿ ಪ್ರತಿಬಿಂಬಿಸಿ ಅವುಗಳ ಪರಿಹಾರದತ್ತ ಚಿತ್ತ ಹರಿಸಿದ್ದಾರೆ. ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೆಲಸ ಮಾಡಿದವರಿಗೆ ಸಮ್ಮೇಳನಾಧ್ಯಕ್ಷತೆ ಕನ್ನಡ ಸಾಹಿತ್ಯ ಪರಿಷತ್ತಿನ ಇತಿಹಾಸದಲ್ಲಿ ಒಲಿದಿರುವುದು ಇದುವರೆಗಿನ ಗಮನಾರ್ಹವಾದ ಸಂಗತಿ. ಈ ಮೇಲ್ಪಂಕ್ತಿಯೇ ಇದುವರೆಗೂ ನಡೆದಿರುವುದು ಶ್ರೇಷ್ಠ ಹಾಗೂ ಪ್ರಶಂಸನೀಯ. ಸಾಹಿತ್ಯೇತರ ಕ್ಷೇತ್ರದವರನ್ನು ಸಮ್ಮೇಳನಾಧ್ಯಕ್ಷತೆಗೆ ಆಯ್ಕೆ ಮಾಡುವ ಗೋಜಿಗೆ ಹಿಂದಿನ ಯಾವ ಅಧ್ಯಕ್ಷರೂ ಹೋಗಿರಲಿಲ್ಲ. ಸಾಹಿತ್ಯ ಪರಿಷತ್ತಿನ ಸಭೆಗಳಲ್ಲಿ ಅಂತಹ ಚರ್ಚೆಯೂ ನಡೆದ ನಿದರ್ಶನವಿಲ್ಲ. ಹೀಗಿರುವಾಗ ಈಗಿನ ಅಧ್ಯಕ್ಷರ ಬಾಯಿಂದ ಸಮ್ಮೇಳನಾಧ್ಯಕ್ಷರ ಬದಲಾವಣೆಯ ಸಂಪ್ರದಾಯ ಪ್ರಾರಂಭವಾಗಿರೋದು ಅಚ್ಚರಿ ತರಿಸಿದೆ.

ಒಂದು ವೇಳೆ ಸಾಹಿತ್ಯೇತರರನ್ನು ಸಮ್ಮೇಳನಾಧ್ಯಕ್ಷತೆಗೆ ಪರಿಗಣಿಸಿದರೆ, ಮುಂದೊಂದು ದಿನ ಕನ್ನಡ ಸಾಹಿತ್ಯ ಸಮ್ಮೇಳನ, ಕನ್ನಡ ನಾಡು–ನುಡಿಯ ಸಮ್ಮೇಳನವಾಗದೇ ರಾಜಕೀಯ ಹಾಗೂ ಧಾರ್ಮಿಕ ಮೇಲಾಟದ ವೇದಿಕೆಯಾಗಿ ಬಿಡುವ ಅಪಾಯವಿದೆ. ಹೀಗಾಗಿ ಕನ್ನಡ ಸಾಹಿತಿಗಳನ್ನೇ ಸಮ್ಮೇಳನಾಧ್ಯಕ್ಷರನ್ನಾಗಿ ಆಯ್ಕೆ ಮಾಡುವ ಮೂಲಕ ಕನ್ನಡ ನಾಡು ನುಡಿ ಸಂಸ್ಕೃತಿ ಪರಂಪರೆಯನ್ನು ಮುನ್ನಡೆಸಿಕೊಂಡು ಹೋಗಬೇಕೆಂಬುದು ಸಮಸ್ತ ಕನ್ನಡಿಗರ ಆಗ್ರಹವಾಗಿದೆ ಹಾಗೂ ಅದು ಸೂಕ್ತವೂ ಆಗಿದೆ. **–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.**

■ ಪದವಿ ಆಯ್ಕೆ: ಲಾಬಿ ಹೊರತಾದ ಸಮಿತಿ ರಚಿಸಿ.

ಮಾನ್ಯರೆ,

ಮೈಸೂರಿನ ಪ್ರಶಸ್ತಿ ಪ್ರದಾನ ಸಮಾರಂಭವೊಂದರಲ್ಲಿ ಮಾಜಿ ಸಚಿವ ಕೋಟೆ ಎಂ.ಶಿವಣ್ಣನವರು ಜಿಲ್ಲಾ, ರಾಜ್ಯಮಟ್ಟದ ಪ್ರಶಸ್ತಿ ಪಡೆಯಲು ಅರ್ಜಿ ಹಾಕಿ ಪಡೆಯುವ ವ್ಯವಸ್ಥೆ ಇರಬಾರದು. ಅದು ನಾಚಿಕೆಗೇಡು, ಸರ್ಕಾರದ ಇಲಾಖೆಗಳು ಕಲಾವಿದನ ಸಾಧನೆ ಗುರ್ತಿಸಿ, ಆತನ ಮನೆ ಬಾಗಿಲಿಗೇ ತೆರಳಿ ಪ್ರಶಸ್ತಿಯ ಬಗ್ಗೆ ತಿಳಿಸಿದಾಗ ಕಲೆಯ ಗೌರವವೂ ಹೆಚ್ಚುತ್ತದೆ ಎಂದು ಜಾನಪದ ಪ್ರಪಂಚ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಹೇಳಿದ್ದಾರೆ ಎಂದು ಪತ್ರಿಕೆಗಳಲ್ಲಿ (25.10.24) ವರದಿಯಾಗಿದೆ. ಅಂದಿನ ಪತ್ರಿಕೆಯಲ್ಲೇ ಮಂಡ್ಯದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಗಾದಿಗೆ ಮಹಿಳಾ ಸಾಹಿತಿಯೇ ಆಯ್ಕೆಯಾಗುವ ಸಂಭವವಿದ್ದು, ಹಿರಿಯ ಸಾಹಿತಿಗಳಾದ ವೀಣಾ ಶಾಂತೇಶ್ವರ, ವೈದೇಹಿ ಹಾಗೂ ಮಾಲತಿ ಪಟ್ಟಣಶೆಟ್ಟಿಯವರ ಹೆಸರುಗಳು ಮುಂಚೂಣಿಯಲ್ಲಿವೆ ಎಂದು ವರದಿಯಾಗಿದ್ದು, ಮಂಡ್ಯ ಜಿಲ್ಲೆಯವರೇ ಆಗಿದ್ದು ಮೈಸೂರಿನಲ್ಲಿ ನೆಲೆಸಿರುವ ಸಾಹಿತಿ (ಲತಾ ರಾಜಶೇಖರ್) ಯನ್ನೇ ಸಮ್ಮೇಳನದ ಅಧ್ಯಕ್ಷರಾಗಿ ಮಾಡಬೇಕು ಎಂಬ ಬಗ್ಗೆ ಕೆಲವು ಪ್ರಭಾವಿ ರಾಜಕಾರಣಿಗಳ ಮೂಲಕ ಒತ್ತಡ ಹೇರಲಾಗುತ್ತಿದೆ ಎಂದೂ, ಪದವಿಗಾಗಿ ಲಾಬಿ ನಡೆಸುತ್ತಿರುವ ವರದಿಯಾಗಿದೆ. ಇಂತಹ ಲಾಬಿಗಳು ನಿಜಕ್ಕೂ ಪ್ರಶಸ್ತಿ, ಪದವಿಗಳ ಗೌರವಕ್ಕೆ ಕುಂದುಂಟಾಗುವುದರಲ್ಲಿ ಸಂಶಯವಿಲ್ಲ. ಅಂದಹಾಗೆ ಪ್ರಶಸ್ತಿ ಆಯ್ಕೆಗೆ ಸಮಿತಿ ನೇಮಕ ಮಾಡುವಂತೆ, ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನು ಆಯ್ಕೆ ಮಾಡಲು ಮೂವರು ಹಿರಿಯ ಸಾಹಿತಿಗಳ ಸಮಿತಿಯನ್ನು ರಚಿಸಬಾರದೇಕೆ?

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

■ 'ಬಿಗ್‌ಬಾಸ್' ಹುಚ್ಚರ ಸಂತೆಯಾಗದಿರಲಿ

ಮಾನ್ಯರೆ,

ಕಳೆದ ಕೆಲವಾರು ವರ್ಷಗಳಿಂದ ಕನ್ನಡದ ಕಲರ್ಸ್ ಟಿವಿಯಲ್ಲಿ ಖ್ಯಾತ ನಾಯಕ ನಟ ಸುದೀಪ್ ಸಾರಥ್ಯದಲ್ಲಿ ಅತಿರಂಜಿತ ಬಿಗ್ ಬಾಸ್ ಕಾರ್ಯಕ್ರಮ ಪ್ರಸಾರವಾಗುತ್ತಿರುವುದು ಸರಿಯಷ್ಟೆ, ಬಿಗ್ ಬಾಸ್ ಒಂದು ಅತ್ಯಂತ ಜನಪ್ರಿಯ ರಿಯಾಲಿಟಿ ಷೋ ಆಗಿ ಮೂಡಿ ಬರುತ್ತಿದ್ದು ವಿವಿಧ ಭಾಷೆಗಳಲ್ಲಿ ವಿವಿಧ ಖಾಸಗಿ ವಾಹಿನಿಗಳಲ್ಲಿ ಪ್ರಸಾರವಾಗುತ್ತಿದೆ. ಕನ್ನಡದಲ್ಲಿ ಪ್ರಸಾರವಾಗುತ್ತಿರುವ ಬಿಗ್ ಬಾಸ್ ಕಾರ್ಯಕ್ರಮದ ಬಗ್ಗೆ ಹಲವು ರೀತಿಯ ವ್ಯತಿರಕ್ತ ಟೀಕೆ ಟಿಪ್ಪಣಿಗಳು ಹರಿದು ಬರುತ್ತಿವೆ. ಇಂತಹ ಕಾರ್ಯಕ್ರಮದಿಂದ ಜನರಿಗೆ ಯಾವುದೇ ರೀತಿಯ ಪ್ರಯೋಜನವಿಲ್ಲ, ಇದೊಂದು ಹುಚ್ಚರ ಸಂತೆ" ಮುಂತಾದ ಕಟು ವಿಮರ್ಶೆಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದು ಬರುತ್ತಿದೆ.

ಕೆಲವು ವಿವಾದಾತ್ಮಕ ವ್ಯಕ್ತಿಗಳನ್ನು ಬಿಗ್‌ಬಾಸ್‌ನಲ್ಲಿ ಸೇರಿಸಿ, ಅವರ ಕಪಿಚೇಷ್ಟೆಗಳಿಗೆ ಬಿಗ್‌ಬಾಸ್ ವೇದಿಕೆಯಾಗುತ್ತಿರುವುದು ತುಂಬಾ ದುರದೃಷ್ಟಕರವಾದ ಸಂಗತಿ. ಈ ಕಾರ್ಯಕ್ರಮಕ್ಕೆ ಯಾವುದೇ ಗೊತ್ತುಗುರಿ ಇಲ್ಲವೇನೋ ಎಂಬ ಭಾವನೆ ದಟ್ಟವಾಗುತ್ತಿದೆ. ಲೋಕೋ ಭಿನ್ನ ರುಚಿಃ ಎಂಬ ಮಾತೇನೋ ಸರಿ. ಬಿಗ್ ಬಾಸ್ ಕಾರ್ಯಕ್ರಮವನ್ನು ಲೈಕ್ ಮಾಡುವ ಸಾವಿರಾರು ಪ್ರೇಕ್ಷಕರಿರಬಹುದು. ಆದರೆ ಇಂತಹ ಒಂದು ದೊಡ್ಡಮಟ್ಟದ ಕಾರ್ಯಕ್ರಮಕ್ಕೆ ಒಂದು ಗಾಂಭೀರ್ಯತೆ ಇರಬೇಕು. ಇಲ್ಲವಾದಲ್ಲಿ, ಈ ಕಾರ್ಯಕ್ರಮ ಹತ್ತರಲ್ಲಿ ಹನ್ನೊಂದಾಗಿ ಪರಿವರ್ತನೆಯಾಗಬಹುದು. ಈ ಕಾರ್ಯಕ್ರಮದ ನಿರ್ಮಾಪಕರು, ಆಯೋಜಕರು ಹಾಗೂ ಈ ಕಾರ್ಯಕ್ರಮವನ್ನು ಪ್ರಸಾರ ಮಾಡುತ್ತಿರುವ ಕಲರ್ಸ್ ಟಿವಿ ಇದರ ಬಗ್ಗೆ ಗಂಭೀರವಾಗಿ ಯೋಚಿಸಬೇಕಾಗಿದೆ.


–ಕೆ.ವಿ.ವಾಸು, ವಕೀಲರು, ನೋಟರಿ, ವಿವೇಕಾನಂದನಗರ, ಮೈಸೂರು.

ನಮ್ಮ ಮೈಸೂರಿನ ಅಸಾಮಾನ್ಯರು...



ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಹಿಡಿದು ಯದುವಂಶದ ಕೊನೆಯ ಮಹಾರಾಜರಾದ ಜಯಚಾಮರಾಜ ಒಡೆಯರ್ ಆಡಳಿತದ ಅವಧಿಯವರೆಗೆ ಅನೇಕ ಶ್ರೇಷ್ಠ ಮಹನೀಯರು ಮೈಸೂರು ರಾಜ್ಯದಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಾರೆ. ಅಂತಹ ಕೆಲವರ ಹೆಸರುಗಳನ್ನು ಮೈಸೂರು ಚರಿತ್ರೆಗೆ ಸಂಬಂಧಪಟ್ಟ ಇತಿಹಾಸದ ಪುಸ್ತಕಗಳಲ್ಲಿ ಪ್ರಸ್ತಾಪಿಸಿರುವುದನ್ನು ನಾವು ಕಾಣುತ್ತೇವೆ. ಆಡಳಿತದ ಪ್ರಮುಖ ಹುದ್ದೆಯಲ್ಲಿದ್ದು, ಗಣನೀಯ ಸೇವೆ ಸಲ್ಲಿಸಿದ್ದ ಕೆಲವರ ಹೆಸರುಗಳು ಅವುಗಳಲ್ಲಿ ಕಂಡು ಬಂದರೂ, ಅವರಂತೆಯೇ ಅಪೂರ್ವ ಸೇವೆ ಸಲ್ಲಿಸಿರುವ ಇತರ ನೂರಾರು ಮಂದಿ ಎಲ್ಲಿಯೂ ಪ್ರಸ್ತಾಪಗೊಳ್ಳದೆ ಎಲೆಮರೆಕಾಯಿಯಾಗಿ ಉಳಿದು ಹೋಗಿದ್ದಾರೆ. ನೆನಪಿನ ಅಂಗಳದಿಂದ ಜಾರಿ ಹೋಗಿದ್ದಾರೆ. ಹಾಗೆ ಸೇವೆ ಸಲ್ಲಿಸಿದರಲ್ಲಿ ಹಲವಾರು ಮಂದಿ ಅಂದಿಗೆ ಖ್ಯಾತನಾಮರಾಗಿದ್ದರೂ ಇಂದು ಅವರ ಬಗ್ಗೆ ನಮಗೆ ಹೆಚ್ಚು ತಿಳಿಯದೆ ಹೋಗಿದೆ. ನೆನಪಿನಿಂದ ಅಳಿಸಿಹೋಗಿದ್ದಾರೆ. ಕೆಲವರ ಸೇವೆಯನ್ನಾದರೂ ಇಲ್ಲಿ ಗುರುತಿಸುವ ಪ್ರಯತ್ನ ನನ್ನದು. ಇಂತಹ ಪ್ರಯತ್ನ ಬಹಳ ಹಿಂದೆಯೇ ಪ್ರಾರಂಭಿಸುವ ಉದ್ದೇಶ ಹೊಂದಿದ್ದರೂ, ಅದು ಈಗ ಸಾಧ್ಯವಾಗುತ್ತಿದೆ. ನೆನಪಿನಂಗಳದಿಂದ ಮರೆಯಾದ ಮಹನೀಯರ ಪರಿಚಯ ಒಂದು ಮಾಲಿಕೆಯಾಗಿ ಪ್ರಕಟಗೊಳ್ಳಲಿದೆ. ಅವು 'ಮೈಸೂರು ಮಿತ್ರ' ಓದುಗರಿಗೆ ಮೆಚ್ಚುಗೆಯಾದರೆ, ಅದೇ ನನಗೆ ಬರೆದ ತೃಪ್ತಿ.

41. 'ನಾಟ್ಯ ಸರಸ್ವತಿ' ಜಟ್ಟಿ ತಾಯಮ್ಮ





ಗೌರಿ ಸತ್ಯ
ಹಿರಿಯ ಪತ್ರಕರ್ತರು
ಮೊ. 87627 88685

ಮೈಸೂರಿನ ಮಹಾರಾಜರು ಬಹಳ ಹಿಂದಿನಿಂದ ಕಲೆಗೆ ಪ್ರೋತ್ಸಾಹ ನೀಡಿದ್ದಾರೆ. ಕಲಾಪ್ರೇಮಿಗಳಾಗಿ ಸಾಹಿತ್ಯ, ಸಂಗೀತ, ನಾಟಕ, ನೃತ್ಯ, ಯಕ್ಷಗಾನ ಹೀಗೆ ಹಲವು ಪ್ರಾಕಾರಗಳಿಗೆ ಉತ್ತೇಜನ ಕೊಟ್ಟಿದ್ದಾರೆ. ತಾವೇ ಸಂಗೀತ, ಸಾಹಿತ್ಯದಲ್ಲಿ ಪರಿಣತಿ ಹೊಂದಿದ್ದು ಕೃತಿಗಳನ್ನೂ ರಚಿಸಿದ್ದಾರೆ. ಮುಮ್ಮಡಿಯವರು, ಅವರ ನಂತರದ ಮಹಾರಾಜರೂ ಇದರಲ್ಲಿ ಕಮ್ಮಿ ಏನಿರಲಿಲ್ಲ. ಅವರ ಕಲಾ ಪೋಷಣೆಯಿಂದಾಗಿ ಅನೇಕ ಕಲಾವಿದರು ಖ್ಯಾತಿ ಪಡೆದರು. ಮೈಸೂರಿಗೆ, ಮಹಾರಾಜರಿಗೆ ಕೀರ್ತಿ ತಂದರು. ಈ ಕಲಾವಿದರಲ್ಲಿ ಪ್ರಸಿದ್ಧರಾದ ಭರತನಾಟ್ಯದ ನರ್ತಕಿಯರೂ ಇದ್ದಾರೆ. ವಿಶಿಷ್ಟ ಮೈಸೂರು ನೃತ್ಯ ಪರಂಪರೆಯನ್ನೇ ರೂಪಿಸಿ, ಬೆಳೆಸಿದ್ದಾರೆ.

19 ಮತ್ತು 20ನೆಯ ಶತಮಾನದಲ್ಲಿ ಮೈಸೂರು ಮಹಾರಾಜರ ಆಶ್ರಯದಲ್ಲಿ ಹಾಗೆ ಪ್ರಸಿದ್ಧಿಗೆ ಬಂದ ನಾಟ್ಯ ಪರಂಪರೆಯವರೆಂದರೆ ಅಮೃತಪ್ಪ, ದಾಸಪ್ಪ, ಬೆಂಗಳೂರು ಕಿಟ್ಟಪ್ಪ, ಕೋಲಾರದ ಪುಟ್ಟಪ್ಪ, ನೃತ್ಯಗಾತಿಯರೆಂದರೆ ಮೂಗೂರು ಸುಬ್ಬಮ್ಮ, ಅಮೃತಮ್ಮ, ಕೊಯಮತ್ತೂರು ತಾಯಿ, ನಾಗರತ್ನಮ್ಮ, ಅಸಮಾನ್ಯರಾದ ಜಟ್ಟಿ ತಾಯಮ್ಮ ಮತ್ತು ಅವರ ಪ್ರಸಿದ್ಧ ಶಿಷ್ಯೆ ಈಚಿನ ಎಂ.ವೆಂಕಟಲಕ್ಷ್ಮಮ್ಮ, ದೇವದಾಸಿಯರಾದ ರಂಗಮ್ಮ ಮತ್ತು ಜೇಜಮ್ಮ. ನಾಲ್ವಡಿ ಕೃಷ್ಣರಾಜ ಒಡೆಯರ ಆಸ್ಥಾನದಲ್ಲಿ ಐದು ನರ್ತಕಿಯರ ತಂಡಗಳಿದ್ದು ಬಳ್ಳಾಪುರದ ಭವಾನಮ್ಮ, ಜಟ್ಟಿ ತಾಯಮ್ಮನವರ ಶಿಷ್ಯೆ ವೆಂಕಟಲಕ್ಷ್ಮಮ್ಮ, ಮೂಗೂರು ತಾಯಕ್ಕ, ಮೈಸೂರಿನ ಜಯಲಕ್ಷ್ಮಮ್ಮ (ರಾಜಮ್ಮ), ಚಂದ್ರವದನಮ್ಮ, ವ್ಯಾಸಮ್ಮ, ಲಕ್ಷ್ಮಮ್ಮ ಮುಂತಾದವರು ರಾಜನರ್ತಕಿಯರಾಗಿದ್ದರು. ಇವರೆಲ್ಲಾ ಶ್ರೇಷ್ಠ ಪರಂಪರೆಯ ಸಾಲಿಗೆ ನಿಲ್ಲುವ ನರ್ತಕಿಯರೇ.

ತ್ರಿಪುರಸುಂದರಿದೇವಿಯ ಪ್ರಾಚೀನ ದೇವಸ್ಥಾನವಿರುವ ತಿರುಮಕೂಡಲು ನರಸೀಪುರದ ಬಳಿ ಇರುವ ಮೂಗೂರು ಅಂದಿಗೆ ಪ್ರಸಿದ್ಧ ಮೈಸೂರು ಶೈಲಿಯ ಭರತನಾಟ್ಯದ ನರ್ತಕಿಯರ ತೌರೂರಾಗಿತ್ತು. ಆ ದೇವಸ್ಥಾನದಲ್ಲಿ ನೃತ್ಯಸೇವೆಯನ್ನು ತಪ್ಪದೆ ನಡೆಸಿಕೊಂಡು ಬರುತ್ತಿದ್ದ ಒಂದು ನಟ್ಟುವ ನರ್ತನ ಮನೆತನವಿತ್ತು. ಅದರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದ ಮೂಗೂರು ಸುಬ್ಬಣ್ಣನವರು ಗಾಯಕರು. ಮೂಗೂರು ಅಮೃತಪ್ಪನವರು ನಟ್ಟುವರು. ಇವರ ವಂಶದ ಮೂಗೂರು ಜೇಜಮ್ಮ ಮೈಸೂರು ಶೈಲಿಯ ಮೂಗೂರು ಶಾಖೆಯ ಶ್ರೇಷ್ಠ ಪ್ರತಿಪಾದಕರಾಗಿದ್ದರು. ಮುಮ್ಮಡಿಯವರ ಕಾಲದಲ್ಲೇ ಭರತನಾಟ್ಯದಲ್ಲಿ ಮೈಸೂರು ಶೈಲಿಯ ಪ್ರಾಕಾರ ರೂಪುಗೊಂಡು ಚಾಮರಾಜ ಒಡೆಯರ ಕಾಲದಲ್ಲಿ ಇನ್ನಷ್ಟು ಬೆಳೆದು, ನಾಲ್ವಡಿ ಕೃಷ್ಣರಾಜರ ಕಾಲದಲ್ಲಿ ಗಟ್ಟಿಯಾಗಿ ತಳವೂರಿತು. ಮುಮ್ಮಡಿಯವರು ತಾವೂ ವಾಗ್ಗೇಯಕಾರರಾಗಿ ಒಂದು ವಿಶಿಷ್ಟವಾದ ಮುದ್ರೆಯನ್ನು ಉಳಿಸಿದರು.

ಈ ನರ್ತಕಿಯರಲ್ಲಿ ಅಗ್ರರಾಗಿ ನಿಲ್ಲುತ್ತಾರೆ ಜಟ್ಟಿ ತಾಯಮ್ಮ (1857–1947). ಹೆಸರೇ ಹೇಳುವಂತೆ ಜಟ್ಟಿ ತಾಯಮ್ಮ ಹುಟ್ಟಿದ್ದು ಜಟ್ಟಿಯವರ ಮನೆಯಲ್ಲಿ. ಅವರ ಹುಟ್ಟಿದ್ದು 1857ರ ಅಕ್ಟೋಬರ್ 18ರಂದು ಮೈಸೂರಿನಲ್ಲಿ. ಅವರ ತಂದೆ ದಾಸಪ್ಪ ಮುಮ್ಮಡಿ ಕೃಷ್ಣರಾಜ ಒಡೆಯರ ಕೃಪಾಶ್ರಯದಲ್ಲಿನ ಖ್ಯಾತ ಜಟ್ಟಿ. ಜಟ್ಟಿ ತಾಯಮ್ಮನವರ ಹೆಸರು ಲಕ್ಷ್ಮೀದೇವಮ್ಮ. ಪ್ರೀತಿಗೆ 'ತಾಯಿ' ಎಂದು ಕರೆಯುತ್ತಿದ್ದುದೇ ತಾಯಮ್ಮ ಆಗಿ ಅದೇ ಹೆಸರಿನಲ್ಲಿ ಖ್ಯಾತರಾದರು. ತಂದೆ ದಾಸಪ್ಪ ಆಂಧ್ರ ಪ್ರದೇಶದ ಕೃಷ್ಣಾ ಜಿಲ್ಲೆಯಿಂದ ಮೈಸೂರಿಗೆ ವಲಸೆ ಬಂದಿದ್ದರೆನ್ನಲಾಗಿದೆ. ಆ ಪ್ರದೇಶ ಕೂಚಿಪುಡಿ ನೃತ್ಯಕ್ಕೆ ಖ್ಯಾತಿ ಪಡೆದಿತ್ತು. ಇದರಿಂದಾಗಿ ದಾಸಪ್ಪನವರಿಗೂ ಸಂಗೀತ, ನೃತ್ಯದಲ್ಲಿ ಆಸಕ್ತಿ–ಅಭಿಮಾನ ಬೆಳೆದು ಅಭ್ಯಾಸ ಮಾಡಿದ್ದರು. ತಾಯಮ್ಮನವರಿಗೆ ಅವರೇ ಮೊದಲ ಸಂಗೀತದ ಗುರುಗಳಾದರು.

ಮಹಾರಾಜರು ಆಸ್ಥಾನದಲ್ಲಿ ಸಂಗೀತ–ನೃತ್ಯ ಕಲೆಗಳಿಗೆ ಪ್ರೋತ್ಸಾಹ ನೀಡುತ್ತಿದ್ದುದು, ತಾಯಮ್ಮ ಈ ಕಲೆಯ ಬಗ್ಗೆ ಆಸಕ್ತಿ ತೋರಿಸುತ್ತಿದ್ದುದು, ತಮ್ಮ ಮಗಳಿಗೆ ಸಂಸ್ಕೃತ ಭಾಷೆ ಮತ್ತು ಸಂಗೀತದಲ್ಲಿ ತರಬೇತಿ ನೀಡಲು ದಾಸಪ್ಪನವರು ನಿಶ್ಚಯಿಸಿದ್ದರಲ್ಲಿ ಆಶ್ಚರ್ಯವಿಲ್ಲ. ತಾಯಮ್ಮ ಗುರು ಉಪಾಧ್ಯಾಯ ಅವರಲ್ಲಿ ನೃತ್ಯ ತರಬೇತಿ ಪ್ರಾರಂಭಿಸಿ, ಸುಬ್ಬರಾಯಪ್ಪ ಮತ್ತು ಚಂದ್ರಶೇಖರ ಶಾಸ್ತ್ರಿಗಳಲ್ಲಿ ಅಭ್ಯಾಸ ಮಾಡಿದರು. ಚಂದ್ರಶೇಖರ ಶಾಸ್ತ್ರಿಗಳಿಂದ ತೆಲುಗು ಜಾವಳಿ ಮತ್ತು ಪದಗಳನ್ನು ಕಲಿತರು. ಕವೀಶ್ವರ ಗಿರಿಯಪ್ಪ ಮತ್ತು ಕರಿಬಸಪ್ಪ ಶಾಸ್ತ್ರಿಗಳಿಂದ ಅಭಿನಯವನ್ನು ಕಲಿತರು. ಕನ್ನಡದ ಹಾಡುಗಳು ಮತ್ತು ಜಾವಳಿಗಳ ಅಭ್ಯಾಸವೂ ಆಯಿತು. ಶೃಂಗೇರಿ ಸುಬ್ರಹ್ಮಣ್ಯ ಶಾಸ್ತ್ರಿಗಳಿಂದ ಸ್ವಲ್ಪಮಟ್ಟಿಗೆ ಸಂಸ್ಕೃತ ಭಾಷೆಯನ್ನು ಅಭ್ಯಾಸ ಮಾಡಿದರು. ಆ ಕಾಲಕ್ಕೆ ಒಂದು ಹೆಣ್ಣು ಮಗಳು ಇಷ್ಟು ಕಲಿತಿದ್ದಾಳೆ ಎಂದರೆ ಅದೇ ದೊಡ್ಡದು.

ತಾಯಮ್ಮನವರ ಪರಿಶ್ರಮ–ಕಲಿಯುವ ಆಸಕ್ತಿಯಿಂದಾಗಿ 15ನೇ ವರ್ಷಕ್ಕೇ ಅವರಿಗೆ ಆಸ್ಥಾನ ವಿದುಷಿಯಾಗುವ ಅದೃಷ್ಟ ಲಭಿಸಿತು. ಅರಮನೆಯಲ್ಲಿ ಭರತನಾಟ್ಯ ಪ್ರದರ್ಶನ ನೀಡಿ, ಮೆಚ್ಚುಗೆ ಪಡೆದು ಚಾಮರಾಜೇಂದ್ರ ಒಡೆಯರ ಆಸ್ಥಾನದಲ್ಲಿ ರಾಜನರ್ತಕಿಯಾಗಿ ನೇಮಕಗೊಂಡರು. ಆವಾಗಲೇ ಮೈಸೂರು ಶೈಲಿಯ ಭರತನಾಟ್ಯ ಹೊರಹೊಮ್ಮಿದ್ದು. 1876ರಲ್ಲಿ ಸಂಜೀವ ಜಟ್ಟಿ ಅವರೊಂದಿಗೆ ವಿವಾಹವಾದ ಮೇಲೆ ತಾಯಮ್ಮ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ನೃತ್ಯ ಪ್ರದರ್ಶನವನ್ನೂ ನಿಲ್ಲಿಸಿದರು. ಮುಂದೆ ತಾಯಮ್ಮನವರಿಗೆ ಪುತ್ರಿ ರಂಗನಾಯಕಮ್ಮ ಹುಟ್ಟಿದ ಮೇಲೆ ಅವಳಿಗೆ ನರ್ತನದಲ್ಲಿ ಹೆಚ್ಚಿನ ಅಭ್ಯಾಸ ಮಾಡಿಸಿದರು. ತಾಯಿ, ಮಗಳಿಬ್ಬರೂ ಹಲವಾರು ಸಂದರ್ಭಗಳಲ್ಲಿ ಒಟ್ಟಿಗೆ ನೃತ್ಯ ಪ್ರದರ್ಶನ ಮಾಡಲಾರಂಭಿಸಿದರು.

ನಾಲ್ವಡಿ ಕೃಷ್ಣರಾಜ ಒಡೆಯರ ಅವಧಿಯಲ್ಲಿ ತಾಯಮ್ಮನವರ ನರ್ತನ ಆಸ್ಥಾನದಲ್ಲಿ ಮೆಚ್ಚುಗೆ ಗಳಿಸಿತು. ಅವರ ಸಾಧನೆಯನ್ನು ಗುರುತಿಸಿ ಮಹಾರಾಜರು ತಾಯಮ್ಮನವರನ್ನು ಮತ್ತೆ ಆಸ್ಥಾನ ವಿದೂಷಿಯನ್ನಾಗಿ ನೇಮಿಸಿದರು. ಒಳ್ಳೆಯ ಸೌಂದರ್ಯ, ನಿಲುವು ಹಾಗೂ ಶಿಕ್ಷಣ ಪಡೆದಿದ್ದ ತಾಯಮ್ಮ ಆತ್ಮವಿಶ್ವಾಸ, ಕ್ರಿಯಾಶೀಲತೆಯಿಂದ ಕೂಡಿದ್ದರು. ಬೆಳಗಿನ ಜಾವ 4 ಗಂಟೆಗೇ ಎದ್ದು ಒಂದರ್ಧ ಘಂಟೆಯ ನಂತರ ಗುರುಕುಲ ಪದ್ಧತಿಯಂತೆ ಶಿಷ್ಯರಿಗೆ ತರಬೇತಿ ನೀಡಲು ಪ್ರಾರಂಭಿಸುತ್ತಿದ್ದರು. ಜಟ್ಟಿ ಕುಟುಂಬದಲ್ಲಿ ಹುಟ್ಟಿ ಮದುವೆಯೂ ಆಗಿದ್ದ ತಾಯಮ್ಮ ದೇವದಾಸಿಯಾಗಿರದೆ ಆಸ್ಥಾನ ನರ್ತಕಿಯಾಗಿ ಮೆರೆದರು.

ಜಟ್ಟಿ ತಾಯಮ್ಮನವರು ನೃತ್ಯದಲ್ಲಿ ಅಭಿನಯಕ್ಕೆ ಹೆಚ್ಚು ಪ್ರಾಧಾನ್ಯತೆ ಕೊಡುತ್ತಿದ್ದರು. ನೃತ್ಯಕ್ಕಾಗಿ ಅವರು ಹೆಚ್ಚಾಗಿ ಆಯ್ದುಕೊಳ್ಳುತ್ತಿದ್ದುದು ಗೀತಗೋವಿಂದ, ಮುಕುಂದಮಾಲಾ, ಅಮರುಶತಕ, ನೀತಿ ಶತಕ, ಕೃಷ್ಣಕರ್ಣಾಮೃತ ಮತ್ತು ಕಾಳಿದಾಸನ ಕೃತಿಗಳು. ಅಭಿನಯಕ್ಕೆ ತಕ್ಕದಾದವುಗಳನ್ನು ಆಯ್ದು ನೃತ್ಯಕ್ಕೆ ಅಳವಡಿಸಿಕೊಳ್ಳುತ್ತಿದ್ದರು. ಅವರಲ್ಲಿ ಇಂತಹವುಗಳ ಒಂದು ದೊಡ್ಡ ಭಂಡಾರವೇ ಕೂಡಿಬಂದಿತ್ತು. ಅವರ ನೃತ್ಯ ಕಾರ್ಯಕ್ರಮಗಳು ಶ್ಲೋಕ, ಅಷ್ಟಪದಿ, ಪದ ಮತ್ತು ಜಾವಳಿಗಳಿಂದ ತುಂಬಿರುತ್ತಿದ್ದವು. ಅವರ ಭರತನಾಟ್ಯ ಶೈಲಿ ಮತ್ತು ಹಿಂದೂಸ್ತಾನಿ ನಾಚ್ ಎರಡೂ ಪದ್ಧತಿಗಳಲ್ಲಿ ಅಭಿನಯ ಪ್ರಾಧಾನ್ಯವಾಗಿದ್ದು ಮೆಚ್ಚುಗೆ ಪಡೆದಿದ್ದವು. ಮೈಸೂರು ಶೈಲಿಯ ವಿಶೇಷತೆ ಅವರ ನೃತ್ಯದಲ್ಲಿ ಎದ್ದು ಕಾಣುತ್ತಿತ್ತು.

1945ರಲ್ಲಿ ಮಹಾರಾಜ ಕಾಲೇಜಿನಲ್ಲಿ ಜರುಗಿದ ಸಮಾರಂಭದಲ್ಲಿ ಮುಂದೆ ರಾಷ್ಟ್ರಪತಿಗಳಾದ ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಅವರು ತಾಯಮ್ಮನವರಿಗೆ 'ನಾಟ್ಯ ಸರಸ್ವತಿ' ಬಿರುದನ್ನು ನೀಡಿ ಸುಮಾರು 7 ದಶಕಗಳ ಕಾಲ ಮೈಸೂರು ಶೈಲಿಯ ಭರತನಾಟ್ಯಕ್ಕೆ ಕೊಟ್ಟ ಅವರ ಗಮನಾರ್ಹ ಕೊಡುಗೆಯನ್ನು ಗುರುತಿಸಿ ಗೌರವಿಸಿದರು. ಪ್ರತಿಯಾಗಿ 88 ವರ್ಷದ 'ನಾಟ್ಯ ಸರಸ್ವತಿ' ತಾಯಮ್ಮನವರು ನೃತ್ಯ ಪ್ರದರ್ಶನವನ್ನೂ ತೋರಿ ಸಭಿಕರ ಮೆಚ್ಚುಗೆ ಗಳಿಸಿದರು. 1947ರಲ್ಲಿ ಕಾಲವಾಗಿ ತಾವು ಪ್ರಸಿದ್ಧಿಗೆ ತಂದಿದ್ದ ಮೈಸೂರು ಸಂಪ್ರದಾಯ ನೃತ್ಯ ಪದ್ಧತಿಯನ್ನು ಮುಂದಿನ ಪೀಳಿಗೆಯವರಿಗೆ ಬಿಟ್ಟು ಹೋದರು.

ಜಟ್ಟಿ ತಾಯಮ್ಮನವರ ತರುವಾಯ ಅವರ ಶಿಷ್ಯೆ ವೆಂಕಟಲಕ್ಷ್ಮಮ್ಮನವರು ಈ ವಿಶೇಷತೆಯನ್ನು ಮುಂದುವರಿಸಿಕೊಂಡು ಬಂದು ಕೀರ್ತಿ ಗಳಿಸಿದರು. ಮೈಸೂರು ಶೈಲಿಯ ಭರತನಾಟ್ಯಕ್ಕೆ ಇನ್ನಷ್ಟು ಭದ್ರ ತಳಪಾಯ ಹಾಕಿದರು.

ರಸ್ತೆ ಅಪಘಾತ: ವಿಜಯ್ ದಳಪತಿಯ ಟಿವಿಕೆ ಪಕ್ಷದ ಇಬ್ಬರು ಕಾರ್ಯಕರ್ತರ ಸಾವು

ಚೆನ್ನೈ,ಅ.27–ತಮಿಳು ನಟ ವಿಜಯ್ ದಳಪತಿ ಅವರ ರಾಜಕೀಯ ಪಕ್ಷವಾದ ತಮಿಳಗ ವೆಟ್ರಿ ಕಳಗಂ (ಟಿವಿಕೆ) ಪಕ್ಷದ ಮೊದಲ ಸಾರ್ವಜನಿಕ ಸಮಾವೇಶದಲ್ಲಿ ಪಾಲ್ಗೊಳ್ಳಲು ತೆರಳುತ್ತಿದ್ದ ಇಬ್ಬರು ಪಕ್ಷದ ಕಾರ್ಯಕರ್ತರು ರಸ್ತೆ ಅಪಘಾತದಲ್ಲಿ ಭಾನುವಾರ ಮೃತಪಟ್ಟಿದ್ದಾರೆ.

ಕಲ್ಲಕುರಿಚಿ ಜಿಲ್ಲೆಯ ಉಲುಂದೂರ್ ಪೇಟೆ ಬಳಿಯ ಶೇಕ್ ಹುಸೇನ್ ಪೇಟೆನಲ್ಲಿ ಎಸ್‌ಯುವಿ ಕಾರು ಪಲ್ಟಿಯಾದ ಪರಿಣಾಮ ಟಿವಿಕೆ ಪಕ್ಷದ ಇಬ್ಬರು ಕಾರ್ಯಕರ್ತರು ಮೃತಪಟ್ಟಿರುವುದಾಗಿ ಪೊಲೀಸರು ತಿಳಿಸಿದ್ದಾರೆ. ಅಪಘಾತಕ್ಕೀಡಾದ ಕಾರಿನಲ್ಲಿದ್ದ ಇತರ ಮೂವರು ಗಂಭೀರವಾಗಿ ಗಾಯಗೊಂಡಿದ್ದು, ಉಳುಂದೂರು ಪೇಟೆ ಜನರಲ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಮೃತರನ್ನು ತಿರುಚ್ಚಿಯ ಕಲೈ ಮತ್ತು ಶ್ರೀನಿವಾಸನ್ ಎಂದು ಗುರುತಿಸಲಾಗಿದೆ. ಅವರು ಟಿವಿಕೆ ಪಕ್ಷದ ಮೊದಲ ಸಾರ್ವಜನಿಕ ಸಭೆಯಲ್ಲಿ ಭಾಗವಹಿಸಲು ವಿಕ್ರವಾಂಡಿಗೆ ತೆರಳುತ್ತಿದ್ದರು. ಕಾರು ಶೇಕ್ ಹುಸೇನ್‌ಪೇಟೆ ಬಳಿ ಬಂದಾಗ ಚಾಲಕನ ನಿಯಂತ್ರಣ ತಪ್ಪಿ



ಪಲ್ಟಿಯಾಗಿದೆ. ವಿಕ್ರವಾಂಡಿಯಲ್ಲಿ 85 ಎಕರೆ ವಿಸ್ತೀರ್ಣದ ಸಮ್ಮೇಳನ ಸ್ಥಳವು ಚೆನ್ನೈನ ಐತಿಹಾಸಿಕ ಕೋಟೆ ಸೇಂಟ್ ಜಾರ್ಜ್ ಮಾದರಿಯ ಭವ್ಯವಾದ ಪ್ರವೇಶದ್ವಾರವನ್ನು ಹೊಂದಿದೆ. ಸುಮಾರು 2 ಲಕ್ಷಕ್ಕೂ ಅಧಿಕ ಜನರು ಪಾಲ್ಗೊಳ್ಳುವ ಸಾಧ್ಯತೆಯಿದೆ. ಭದ್ರತೆಗಾಗಿ ಸುಮಾರು 6,000 ಪೊಲೀಸರನ್ನು ತಮಿಳುನಾಡು ಗೃಹ ಇಲಾಖೆ ನಿಯೋಜಿಸಿದೆ.

ವಿಚಾರವಾದಿ ದ್ರಾವಿಡ ಧೀಮಂತ 'ಪೆರಿಯಾರ್' ಇವಿ ರಾಮಸಾಮಿಯಿಂದ ಹಿಡಿದು ಡಾ.ಅಂಬೇಡ್ಕರ್ ಮತ್ತು ಕಾಂಗ್ರೆಸ್ ಹಿರಿಯ ಕೆ.ಕಾಮರಾಜ್, ಹಿಂದಿನ ತಮಿಳು ರಾಜರು–ಚೇರ, ಚೋಳ, ಪಾಂಡ್ಯ– ಹಾಗೂ ಧೀರ ರಾಣಿ ವೇಲು ನಾಚಿಯಾರ್‌ವರೆಗೆ ರಾಜಕೀಯ ದಿಗ್ಗಜರ ಬೃಹತ್ ಕಟೌಟ್‌ಗಳಿಂದ ಸ್ಥಳವನ್ನು ಅಲಂಕರಿಸಲಾಗಿದೆ. ವಿಜಯ್ ಅವರ ಕಟೌಟ್ ಟಿವಿಕೆಗಳ ರಾಜಕೀಯ ದೃಷ್ಟಿಕೋನದ ಸೂಚನೆ ನೀಡುವಂತೆ ಇವೆ.

ವಾಲ್ಮೀಕಿ ರಚಿತ ರಾಮಾಯಣ ಶ್ರೇಷ್ಠ ಮಹಾಕಾವ್ಯ

ವಾಲ್ಮೀಕಿ ಜಯಂತಿಯ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಡಾ.ಹೆಚ್.ಬಿ.ಮಂಜುನಾಥ್ ಅಭಿಮತ

ಮೈಸೂರು, ಅ.27(ಎಸ್‌ಪಿಎನ್)– ಮಹರ್ಷಿ ವಾಲ್ಮೀಕಿ ಜಯಂತಿ ಅಂಗವಾಗಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ 'ಪ್ರತಿಭಾ ಪುರಸ್ಕಾರ' ಹಾಗೂ ಹಿರಿಯ ಪ್ರಾಥಮಿಕ ಶಾಲಾ ಶಿಕ್ಷಕರಿಗೆ 'ಉತ್ತಮ ಶಿಕ್ಷಕ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು ಜೆಎಲ್‌ಬಿ ರಸ್ತೆಯ ಐಡಿಯಲ್ ಜಾವಾ ರೋಟರಿ ಸಭಾಂಗಣದಲ್ಲಿ ಮೈಸೂರು ಜಿಲ್ಲಾ ನಾಯಕ ಶಿಕ್ಷಕರ ಸಂಘದ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಏರ್ಪಡಿಸಿದ್ದ ಸಮಾರಂಭದಲ್ಲಿ ಹಿರಿಯ ಶಿಕ್ಷಕರಾದ ಮಾಲಂಗಿ ಸುರೇಶ್, ನಟರಾಜು, ರವಿಕುಮಾರ್, ಶಾಂತಕುಮಾರ್, ಜವರನಾಯಕ, ಹನುಮಂತ, ರೇವಣ್ಣ, ಮಂಜುನಾಥ, ಕೆ.ಆರ್.ವೆಂಕಟೇಶ ನಾಯಕ, ಕೃಷ್ಣನಾಯಕ ಅವರಿಗೆ ಉತ್ತಮ ಶಿಕ್ಷಕ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ನಂತರ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತೀ ಹೆಚ್ಚು ಅಂಕಗಳಿಸಿದ ಎಸ್.ಪ್ರದ್ಯುಮ್ನ, ಎನ್.ಎನ್.ದೀಕ್ಷಾ, ತೇಜ್ ಪ್ರಸಾದ್, ಪ್ರಿಯಾಂಕ, ಬಿ.ಎಸ್. ಸಿಂಚನ, ಎಸ್.ಸತ್ಯಶ್ರೀ, ಎಂ.ಎನ್.ಅಮೂಲ್ಯ ಹಾಗೂ ನೀಟ್ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ 872 ರ‍್ಯಾಂಕ್ ಪಡೆದ ಚಾಮರಾಜನಗರ ಮೆಡಿಕಲ್ ಕಾಲೇಜಿನ ಪ್ರಥಮ ವರ್ಷದ ಎಂಬಿಬಿಎಸ್‌ಗೆ ಪ್ರವೇಶಾತಿ ಪಡೆದಿರುವ ವೈ.ಜಿ.ಲಿಖಿತ ಅವರನ್ನು ಸನ್ಮಾನಿಸಲಾಯಿತು.



ಮಹರ್ಷಿ ವಾಲ್ಮೀಕಿ ಜಯಂತಿ ಅಂಗವಾಗಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ 'ಪ್ರತಿಭಾ ಪುರಸ್ಕಾರ' ಹಾಗೂ ಹಿರಿಯ ಪ್ರಾಥಮಿಕ ಶಾಲಾ ಶಿಕ್ಷಕರಿಗೆ 'ಉತ್ತಮ ಶಿಕ್ಷಕ' ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು.

ನಂತರ ಮುಕ್ತ ವಿವಿಯ ಮನೋ ವಿಜ್ಞಾನ ವಿಭಾಗದ ಪ್ರಾಧ್ಯಾಪಕ ಡಾ.ಎಚ್.ಬಿ. ಮಂಜುನಾಥ್ ಮಾತನಾಡಿ, ಮಹರ್ಷಿ ವಾಲ್ಮೀಕಿ ರಚಿತ 'ರಾಮಾಯಣ' ಜಗತ್ತಿನ ಅತೀ ಶ್ರೇಷ್ಠ ಮಹಾಕಾವ್ಯಗಳ ಸಾಲಿನಲ್ಲಿ ಮೊದಲನೆಯದು ಎಂದು ಅಭಿಪ್ರಾಯಪಟ್ಟರು.

ತ್ರೇತಾಯುಗದಲ್ಲಿ ರಚಿತವಾದ ರಾಮಾಯಣ ಇಂದಿಗೂ ಪ್ರಸ್ತುತ. ಏಕೆಂದರೆ ರಾಮಾಯಣದಲ್ಲಿ ಬರುವ ಅಯೋಧ್ಯೆ, ಕಿಷ್ಕಿಂದೆ, ಶ್ರೀಲಂಕಾ ಹಾಗೂ ರಾಮಸೇತು ಸೇರಿದಂತೆ ಎಲ್ಲಾ ಸ್ಥಳದ ಹೆಸರುಗಳನ್ನು ಇಂದಿಗೂ ಕಾಣಬಹುದು. ಗುರು ಕುಲ ಶಿಕ್ಷಣ ಪದ್ಧತಿ ಶ್ರೇಷ್ಠ ಎಂಬುದಕ್ಕೆ ಲವ–ಕುಶರಿಗೆ ಶಿಕ್ಷಣ ನೀಡಿದ ಪ್ರಸಂಗವನ್ನು ಉಲ್ಲೇಖಿಸಿದ ಅವರು, ತ್ರೇತಾಯುಗದಲ್ಲಿ ಲವ–ಕುಶರಿಗೆ 27 ಸಾವಿರ ಶ್ಲೋಕಗಳನ್ನು ಕಲಿಸಿದ ಕೀರ್ತಿ ವಾಲ್ಮೀಕಿ ಅವರಿಗೆ ಸಲ್ಲುತ್ತದೆ ಎಂದು ಹೇಳಿದರು.

ವಾಲ್ಮೀಕಿ ರಚಿತ ರಾಮಾಯಣ ಆಧಾರದ ಮೇಲೆ ಇಲ್ಲಿವರೆಗೆ 3 ಸಾವಿರ ರಾಮಾಯಣ ಪುಸ್ತಕಗಳು ರಚಿತವಾಗಿವೆ. ಅಂತೆಯೇ ಕನ್ನಡದಲ್ಲಿ ಕುವೆಂಪು ರಚಿತ 'ಶ್ರೀರಾಮಾಯಣ ದರ್ಶನಂ' ಹಾಗೂ ತೆಲುಗಿನಲ್ಲಿ ವಿಶ್ವನಾಥ ಸತ್ಯನಾರಾಯಣ ರಚಿತ 'ರಾಮಾಯಣ ಕಲ್ಪವೃಕ್ಷಂ' ಕೃತಿಗಳಿಗೆ ಜ್ಞಾನಪೀಠ ಪ್ರಶಸ್ತಿ ಬಂದಿರುವುದಕ್ಕೆ ಮೂಲ ಕೃತಿ ವಾಲ್ಮೀಕಿ ರಚಿತ ರಾಮಾಯಣವೇ ಆಧಾರ. ರಾಮಾಯಣ ಕಥಾ ವಸ್ತು ಆಧರಿಸಿ, ಇಲ್ಲಿವರೆಗೆ ವಿವಿಧ ಲೇಖಕರು 10 ಸಾವಿರ ನಾಟಕ ಕೃತಿಗಳನ್ನು ರಚಿಸಿದ್ದಾರೆ ಎಂಬುದು ಹೆಮ್ಮೆಯ ವಿಷಯ ಎಂದರು.

ರಾಮಾಯಣದಲ್ಲಿ ಹೆಚ್ಚು ರೂಪಕ ಅಲಂಕಾರ ಬಳಕೆಯಾಗಿರುವುದರಿಂದ ಕಾಳಿದಾಸ ಕವಿ, ಮಹರ್ಷಿ ವಾಲ್ಮೀಕಿ ಅವರನ್ನು ಕವಿಕುಲ ಚಕ್ರವರ್ತಿ ಎಂಬುದಾಗಿಯೂ ವರ್ಣಿಸಿದ್ದಾರೆ. ಅಲ್ಲದೆ, ಜಗತ್ತಿನ ಶ್ರೇಷ್ಠ ವಿಮರ್ಶಕ ಥಾಮಸ್ ಸ್ಟರ್ನ್ಸ್ ಎಲಿಯಟ್ ಪ್ರಕಾರ, ವಾಲ್ಮೀಕಿ ರಾಮಾಯಣ ಜಗತ್ತಿನ ಶ್ರೇಷ್ಠ ಕಾವ್ಯ ಸಂಪತ್ತು ಎಂದು ಬಣ್ಣಿಸಿದ್ದಾರೆ ಎಂದ ಅವರು, ರಾಮಾಯಣದಲ್ಲಿ ಬರುವ ಪುಷ್ಪಕ ವಿಮಾನ ಯಾವ ಯಾವ ಸ್ಥಳದಲ್ಲಿ ಸಂಚರಿಸುವ ಸ್ಥಳಗಳ ಮಾಹಿತಿಯೂ ಇದೆ. ರಾಮಾಯಣ ಮಹಾಕಾವ್ಯವನ್ನು ಎಷ್ಟು ಬಾರಿ ಅಧ್ಯಯನ ನಡೆಸಿದರೂ ಒಂದೊಂದು ದೃಷ್ಟಿಕೋನದಲ್ಲಿ ಅರ್ಥೈಸುತ್ತದೆ ಎಂದು ತಿಳಿಸಿದರು.


ಈ ವೇಳೆ ರಾಜ್ಯ ನಾಯಕರ ಹಿತ ರಕ್ಷಣಾ ವೇದಿಕೆ ಅಧ್ಯಕ್ಷ ದ್ಯಾವಪ್ಪ ನಾಯಕ, ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ನಾಗರಾಜು, ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆ ಅಧ್ಯಕ್ಷೆ ಯಮುನಾ, ರಾಜ್ಯ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಸೋಮೇಗೌಡ, ಜಿಲ್ಲಾ ನಾಯಕ ಶಿಕ್ಷಕ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ನಾಗಲಿಂಗಪ್ಪ, ಕಾರ್ಯದರ್ಶಿ ಕುಮಾರ್, ಉಪಾಧ್ಯಕ್ಷ ಕರಿಯಪ್ಪ ನಾಯಕ, ಮುಖಂಡರಾದ ಕೃಷ್ಣಮೂರ್ತಿ, ಜವರೇಗೌಡ, ಪ್ರಭಾಕರ್, ರಾಜು, ರಾಜೇಂದ್ರ, ಹೇಮಾ, ಉದ್ಬೂರು ಕೃಷ್ಣ ಸೇರಿದಂತೆ ಇತರರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಕೆಆರ್‌ಎಸ್, ಕಬಿನಿ, ಗಗನಚುಕ್ಕಿ-ಭರಚುಕ್ಕಿ ಜಲಪಾತಗಳ ಸೊಬಗು ಅನಾವರಣ







ಮೈಸೂರು, ಅ.27(ಎಂಕೆ)– ಮೈಸೂರು ದಸರಾ ವಸ್ತುಪ್ರದರ್ಶನ ಆವರಣದಲ್ಲಿ ಕೃಷ್ಣರಾಜಸಾಗರ ಅಣೆಕಟ್ಟು (ಕೆಆರ್‌ಎಸ್), ಕಬಿನಿ ಜಲಾಶಯ ಹಾಗೂ ಭೋರ್ಗರೆಯುವ ಗಗನಚುಕ್ಕಿ-ಭರಚುಕ್ಕಿ ಜಲಪಾತಗಳನ್ನೊಳಗೊಂಡ ಬೃಹತ್ ಮಳಿಗೆ ವೀಕ್ಷಣೆಗೆ ಶನಿವಾರ ಚಾಲನೆ ದೊರೆಯಿತು.

ಕಾವೇರಿ ನೀರಾವರಿ ನಿಗಮ ನಿಯಮಿತ ಹಾಗೂ ಜಲಸಂಪನ್ಮೂಲ ಇಲಾಖೆಯ ಕೃಷ್ಣರಾಜಸಾಗರ ಅಣೆಕಟ್ಟು ಮಾದರಿಯ ಬೃಹತ್ ಮಳಿಗೆಯನ್ನು ಕಾವೇರಿ ನೀರಾವರಿ ನಿಗಮದ ಅಧೀಕ್ಷಕ ಇಂಜಿನಿಯರ್(ಕಬಿನಿ ಮತ್ತು ವರುಣ ನಾಲೆ ವೃತ್ತ) ಮಹೇಶ್ ಉದ್ಘಾಟಿಸುವ ಮೂಲಕ ಸಾರ್ವಜನಿಕರ ವೀಕ್ಷಣೆಗೆ ಅನುವು ಮಾಡಿಕೊಟ್ಟರು.

ಕಾರ್ಯಪಾಲಕ ಇಂಜಿನಿಯರ್ ಭಾಸ್ಕರ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ಗಳಾದ ಯಶವಂತೇಗೌಡ, ದೀಪಕ್, ಮಹೇಶ್ ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು. ಮಳಿಗೆಯಲ್ಲಿ ಕಾವೇರಿ ಹಾಗೂ ಕಾವೇರಿಯ ಉಪನದಿಗಳಿಗೆ ಅಡ್ಡಲಾಗಿ ಕಟ್ಟುವ ಸಣ್ಣ ಸಣ್ಣ ಅಣೆಕಟ್ಟೆಗಳು ಹಾಗೂ ಕಾಲುವೆಗಳ ಮೂಲಕ ನೀರು ಹರಿಸಿ ನೂರಾರು ಎಕರೆ ಪ್ರದೇಶದ ಬೇಸಾಯಕ್ಕೆ ಅನುಕೂಲ ಮಾಡಿಕೊಡುವ ವಿಧಾನವನ್ನು ಅಚ್ಚುಕಟ್ಟಾಗಿ ಚಿತ್ರಿಸಲಾಗಿದೆ.

ದಸರಾ ವಸ್ತುಪ್ರದರ್ಶನ ಆವರಣದಲ್ಲಿ ಮತ್ತೊಂದು ಆಕರ್ಷಣೆ





ದಸರಾ ವಸ್ತುಪ್ರದರ್ಶನದಲ್ಲಿ ಕೃಷ್ಣರಾಜಸಾಗರ ಅಣೆಕಟ್ಟು ಮಾದರಿಯ ಬೃಹತ್ ಮಳಿಗೆ ವೀಕ್ಷಣೆಗೆ ಚಾಲನೆ ನೀಡಲಾಯಿತು.

ಕೆಆರ್‌ಎಸ್ ಅಣೆಕಟ್ಟೆಯಿಂದ ಆರಂಭಗೊಂಡು ಎಡಮುರಿಯಲ್ಲಿ ದೇವರಾಯ, ಚಿಕ್ಕದೇವರಾಯ ಕಾಲುವೆ, ಬಲಮುರಿಯಲ್ಲಿ ವಿರ್ಜಾ ಕಾಲುವೆ, ಶ್ರೀರಂಗಪಟ್ಟಣದಲ್ಲಿನ ಬಂಗಾರದೊಡ್ಡಿ ಅಣೆಕಟ್ಟು, ಮಹದೇವಪುರ ಫಾಲ್ಸ್ ಬಳಿಯ ರಾಮಸ್ವಾಮಿ ಮತ್ತು ರಾಜಪರಮೇಶ್ವರಿ ನಾಲೆ, ಕಬಿನಿಯ ತ್ರಿವೇಣಿ ಸಂಗಮ, ತಲಕಾಡಿನ ಮಾದವಮಂತ್ರಿ ಅಣೆಕಟ್ಟು, ಶಿವಾ ಅಣೆಕಟ್ಟು ಹಾಗೂ ಗಗನಚುಕ್ಕಿ-ಭರಚುಕ್ಕಿ ಜಲಪಾತ ಚಿತ್ರಣ ನಯನ ಮನೋಹರವಾಗಿ ಮೂಡಿ ಬಂದಿದೆ.

ಫಾಲ್ಸ್ ಆಕರ್ಷಣೆ: ಮಳಿಗೆ ಮುಂಭಾಗದಲ್ಲಿ ಕೆಆರ್‌ಎಸ್ ಡ್ಯಾಂ ಮಾದರಿಯಲ್ಲಿ ನೀರು ಹರಿಯುತ್ತಿದ್ದರೆ, ಮಳಿಗೆಯ ಬಲ ಭಾಗದಲ್ಲಿ ಚುಕ್ಕಿ-ಭರಚುಕ್ಕಿ ಜಲಪಾತದ ವಿಹಂಗಮ ನೋಟ ಕಣ್ಮನ ಸೆಳೆಯಲಿದೆ. ಕಾವೇರಿ ಮಾತೆ ಪ್ರತಿಮೆಯ ಎಡ ಮತ್ತು ಬಲಗಡೆ ಆನೆಗಳ ಸೊಂಡಿಲಿನಿಂದ ನೀರು ಚಿಮ್ಮುವ ರೀತಿಯಲ್ಲಿ ವಿನ್ಯಾಸಗೊಳಿಸಿರುವುದು ಸೆಲ್ಫಿ ಪ್ರಿಯರ ಆಕರ್ಷಣೆಯಾಗಲಿದೆ.

ರೋಟರಿ ಮೈಸೂರು ಉತ್ತರ ಗೌರವ ಸದಸ್ಯತ್ವ



ರೋಟರಿ ಮೈಸೂರು ಉತ್ತರ ಸಂಸ್ಥೆಯಿಂದ ಸರಿಗಮಪ ಹಾಗೂ ಎದೆ ತುಂಬಿ ಹಾಡಿದೆನು ಖ್ಯಾತಿಯ ಅಮೂಲ್ಯ ಅವರಿಗೆ ಗೌರವ ಸದಸ್ಯತ್ವ ನೀಡಿ ರೋಟರಿ ಸಹಾಯಕ ಗವರ್ನರ್ ಡಾ.ಪ್ರಹ್ಲಾದ್, ರಂಗಕರ್ಮಿ ರಾಜಶೇಖರ ಕದಂಬ ಗೌರವಿಸಿದರು. ರೋಟರಿ ಅಧ್ಯಕ್ಷ ಪ್ರಭಾಕರ್, ಕಾರ್ಯದರ್ಶಿ ಎಲ್.ಆರ್.ಮಹದೇವಸ್ವಾಮಿ ಚಿತ್ರದಲ್ಲಿದ್ದಾರೆ.

ಚೆಲುವಾಂಬ ಆಸ್ಪತ್ರೆಯಲ್ಲಿ ಪೋಲಿಯೋ ಅರಿವು



ವಿಶ್ವ ಪೋಲಿಯೋ ದಿನದ ಅಂಗವಾಗಿ ಮೈಸೂರಿನ ಚೆಲುವಾಂಬ ಆಸ್ಪತ್ರೆಯಲ್ಲಿ ಪೋಲಿಯೋ ಅರಿವು ಮೂಡಿಸುವ ಕಾರ್ಯಕ್ರಮ ನಡೆಯಿತು.

ಮೈಸೂರು, ಅ. 27–ಪೋಷಕರು ಪೋಲಿಯೋ ಲಸಿಕೆಯ ಮಹತ್ವ ಅರಿತು, ಕಾಲಕಾಲಕ್ಕೆ ತಕ್ಕಂತೆ ಮಕ್ಕಳಿಗೆ ಲಸಿಕೆ ಕೊಡಿಸುವ ಮೂಲಕ, ಸಂಪೂರ್ಣ ಪೋಲಿಯೋ ನಿರ್ಮೂಲನೆಗೆ ಶ್ರಮಿಸಬೇಕಿದೆ ಎಂದು ರೋಟರಿ ಕ್ಲಬ್ ಆಫ್ ಹೆರಿಟೇಜ್ ಮೈಸೂರು ಅಧ್ಯಕ್ಷ ಆರ್.ರಾಜೇಶ್ ಸಲಹೆ ನೀಡಿದರು.

ವಿಶ್ವ ಪೋಲಿಯೋ ದಿನದ ಅಂಗವಾಗಿ ಚೆಲುವಾಂಬ ಆಸ್ಪತ್ರೆಯಲ್ಲಿ ರೋಟರಿ ಕ್ಲಬ್ ಆಫ್ ಹೆರಿಟೇಜ್ ಮೈಸೂರು ವತಿಯಿಂದ ನಡೆದ ಲಸಿಕೆಯ ಮಹತ್ವದ ಅರಿವು ಮೂಡಿಸುವ ಕಾರ್ಯಕ್ರಮದಲ್ಲಿ ಮಕ್ಕಳಿಗೆ ಲಸಿಕೆ ಹಾಕಿ ಮಾತನಾಡಿದರು.

ಐದು ವರ್ಷದೊಳಗಿನ ಮಕ್ಕಳಿಗೆ ಸಮಯಕ್ಕೆ ಸರಿಯಾಗಿ ಪೋಲಿಯೋ ಲಸಿಕೆ ಕೊಡಿಸುವುದು ಪೋಷಕರ ಮಹತ್ವದ ಜವಾಬ್ದಾರಿ. ಏಕೆಂದರೆ ಲಸಿಕೆ ನೀಡದೇ ಹೋದಲ್ಲಿ ಮಕ್ಕಳು ಅಂಗವೈಕಲ್ಯತೆಗೆ ತುತ್ತಾಗುತ್ತಾರೆ. ಆದ್ದರಿಂದ ತಪ್ಪದೇ ಲಸಿಕೆ ಕೊಡಿಸಬೇಕು. ಈವರೆಗೂ ಪೋಲಿಯೋ ನಿರ್ಮೂಲನೆಗೆ ಜಗತ್ತಿನಾದ್ಯಂತ ಆರ್ಥಿಕವಾಗಿಯೂ ಹಾಗೂ ಅರಿವು ಮೂಡಿಸುವ ನಿಟ್ಟಿನಲ್ಲಿ ರೋಟರಿ ಸಂಸ್ಥೆ ಸಾಕಷ್ಟು ಶ್ರಮವಹಿಸಿದೆ ಎಂದರು.

ಇದೇ ವೇಳೆ ಆಸ್ಪತ್ರೆಗೆ ದಾಖಲಾಗಿರುವ ಸುಮಾರು 50ಕ್ಕೂ ಅಧಿಕ ನವಜಾತ ಶಿಶುಗಳಿಗೆ ಅಗತ್ಯವಿರುವ ಸ್ವೆಟರ್ ಹಾಗೂ ಇನ್ನಿತರ ಅಗತ್ಯ ವಸ್ತುಗಳುಳ್ಳ ಕಿಟ್ ಅನ್ನು ವಿತರಿಸಲಾಗಿದೆ. ನಮ್ಮ ರೋಟರಿ ಸಂಸ್ಥೆ ವತಿಯಿಂದ ಈ ರೀತಿಯ ಸೇವಾ ಕಾರ್ಯಕ್ರಮಗಳನ್ನು ನಿರಂತರವಾಗಿ ಹಮ್ಮಿಕೊಳ್ಳಲಾಗುವುದು ಎಂದು ಹೇಳಿದರು.

ಚೆಲುವಾಂಬ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ರಾಜೇಂದ್ರಕುಮಾರ್ ಮಾತನಾಡಿ, ಪೋಲಿಯೋ ಲಸಿಕೆ ಕುರಿತು ಸಾಕಷ್ಟು ಅರಿವು ಮೂಡಿಸಿ, ಮನೆ-ಮನೆಗೆ ತೆರಳಿ ಲಸಿಕೆ ಕೊಡಿಸುವ ಕಾರ್ಯಕ್ಕೆ ಮುಂದಾದರೂ ಇನ್ನೂ ಸಾಕಷ್ಟು ಮಕ್ಕಳು ಲಸಿಕೆ ವಂಚಿತರಾಗಿ ಅಂಗವೈಕಲ್ಯತೆಗೆ ತುತ್ತಾಗುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು. ರೋಟರಿ ಕ್ಲಬ್ ಆಫ್ ಹೆರಿಟೇಜ್ ಮೈಸೂರು ಸಂಸ್ಥಾಪಕ ಅಧ್ಯಕ್ಷ ರೊ.ಮಂಜುನಾಥ್.ಕೆ, ಕ್ಲಬ್‌ನ ಹಿರಿಯ ಸದಸ್ಯರಾದ ರೊ.ನಾರಾಯಣ್ ನಾಯಕ್, ರೊ.ರಾಘವೇಂದ್ರ ಆಚಾರ್, ಚಂದನ್, ಜೀವನಿಧಿ ಟ್ರಸ್ಟ್‌ನ ಆಯೇಷಾ, ಆಸ್ಪತ್ರೆಯ ಕಚೇರಿಯ ಅಧೀಕ್ಷಕರರಾದ ದೇವರಾಜು, ಶುಶ್ರೂಷಕರು ಹಾಗೂ ಸಿಬ್ಬಂದಿ ವರ್ಗದವರು ಹಾಜರಿದ್ದರು.

ಸಂಗೀತಕ್ಕೆ ಎಲ್ಲರನ್ನೂ ಆಕರ್ಷಿಸುವ ಶಕ್ತಿಯಿದೆ

ಕಲಾ ಸಂಭ್ರಮ–2024ರ ವಿವಿಧ ಸ್ಪರ್ಧೆ ಉದ್ಘಾಟಿಸಿ ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅಭಿಪ್ರಾಯ



ಮೈಸೂರಿನ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ "ಕಲಾಸಂಭ್ರಮ–2024 ರಾಜ್ಯ ಮಟ್ಟದ ಅಂತರ ಕಾಲೇಜು ಚರ್ಚಾಸ್ಪರ್ಧೆ, ಭಾವಗೀತೆ ಗಾಯನ ಸ್ಪರ್ಧೆ ಕಾರ್ಯಕ್ರಮವನ್ನು ಮಡ್ಡೀಕೆರೆ ಗೋಪಾಲ್ ಉದ್ಘಾಟಿಸಿದರು.

ಮೈಸೂರು,ಅ.27–ಹೃದಯದ ಭಾಷೆ, ವಿಶ್ವದ ಭಾಷೆಯಾದ ಸಂಗೀತಕ್ಕೆ ಎಲ್ಲರನ್ನು ಆಕರ್ಷಿಸುವ ಶಕ್ತಿಯಿದ್ದು ಜ್ಞಾನ, ವಿಜ್ಞಾನಕ್ಕಿಂತ ಭಾರತದ ಸಂಗೀತ ಬಹಳ ಮುಂದಿದೆ ಎಂದು ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ನ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅಭಿಪ್ರಾಯ ಪಟ್ಟರು.

ಮೈಸೂರಿನ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ಪ್ರಸಕ್ತ ಸಾಲಿನ 'ಕಲೆಯೇ ಬದುಕಿನ ಭಾವ ಲಹರಿ' "ಕಲಾಸಂಭ್ರಮ–2024 ರಾಜ್ಯ ಮಟ್ಟದ ಅಂತರ ಕಾಲೇಜು ಚರ್ಚಾ ಸ್ಪರ್ಧೆ ಹಾಗೂ ಭಾವಗೀತೆ ಗಾಯನ ಸ್ಪರ್ಧೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಭಾರತ ದೇಶವು ವಿಶ್ವದ ಇತರೆ ದೇಶಗಳಿಂದ ಹಲವು ಕಾರಣಗಳಿಗಾಗಿ ಮುಂಚೂಣಿಯಲ್ಲಿದೆ. ವೈಜ್ಞಾನಿಕವಾಗಿ ಯೋಗವು ಮಾನವನ ಆರೋಗ್ಯವನ್ನು ಸುಸ್ಥಿತಿಯಲ್ಲಿ ಇಡುವ ಕಾರಣಕ್ಕಾಗಿ ಗಾಂಧೀ ಹುಟ್ಟಿದ ದಿನವನ್ನು ಅಹಿಂಸಾ ದಿನ ಮತ್ತು ವಿಶ್ವ ಯೋಗದಿನವನ್ನಾಗಿ ಆಚರಿಸುತ್ತಿದ್ದೇವೆ. ಹಾಗೆಯೇ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಹುಟ್ಟಿದ ದಿನವನ್ನು ವಿಶ್ವ ಜ್ಞಾನದಿನವನ್ನಾಗಿ ಆಚರಿಸುತ್ತಿದ್ದೇವೆ. ವಿಶ್ವದ ಅನೇಕ ರಾಷ್ಟ್ರಗಳು ತಮ್ಮ ಆಯವ್ಯಯದ ಬಹುಪಾಲನ್ನು ರಕ್ಷಣಾ ವಲಯಕ್ಕೆ ಖರ್ಚು ಮಾಡುತ್ತಿವೆ. ಕಾರಣ ಪ್ರಪಂಚದ ಹಲವು ರಾಷ್ಟ್ರಗಳು ಯುದ್ಧೋನ್ಮಾದದಲ್ಲಿದ್ದು, ಜಗತ್ತು ಯುದ್ಧ ಭೀತಿಯಲ್ಲಿದೆ. ಅದುದರಿಂದ ದೇಶವನ್ನು ಒಗ್ಗೂಡಿಸಲು ಸಮಾನ ಭಾಷೆ, ಸಮಾನ ಧರ್ಮ, ಸಮಾನ ಶಿಕ್ಷಣ ಬೇಕಾಗಿದೆ. ಈ ದಿಸೆಯಲ್ಲಿ ವಿದ್ಯಾರ್ಥಿಗಳ ಸುಪ್ತ ಪ್ರತಿಭೆ ಹೊರತರುವಲ್ಲಿ ಕಾಲೇಜುಗಳು ಆಯೋಜಿಸುವ ಇಂತಹ ಚರ್ಚಾ ಸ್ಪರ್ಧೆ, ಭಾವಗೀತೆಯಂತಹ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡು ವಿದ್ಯಾರ್ಥಿಗಳು ಉತ್ತಮ ಪ್ರಜೆಗಳಾಗಿ ರೂಪುಗೊಳ್ಳಬೇಕು ಎಂದು ಕರೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಅಧ್ಯಕ್ಷ ಗುಂಡಪ್ಪಗೌಡ ಮಾತನಾಡಿ, ಹಿಂದೆ ಮೈಸೂರಿನ ಮಹಾರಾಜರು ತಮ್ಮ ಆಡಳಿತದಲ್ಲಿ ಕಲೆ ಮತ್ತು ಸಂಗೀತಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡುತ್ತಿದ್ದ ಕಾರಣದಿಂದ ಅಂದು ಮೈಸೂರು ಕಲೆಗಳ ತವರೂರಾಗಿ ಮಾರ್ಪಟ್ಟಿತ್ತು. ಇಂತಹ ಭವ್ಯ ಇತಿಹಾಸವನ್ನು ಮುಂದುವರೆಸಿಕೊಂಡು ಹೋಗಬೇಕಾಗಿರುವ ಜವಾಬ್ದಾರಿ ಪ್ರತಿಯೊಬ್ಬ ನಾಗರೀಕನ ಆದ್ಯ ಕರ್ತವ್ಯವಾಗಿದೆ. ಜನಪದರು ಅವಿದ್ಯಾವಂತರಾದರೂ ಕಲೆಯಲ್ಲಿ ಮುಂದಿದ್ದು ಸುಗ್ಗಿಯ ನಂತರ ಬಿಡುವಿನ ವೇಳೆಯನ್ನು ನಾಟಕ, ಹಾಡು ಕಟ್ಟುವುದು, ಕೋಲಾಟ ಇನ್ನು ಮುಂತಾದ ದೇಶೀಯ ಕಲೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಿದ್ದರು ಎಂದರು.

ಪ್ರಾಂಶುಪಾಲ ಡಾ.ಎಸ್.ಮರೀಗೌಡ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕು.ಸಂಹಿತ, ಕು.ಸ್ಪಂದನ ಹಾಗೂ ಕು.ಅನುಷ ಪ್ರಾರ್ಥಿಸಿದರು. ಕಲಾಸಂಭ್ರಮ 2024ರ ಸಂಯೋಜಕಿ ಪ್ರೊ.ಸವಿತಾ ಸ್ವಾಗತಿಸಿದರು. ಸಂಸ್ಥೆಯ ಕಾರ್ಯದರ್ಶಿ ಪಿ.ವಿಶ್ವನಾಥ್, ಕೋಶಾಧ್ಯಕ್ಷ ಶ್ರೀಶೈಲರಾಮಣ್ಣವರ್, ಕಾಲೇಜು ನಿರ್ವಹಣಾ ಮಂಡಳಿ ಅಧ್ಯಕ್ಷ ಟಿ.ನಾಗರಾಜು, ಅಧ್ಯಾಪಕ ಸಲಹೆಗಾರ ಡಾ.ಪಿ.ಕೆ.ಗೋವರ್ಧನ್, ರಾಜ್ಯದ ನಾನಾ ಭಾಗಗಳಿಂದ ಆಗಮಿಸಿದ್ದ ಸ್ಪರ್ಧಿಗಳು, ತೀರ್ಪುಗಾರರು, ವಿದ್ಯಾರ್ಥಿಗಳು, ಬೋಧಕರು, ಬೋಧಕೇತರರು ಹಾಜರಿದ್ದರು.

ಡಾ.ಬಿ.ಟಿ.ರಘು ನಿರೂಪಿಸಿ, ಡಾ.ಅರ್ಪುದರಾಜು ವಂದಿಸಿದರು.

ಶ್ರೇಷ್ಠ ತೋಟಗಾರಿಕೆ ರೈತ/ ರೈತ ಮಹಿಳೆ ಪ್ರಶಸ್ತಿಗಾಗಿ ಅರ್ಜಿ ಆಹ್ವಾನ

ಮೈಸೂರು: ಬಾಗಲಕೋಟೆಯ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಡಿಸೆಂಬರ್ 21ರಿಂದ 23ರವರೆಗೆ ಉದ್ಯಾನಗಿರಿಯ ಮುಖ್ಯ ಆವರಣದಲ್ಲಿ "ಆರ್ಥಿಕತೆ ಮತ್ತು ಪೌಷ್ಠಿಕತೆಗಾಗಿ ತೋಟಗಾರಿಕೆ" ಎಂಬ ಧ್ಯೇಯದೊಂದಿಗೆ 'ತೋಟಗಾರಿಕೆ ಮೇಳ-2024' ವನ್ನು ಹಮ್ಮಿಕೊಳ್ಳಲಾಗಿದ್ದು, ತೋಟಗಾರಿಕೆ ಮೇಳದಲ್ಲಿ ಬಾಗಲಕೋಟೆಯ ವ್ಯಾಪ್ತಿಯಲ್ಲಿ ಬರುವ ರಾಜ್ಯದ 24 ಜಿಲ್ಲೆಗಳಲ್ಲಿ ಪ್ರತಿ ಜಿಲ್ಲೆಗೆ ಒಬ್ಬ ಶ್ರೇಷ್ಠ ತೋಟಗಾರಿಕೆ ರೈತ/ರೈತ ಮಹಿಳೆ ಪ್ರಶಸ್ತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಇಚ್ಛಿಸುವ ಆಸಕ್ತ ತೋಟಗಾರಿಕೆ ರೈತ/ರೈತ ಮಹಿಳೆಯರು ಅರ್ಜಿ ನಮೂನೆಯನ್ನು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ www.uhsbagalkot.karnataka.gov.in ಮೂಲಕ ಪಡೆದುಕೊಂಡು, ಭರ್ತಿ ಮಾಡಿದ ಅರ್ಜಿಗಳನ್ನು ಇಲವಾಲದ ಯಲಚಹಳ್ಳಿಯ ತೋಟಗಾರಿಕೆ ಮಹಾವಿದ್ಯಾಲಯದ ಡೀನ್ ಅವರಿಗೆ ನವೆಂಬರ್ 5ರೊಳಗೆ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ದೂ.ಸಂ: 8147959226 ಅಥವಾ 9341997297 ಅನ್ನು ಸಂಪರ್ಕಿಸಬಹುದು ಎಂದು ತೋಟಗಾರಿಕೆ ಮಹಾವಿದ್ಯಾಲಯದ ಡೀನ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸುಧನ್ವ ಡಿ.ಉಪಾಧ್ಯ ರಾಜ್ಯಮಟ್ಟಕ್ಕೆ ಆಯ್ಕೆ



ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ನಡೆದ ಜಿಲ್ಲಾಮಟ್ಟದ ಅಥ್ಲೆಟಿಕ್ಸ್ ಕ್ರೀಡಾಕೂಟದಲ್ಲಿ ರಾಮಕೃಷ್ಣ ನಗರದಲ್ಲಿರುವ ರಾಮಕೃಷ್ಣ ವಿದ್ಯಾಕೇಂದ್ರ ಶಾಲೆಯ 10ನೇ ತರಗತಿಯ ವಿದ್ಯಾರ್ಥಿ ಸುಧನ್ವ ಡಿ.ಉಪಾಧ್ಯ, ಉದ್ದ ಜಿಗಿತದಲ್ಲಿ ದ್ವಿತೀಯ ಸ್ಥಾನ ಮತ್ತು ತ್ರಿವಿಧ ಜಿಗಿತದಲ್ಲಿ ದ್ವಿತೀಯ ಸ್ಥಾನ ಪಡೆದು ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಇವರನ್ನು ಕಾರ್ಯನಿರ್ವಾಹಕ ಅಧಿಕಾರಿ ಪ್ರೊ.ಜಿ.ಚಂದ್ರ ಶೇಖರ್, ಮುಖ್ಯೋಪಾಧ್ಯಾಯರಾದ ಜಿ.ಎನ್.ವಿಶ್ವನಾಥ್, ಶ್ರೀಮತಿ ವೀಣಾ ಕೆ.ಹೆಗಡೆ, ದೈಹಿಕ ಶಿಕ್ಷಣ ಶಿಕ್ಷಕ ಶೃಂಗಾರವೇಲು, ಶಾಲೆಯ ಸಿಬ್ಬಂದಿ ವರ್ಗ ಮತ್ತು ಆಡಳಿತ ಮಂಡಳಿಯವರು ಅಭಿನಂದಿಸಿದರು.

ಕನ್ನಡ ರಾಜ್ಯೋತ್ಸವ: ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜನೆ



ಮೈಸೂರಿನ ಹಳೇ ಡಿಸಿ ಕಚೇರಿಯಲ್ಲಿ ಕನ್ನಡ ರಾಜ್ಯೋತ್ಸವದ ಅಂಗವಾಗಿ ಕನ್ನಡ–ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ನೇತೃತ್ವದಲ್ಲಿ ಸಾಂಸ್ಕೃತಿಕ ಉಪಸಮಿತಿ ಸಭೆ ನಡೆಯಿತು.

ಮೈಸೂರು, ಅ.27– ಈ ಬಾರಿಯೂ ಕನ್ನಡ ರಾಜ್ಯೋತ್ಸವದ ಅಂಗವಾಗಿ ನವೆಂಬರ್ 1 ರಂದು ಕರ್ನಾಟಕ ಕಲಾಮಂದಿರದಲ್ಲಿ ಸಂಜೆ 5 ಗಂಟೆಗೆ ವಿವಿಧ ಕಲಾತಂಡಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜಿಸಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ತಿಳಿಸಿದರು.

ಹಳೇ ಡಿಸಿ ಕಚೇರಿಯಲ್ಲಿ ಕನ್ನಡ ರಾಜ್ಯೋತ್ಸವದ ಅಂಗವಾಗಿ ನಡೆದ ಸಾಂಸ್ಕೃತಿಕ ಉಪಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ನ.1ರಂದು ಬೆಳಿಗ್ಗೆ 9 ಗಂಟೆಗೆ ಕಲಾಮಂದಿರದಲ್ಲಿ ಧ್ವಜಾರೋಹಣ ನೆರವೇರಿಸಲಾಗುವುದು. ಅಂದು ಸಂಜೆ 5 ಗಂಟೆಗೆ ನಡೆಯಲಿರುವ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ವಿವಿಧ ಶಾಲಾ–ಕಾಲೇಜುಗಳ ಸುಮಾರು 6ರಿಂದ 8 ತಂಡದ 230 ವಿದ್ಯಾರ್ಥಿಗಳು ಭಾಗವಹಿಸುವ ನಿರೀಕ್ಷೆಯಿದ್ದು, ಭಾಗವಹಿಸಿದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ, ನೆನಪಿನ ಕಾಣಿಕೆ ನೀಡಲಾಗುವುದು ಎಂದು ತಿಳಿಸಿದರು.

ಸಾರ್ವಜನಿಕ ಮತ್ತು ಖಾಸಗಿ ಶಾಲೆಗಳನ್ನೊಳಗೊಂಡಂತೆ ಕನ್ನಡ ಮಾಧ್ಯಮದಲ್ಲಿ ಎಸ್.ಎಸ್.ಎಲ್.ಸಿ ಹಾಗೂ ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಗಳಿಸಿರುವ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಮಾಡಲಾಗುವುದು. ಕಾರ್ಯಕ್ರಮದಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ಸ್ನ್ಯಾಕ್ಸ್ ವ್ಯವಸ್ಥೆ ಮಾಡಲಾಗಿದೆ ಎಂದು ಸುದರ್ಶನ್ ಹೇಳಿದರು.

ಕಾರ್ಯಕ್ರಮದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಜವರೇಗೌಡ, ಮೈಸೂರು ಮಹಾನಗರಪಾಲಿಕೆಯ ಅಧಿಕಾರಿ ಸೇರಿದಂತೆ ನೆಹರು ಯುವ ಕೇಂದ್ರದ ಸದಸ್ಯರು ಉಪಸ್ಥಿತರಿದ್ದರು.

ದೇಶ - ವಿದೇಶ

ಶ್ರೀಲಂಕಾ ನೌಕ ಪಡೆಯಿಂದ 12 ಭಾರತೀಯ ಮೀನುಗಾರರ ಬಂಧನ



ಕೊಲಂಬೊ: ಸಮುದ್ರದ ಗಡಿ ದಾಟಿ ಮೀನುಗಾರಿಕೆಯಲ್ಲಿ ತೊಡಗಿದ ಆರೋಪದ ಹಿನ್ನೆಲೆಯಲ್ಲಿ ಶ್ರೀಲಂಕಾ ನೌಕಾಪಡೆಯು ಭಾನುವಾರ 12 ಭಾರತೀಯ ಮೀನುಗಾರರನ್ನು ಬಂಧಿಸಿ, ಬೋಟ್‌ಗಳನ್ನು ವಶಪಡಿಸಿಕೊಂಡಿದೆ. ಉತ್ತರ ಪ್ರಾಂತ್ಯದ ಜಾಫ್ನಾ, ಪೆಡ್ರೊ ಕರಾವಳಿಯಲ್ಲಿ ಮೀನುಗಾರರನ್ನು ಬಂಧಿಸಿದ್ದು, ಅವರ ಬೋಟ್‌ಗಳನ್ನು ವಶಕ್ಕೆ ಪಡೆಯಲಾಗಿದೆ. ಬಂಧಿತ 12 ಮೀನುಗಾರರನ್ನು ಕಂಕಸಂತುರೈ ಬಂದರಿಗೆ ಕರೆದೊಯ್ಯಲಾಗಿದ್ದು, ಮುಂದಿನ ಕ್ರಮಕ್ಕಾಗಿ ಮೈಲಾಡಿ ಮೀನುಗಾರಿಕಾ ಇನ್‌ಸ್ಪೆಕ್ಟರ್‌ಗೆ ಹಸ್ತಾಂತರಿಸಲಾಗಿದೆ ಎಂದು ಶ್ರೀಲಂಕಾ ನೌಕಾಪಡೆ ಹೇಳಿಕೆಯಲ್ಲಿ ತಿಳಿಸಿದೆ. ಇದೇ ವರ್ಷ ಇಲ್ಲಿವರೆಗೆ 62 ಭಾರತೀಯ ಮೀನುಗಾರರ ದೋಣಿಗಳನ್ನು ವಶಕ್ಕೆ ಪಡೆದಿದೆ ಮತ್ತು 462 ಭಾರತೀಯ ಮೀನುಗಾರರನ್ನು ಬಂಧಿಸಿ ಕಾನೂನು ಕ್ರಮಕ್ಕಾಗಿ ಅಧಿಕಾರಿಗಳಿಗೆ ಹಸ್ತಾಂತರಿಸಿದೆ. ಭಾರತ ಮತ್ತು ಶ್ರೀಲಂಕಾ ನಡುವಿನ ಬಾಂಧವ್ಯದಲ್ಲಿ ಮೀನುಗಾರರ ಸಮಸ್ಯೆ ವಿವಾದವಾಗಿ ಪರಿಣಮಿಸಿದೆ. ಅಕ್ರಮ ಮೀನುಗಾರಿಕೆ ಆರೋಪದ ಮೇಲೆ ಲಂಕಾ ನೌಕಾಪಡೆಯ ಸಿಬ್ಬಂದಿ ಪಾಕ್ ಜಲಸಂಧಿಯಲ್ಲಿ ಭಾರತೀಯ ಮೀನುಗಾರರ ಮೇಲೆ ಗುಂಡು ಹಾರಿಸಿರುವ ಘಟನೆಯೂ ನಡೆದಿದೆ.

ಅಕ್ರಮ ಚೈನೀಸ್ ಮೊಬೈಲ್ ಜಾಮರ್ ಮಾರಾಟ; ಅಂಗಡಿ ಮಾಲೀಕನ ಬಂಧನ

ನವದೆಹಲಿ: ಅಕ್ರಮ ಚೈನೀಸ್ ಮೊಬೈಲ್ ಜಾಮರ್ ಮಾರಾಟ ಮಾಡುತ್ತಿದ್ದ ಆರೋಪದ ಮೇರೆಗೆ ದೆಹಲಿ ಪೊಲೀಸರು ಅಂಗಡಿ ಮಾಲೀಕನನ್ನು ಬಂಧಿಸಿದ್ದಾರೆ. ದೆಹಲಿಯ ಪಾಲಿಕಾ ಬಜಾರ್‌ನ ಅಂಗಡಿಯೊಂದರಲ್ಲಿ ಎರಡು ಅಕ್ರಮ ಚೈನೀಸ್ ಜಾಮರ್‌ಗಳು ಪತ್ತೆಯಾಗಿದ್ದು, ಭದ್ರತೆಗೆ ಅಪಾಯವನ್ನುಂಟುಮಾಡುತ್ತವೆ ಮತ್ತು ಅನಧಿಕೃತ ಜನರಿಂದ ಅದರ ದುರ್ಬಳಕೆ ಅಥವಾ ಮಾರಾಟವನ್ನು ನಿಷೇಧಿಸುವ ಸಾಧ್ಯತೆ ಇದೆ. ಇದು ಕೇಂದ್ರದ ಮಾರ್ಗಸೂಚಿಗಳನ್ನು ಉಲ್ಲಂಘಿಸಿವೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಅಂಗಡಿ ಮಾಲೀಕ ರವಿ ಮಾಥುರ್ ಎಂಬಾತನ ಬಳಿ ಈ ಸಾಧನಗಳನ್ನು ಮಾರಾಟ ಮಾಡಲು ಪರವಾನಗಿ ಮತ್ತು ದಾಖಲೆಗಳಿಲ್ಲದ ಕಾರಣ ಪೊಲೀಸರು ಆತನನ್ನು ಬಂಧಿಸಿದ್ದಾರೆ. ಮಾಥುರ್ ಅವರು ಹೇಳುವಂತೆ, ದೆಹಲಿಯ ಲಜಪತ್‌ರಾಯ್ ಮಾರುಕಟ್ಟೆಯಿಂದ 25,000 ರೂಗೆ ಜಾಮರ್‌ಗಳನ್ನು ಖರೀದಿಸಿದ್ದು, ಅದನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಗುರಿ ಹೊಂದಿದ್ದರು ಎನ್ನಲಾಗಿದೆ. ಈ ಸಾಧನಗಳು 50 ಮೀಟರ್‌ಗಳವರೆಗೆ ಮೊಬೈಲ್ ಸಿಗ್ನಲ್‌ಗಳನ್ನು ಅಡ್ಡಿಪಡಿಸಬಹುದು. ಅಪರಾಧ ಪ್ರಕರಣಗಳಲ್ಲಿ, ಜಾಮರ್‌ಗಳಿಂದಾಗಿ ಸ್ಥಳದಲ್ಲಿ ಯಾವ ಸಂವಹನ ನಡೆದಿದೆ ಎಂಬುದನ್ನು ಪತ್ತೆಹಚ್ಚಲು ಪೊಲೀಸರಿಗೆ ಸಾಧ್ಯವಾಗುವುದಿಲ್ಲ. ಘಟನೆಗೆ ಸಂಬಂಧಿಸಿದಂತೆ ದೆಹಲಿ ಪೊಲೀಸರು ದೂರಸಂಪರ್ಕ ಇಲಾಖೆಗೆ ಮಾಹಿತಿ ನೀಡಿದ್ದಾರೆ.

ಫಿಲಿಪೈನ್ಸ್‌ನಲ್ಲಿ ಪ್ರವಾಹ, ಭೂಕುಸಿತ: ಕನಿಷ್ಠ 115 ಮಂದಿ ಸಾವು, ನಾಪತ್ತೆ

ತಾಲಿಸೇ: ಫಿಲಿಪೈನ್ಸ್‌ನಲ್ಲಿ ಟ್ರಾಮಿ ಚಂಡಮಾರುತದಿಂದ ಭಾರಿ ಮಳೆಯಾಗುತ್ತಿದ್ದು, ಪ್ರವಾಹ ಮತ್ತು



ಭೂಕುಸಿತಗಳಲ್ಲಿ ಮೃತಪಟ್ಟವರ ಮತ್ತು ಕಾಣೆಯಾದವರ ಸಂಖ್ಯೆ 100ಕ್ಕೂ ಹೆಚ್ಚಾಗಿದೆ ಎಂದು ಫಿಲಿಪೈನ್ಸ್ ಅಧ್ಯಕ್ಷರು ಹೇಳಿದ್ದಾರೆ. ಶುಕ್ರವಾರ ವಾಯುವ್ಯ ಫಿಲಿಪೈನ್ಸ್‌ನಲ್ಲಿ ಸೃಷ್ಟಿಯಾದ ಟ್ರಾಮಿ ಚಂಡಮಾರುತ, ಗಂಟೆಗೆ 95 ಕಿ.ಮೀ ವೇಗದಲ್ಲಿ ಅಪ್ಪಳಿಸಿತ್ತಿದ್ದು, ವ್ಯಾಪಕ ನಷ್ಟ ಉಂಟು ಮಾಡಿದೆ. ಈ ವರ್ಷ ಇದುವರೆಗೆ ಆಗ್ನೇಯ ಏಷ್ಯಾದ ದ್ವೀಪಸಮೂಹದ ಮಾರಣಾಂತಿಕ ಮತ್ತು ಅತ್ಯಂತ ವಿನಾಶಕಾರಿ ಚಂಡಮಾರುತದಿಂದ ಕನಿಷ್ಠ 81 ಜನ ಸಾವನ್ನಪ್ಪಿದ್ದಾರೆ ಮತ್ತು 34 ಜನರು ಕಾಣೆಯಾಗಿದ್ದಾರೆ ಎಂದು ಸರ್ಕಾರದ ವಿಪತ್ತು–ಪ್ರಕ್ರಿಯೆ ಸಂಸ್ಥೆ ತಿಳಿಸಿದೆ.

ಹಲವು ಕಡೆ ವಾಹನಗಳು ನೀರಿನಲ್ಲಿ ಕೊಚ್ಚಿ ಹೋಗಿದ್ದು, ಮನೆಯ ಛಾವಣಿಯಲ್ಲಿ ಸಿಕ್ಕಿಬಿದ್ದಿರುವ ಜನರನ್ನು ಮೋಟಾರು ಬೋಟ್‌ಗಳ ಮೂಲಕ ತೆರವುಗೊಳಿಸಲಾಗಿದೆ. ಪ್ರಮುಖ ರಸ್ತೆಗಳು ಜಲಾವೃತಗೊಂಡಿದ್ದು, ಲುಜೋನ್ ದ್ವೀಪದಲ್ಲಿ ಶಾಲೆಗಳು ಹಾಗೂ ಕಚೇರಿಗಳಿಗೆ ರಜೆ ಘೋಷಿಸಲಾಗಿದೆ.

ಸಿವಾನ್ ಮಾಜಿ ಸಂಸದ ಶಹಾಬುದ್ದೀನ್ ಪತ್ನಿ, ಪುತ್ರ ಆರ್‌ಜೆಡಿ ಸೇರ್ಪಡೆ

ಪಾಟ್ನಾ: ಸಿವಾನ್‌ನ ಮಾಜಿ ಸಂಸದ, ದಿ. ಮೊಹಮ್ಮದ್



ಶಹಾಬುದ್ದೀನ್ ಅವರ ಪತ್ನಿ ಹೆನಾ ಶಹಾಬ್ ಮತ್ತು ಪುತ್ರ ಒಸಾಮಾ ಅವರು ಭಾನುವಾರ ಆರ್‌ಜೆಡಿ ಮುಖ್ಯಸ್ಥ ಲಾಲು ಪ್ರಸಾದ್ ಯಾದವ್ ಮತ್ತು ಬಿಹಾರ ವಿಧಾನಸಭೆ ವಿರೋಧ ಪಕ್ಷದ ನಾಯಕ ತೇಜಸ್ವಿ ಪ್ರಸಾದ್ ಯಾದವ್ ಅವರ ಸಮ್ಮುಖದಲ್ಲಿ ರಾಷ್ಟ್ರೀಯ ಜನತಾ ದಳಕ್ಕೆ(ಆರ್‌ಜೆಡಿ) ಸೇರಿದರು.

ತಾಯಿ–ಮಗ ಇಬ್ಬರೂ ಲಾಲು, ಬಿಹಾರದ ಮಾಜಿ ಮುಖ್ಯಮಂತ್ರಿ ರಾಬ್ರಿ ದೇವಿ ಮತ್ತು ತೇಜಸ್ವಿ ಅವರನ್ನು ಶನಿವಾರ ತಡರಾತ್ರಿ ಪಾಟ್ನಾದ ಅವರ 10 ಸರ್ಕ್ಯುಲರ್ ರಸ್ತೆಯ ನಿವಾಸದಲ್ಲಿ ಭೇಟಿ ಮಾಡಿದ್ದರು. 2024ರ ಲೋಕಸಭಾ ಚುನಾವಣೆಯಲ್ಲಿ ಹೆನಾ ಶಹಾಬ್ ಅವರು ಸಿವಾನ್‌ನಿಂದ ಪಕ್ಷೇತರ ಅಭ್ಯರ್ಥಿಯಾಗಿ ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧಿಸಿ ಸೋಲು ಅನುಭವಿಸಿದ್ದರು. ಹೆನಾ ಅವರು ಜನತಾ ದಳ(ಯುನೈಟೆಡ್)ದ ಅಭ್ಯರ್ಥಿ ವಿಜಯಲಕ್ಷ್ಮಿ ದೇವಿ ಅವರ ವಿರುದ್ಧ 92,000 ಮತಗಳಿಂದ ಸೋಲು ಅನುಭವಿಸಿದ್ದರು. ಆರ್‌ಜೆಡಿ ಅಭ್ಯರ್ಥಿ ಅವಧ್ ಬಿಹಾರಿ ಚೌಧರಿ ಮೂರನೇ ಸ್ಥಾನ ಪಡೆದಿದ್ದರು. ಲೋಕಸಭೆ ಚುನಾವಣೆಯಲ್ಲಿ ಹೆನಾ ಸ್ಪರ್ಧೆ ಆರ್‌ಜೆಡಿ ಅಭ್ಯರ್ಥಿ ಚೌಧರಿ ಸೋಲಿಗೆ ಕಾರಣವಾಗಿತ್ತು.

ಪಾಕಿಸ್ತಾನದಲ್ಲಿ ಆತ್ಮಾಹುತಿ ಬಾಂಬ್ ದಾಳಿ; 8 ಮಂದಿ ಸಾವು

ಪೇಶಾವರ: ಪಾಕಿಸ್ತಾನದ ಪ್ರಕ್ಷುಬ್ಧ ಖೈಬರ್ ಪಖ್ತುಂಖ್ವಾ ಪ್ರಾಂತ್ಯದ ಪೊಲೀಸ್ ಚೆಕ್ ಪೋಸ್ಟ್ ಅನ್ನು ಗುರಿಯಾಗಿಸಿಕೊಂಡು ಉಗ್ರರು ಶನಿವಾರ ಆತ್ಮಾಹುತಿ ಬಾಂಬ್ ದಾಳಿ



ನಡೆಸಿದ್ದು, ದಾಳಿಯಲ್ಲಿ ಕನಿಷ್ಠ ಎಂಟು ಮಂದಿ ಸಾವನ್ನಪ್ಪಿದ್ದಾರೆ ಮತ್ತು ಅನೇಕರು ಗಾಯಗೊಂಡಿದ್ದಾರೆ.

ಮೂಲಗಳ ಪ್ರಕಾರ, ಅಫ್ಘಾನಿಸ್ತಾನದ ಗಡಿಯಲ್ಲಿರುವ ಉತ್ತರ ವಜೀರಿಸ್ತಾನ್ ಜಿಲ್ಲೆಯ ಮೀರ್ ಅಲಿ ತಹಸಿಲ್‌ನಲ್ಲಿರುವ ಅಸ್ಲಾಮ್ ಚೆಕ್ ಪೋಸ್ಟ್‌ನಲ್ಲಿ ಬಾಂಬ್ ಸ್ಫೋಟ ಸಂಭವಿಸಿದೆ. ತ್ರಿಚಕ್ರ ವಾಹನದಲ್ಲಿ ಬಂದ ಬಾಂಬರ್‌ಗಳು ಚೆಕ್‌ಪೋಸ್ಟ್ ಮತ್ತು ಭದ್ರತಾ ಪಡೆಗಳ ವಾಹನಗಳನ್ನು ಗುರಿಯಾಗಿಸಿ ಬಾಂಬ್ ಸ್ಫೋಟಿಸಿದ್ದಾರೆ. ದಾಳಿಯಲ್ಲಿ ಪೊಲೀಸ್ ಸಿಬ್ಬಂದಿ, ಇಬ್ಬರು ಸೈನಿಕರು ಮತ್ತು ಇಬ್ಬರು ನಾಗರಿಕರು ಮೃತಪಟ್ಟಿದ್ದಾರೆ. ಗಾಯಗೊಂಡವರನ್ನು ಸ್ಥಳೀಯ ಆಸ್ಪತ್ರೆಗೆ ರವಾನಿಸಲಾಗಿದೆ.

ಮೂಲಗಳ ಪ್ರಕಾರ, ಗಾಯಗೊಂಡವರ ಸ್ಥಿತಿ ಗಂಭೀರವಾಗಿದ್ದು, ಸಾವಿನ ಸಂಖ್ಯೆ ಹೆಚ್ಚಾಗಬಹುದು. ದಾಳಿಯ ಹೊಣೆಯನ್ನು ಇದುವರೆಗೆ ಯಾವುದೇ ಉಗ್ರ ಸಂಘಟನೆ ಹೊತ್ತುಕೊಂಡಿಲ್ಲ. ಖೈಬರ್ ಪಖ್ತುಂಖ್ವಾ ರಾಜ್ಯಪಾಲ ಫೈಸಲ್ ಕರೀಂ ಕುಂಡಿ ಅವರು ಈ ದಾಳಿಯನ್ನು ಖಂಡಿಸಿದ್ದಾರೆ ಮತ್ತು ಸಂತ್ರಸ್ತರ ಕುಟುಂಬಗಳಿಗೆ ಸಾಂತ್ವನ ಹೇಳಿದ್ದಾರೆ.

ಮೈಸೂರು ಮಿತ್ರ ಸೋಮವಾರ 28 ಅಕ್ಟೋಬರ್ 2024

ಫೆಬ್ರವರಿ 2ಕ್ಕೆ ಮಂಡ್ಯ ಮನ್‌ಮುಲ್ ನಿರ್ದೇಶಕ ಸ್ಥಾನಗಳಿಗೆ ಚುನಾವಣೆ

ಮತ್ತೆ ಸ್ಪರ್ಧೆಗೆ ಹಾಲಿ ಸದಸ್ಯರ ಕಸರತ್ತು, 12 ನಿರ್ದೇಶಕ ಸ್ಥಾನಗಳನ್ನು ಗೆಲ್ಲಲು ದಳ-ಬಿಜೆಪಿ, ಕಾಂಗ್ರೆಸ್ ನಡುವೆ ಪೈಪೋಟಿ

ನಾಮಪತ್ರ ಸಲ್ಲಿಕೆಗೆ ಜನವರಿ 25ಕ್ಕೆ ಕೊನೇ ದಿನ

ಮನ್‌ಮುಲ್‌ಗೆ ಚುನಾವಣೆ ದಿನಾಂಕ ನಿಗದಿಯಾಗಿರುವುದರಿಂದ ಜ.25ರಂದು ನಾಮಪತ್ರ ಸಲ್ಲಿಸಲು ಕೊನೇ ದಿನಾಂಕವಾಗಿದೆ. 26ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದೆ. 27ರಂದು ನಾಮಪತ್ರ ವಾಪಸ್ ಪಡೆಯಬಹುದಾಗಿದೆ. ಅಗತ್ಯ ಬಿದ್ದರೆ ಫೆ.2ರಂದು ಬೆಳಿಗ್ಗೆ 9ರಿಂದ ಸಂಜೆ 4ರವರೆಗೆ ಮತದಾನ ನಡೆಯಲಿದೆ. ಮತದಾನ ನಡೆಯುವ ಸ್ಥಳ, ಕ್ಷೇತ್ರಗಳ ಬಗ್ಗೆ ಪ್ರತ್ಯೇಕವಾಗಿ ಚುನಾವಣಾಧಿಕಾರಿಯು ಶೀಘ್ರದಲ್ಲೇ ಪ್ರಕಟಣೆ ಹೊರಡಿಸಲಿದ್ದಾರೆ.



ಎಂ.ಕೆ.ಮೋಹನ್‌ರಾಜ್

ಮಂಡ್ಯ,ಅ.27– ಜಿಲ್ಲೆಯ ರೈತರ ಹೈನೋದ್ಯಮದ ಪ್ರತಿಷ್ಠಿತ ಸಂಸ್ಥೆಯಾದ ಮಂಡ್ಯ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ(ಮನ್‌ಮುಲ್)ದ ಆಡಳಿತ ಮಂಡಳಿಯ ಅವಧಿಯು ಮುಗಿಯುತ್ತಾ ಬಂದಿದ್ದು, ಮುಂದಿನ ವರ್ಷ 2025ರ ಫೆಬ್ರವರಿ 2ರಂದು ಚುನಾವಣೆ ನಿಗದಿ ಮಾಡಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಫೆಡರ್ ಸಹಕಾರ ಸಂಘಗಳ ಚುನಾವಣಾಧಿಕಾರಿಯೂ ಆದ ಡಾ.ಕುಮಾರ ಆದೇಶ ಹೊರಡಿಸಿದ್ದಾರೆ.

ಆಡಳಿತ ಮಂಡಳಿಯ ಅವಧಿಯು ಮುಕ್ತಾಯಗೊಂಡಿರುವುದರಿಂದ 12 ನಿರ್ದೇಶಕರ ಸ್ಥಾನಗಳಿಗೆ ಚುನಾವಣೆ ಘೋಷಣೆ ಮಾಡಲಾಗಿದೆ ಇದರಿಂದ ಮನ್‌ಮುಲ್ ನಿರ್ದೇಶಕ ಸ್ಥಾನಕ್ಕೆ ಸ್ಪರ್ಧಿಸಲು ಮೈತ್ರಿ ಪಕ್ಷಗಳಾದ ಜೆಡಿಎಸ್–ಬಿಜೆಪಿ ಮತ್ತು ಕಾಂಗ್ರೆಸ್ ಮುಖಂಡರಲ್ಲಿ ಅಭ್ಯರ್ಥಿಗಳ ಆಯ್ಕೆ ಕಸರತ್ತು ಜೊತೆಗೆ ರಾಜಕೀಯ ಚಟುವಟಿಕೆ ಬಿರುಸುಗೊಂಡಿದೆ.

12 ನಿರ್ದೇಶಕ ಸ್ಥಾನಗಳಿಗೆ ಚುನಾವಣೆ: ಮನ್‌ಮುಲ್‌ನಲ್ಲಿ 12 ನಿರ್ದೇಶಕ ಸ್ಥಾನಗಳಿಗೆ ಚುನಾವಣೆ ನಡೆಯಲಿದೆ. ಕೇಂದ್ರ ಸ್ಥಾನ ಮಂಡ್ಯ, ತಾಲೂಕಿನಿಂದ 3 ಕ್ಷೇತ್ರಗಳು, ಮದ್ದೂರು, ಕೆ.ಆರ್.ಪೇಟೆ, ನಾಗಮಂಗಲ ತಾಲೂಕುಗಳಿಂದ ತಲಾ 2, ಶ್ರೀರಂಗಪಟ್ಟಣ, ಮಳವಳ್ಳಿ, ಪಾಂಡವಪುರ ತಾಲೂಕುಗಳ ತಲಾ ಒಂದು ಕ್ಷೇತ್ರಗಳಿಗೆ ಚುನಾವಣೆ ನಡೆಯಲಿದೆ ಅದಕ್ಕಾಗಿ ಈಗಾಗಲೇ ಆಕಾಂಕ್ಷಿತ ಅಭ್ಯರ್ಥಿಗಳು ದುಂಬಾಲು ಬಿದ್ದಿದ್ದಾರೆ.

ಹಾಲಿ ಸದಸ್ಯರ ವಿವರ: ಪ್ರಸ್ತುತ ಆಡಳಿತ ಮಂಡಳಿಯಲ್ಲಿ ಜೆಡಿಎಸ್ ಬೆಂಬಲಿತ 7 ಮಂದಿ, ಬಿಜೆಪಿ ಬೆಂಬಲಿತ ಇಬ್ಬರು, ಕಾಂಗ್ರೆಸ್ ಬೆಂಬಲಿತ ಮೂರು ಮಂದಿ ನಿರ್ದೇಶಕರಿದ್ದಾರೆ. ಜೆಡಿಎಸ್‌ನ ಮಂಡ್ಯದ ಬಿ.ಆರ್.ರಾಮಚಂದ್ರ, ಎಂ.ಎಸ್.ರಘುನಂದನ್, ಮಳವಳ್ಳಿಯ ವಿಶ್ವನಾಥ್, ಪಾಂಡವಪುರದ ಕಾಡೇನಹಳ್ಳಿ ರಾಮಚಂದ್ರು, ಕೆ.ಆರ್.ಪೇಟೆಯ ಹೆಚ್.ಟಿ.ಮಂಜು, ನಾಗಮಂಗಲದ ನೆಲ್ಲಿಗೆರೆ ಬಾಲು, ಕೋಟಿ ರವಿ, ಬಿಜೆಪಿಯಿಂದ ಮದ್ದೂರಿನ ಎಸ್.ಪಿ. ಸ್ವಾಮಿ, ರೂಪಾ, ಕಾಂಗ್ರೆಸ್‌ನ ಮಂಡ್ಯದ ಉಮ್ಮಡಹಳ್ಳಿ ಶಿವಪ್ಪ, ಶ್ರೀರಂಗಪಟ್ಟಣದ ಬೋರೇಗೌಡ, ಕೆ.ಆರ್.ಪೇಟೆಯ ಡಾಲು ರವಿ ಆಯ್ಕೆಯಾಗಿದ್ದರು. ಇದರಲ್ಲಿ ಜೆಡಿಎಸ್‌ನ ಕಾಡೇನಹಳ್ಳಿ ರಾಮಚಂದ್ರ ಕಾಂಗ್ರೆಸ್ ಪಕ್ಷಕ್ಕೆ ವಾಲಿದರೆ, ಕೆ.ಆರ್.ಪೇಟೆಯ ಡಾಲುರವಿ ಜೆಡಿಎಸ್ ಪಕ್ಷದಲ್ಲಿ ಗುರುತಿಸಿಕೊಂಡಿದ್ದಾರೆ.

> ಮನ್‌ಮುಲ್ ನಿರ್ದೇಶಕ ಸ್ಥಾನಗಳಿಗೆ ಚುನಾವಣೆ ಘೋಷಣೆಯಾಗಿದೆ. ಅದರಂತೆ ಎಲ್ಲ ರೀತಿಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ. ಈಗಾಗಲೇ ಜೆಡಿಎಸ್ ಬೆಂಬಲಿತರಾಗಿ ನಾನು ಸೇರಿದಂತೆ ರಾಮಚಂದ್ರು, ಹೆಚ್.ಟಿ.ಮಂಜು ಇತರೆ ಹಾಲಿ ನಿರ್ದೇಶಕರು ಸ್ಪರ್ಧಿಸುವ ಬಗ್ಗೆ ಚರ್ಚೆ ನಡೆಯುತ್ತಿದೆ. ಮುಂದಿನ ದಿನಗಳಲ್ಲಿ ಎಲ್ಲ ಅಭ್ಯರ್ಥಿಗಳ ಬಗ್ಗೆ ನಮ್ಮ ನಾಯಕರು ನಿರ್ಧಾರ ಕೈಗೊಳ್ಳಲಿದ್ದಾರೆ. ಜೊತೆಗೆ ಬಿಜೆಪಿಯೊಂದಿಗಿನ ಮೈತ್ರಿ ಧರ್ಮವೂ ಪಾಲನೆಯಾಗಲಿದೆ.
>
> –ಎಂ.ಎಸ್.ರಘುನಂದನ್, ಮನ್‌ಮುಲ್ ಉಪಾಧ್ಯಕ್ಷರು, ಮಂಡ್ಯ

ಮತ್ತೆ ಸ್ಪರ್ಧೆಗೆ ಹಾಲಿ ಸದಸ್ಯರ ಕಸರತ್ತು: ಹಾಲಿ ಇರುವ ಬಹುತೇಕ ನಿರ್ದೇಶಕರು ಮತ್ತೆ ಸ್ಪರ್ಧಿಸಲು ಕಸರತ್ತು ಆರಂಭಿಸಿದ್ದಾರೆ. ಅದಕ್ಕಾಗಿ ತಮ್ಮ ರಾಜಕೀಯ ನಾಯಕರ ಬೆಂಬಲ ಪಡೆಯಲು ಮುಂದಾಗಿದ್ದಾರೆ. ಮಂಡ್ಯ ತಾಲೂಕಿನ ಹಾಲಿ ಮೂರು ಮಂದಿ ನಿರ್ದೇಶಕರಾದ ಜೆಡಿಎಸ್‌ನ ಬಿ.ಆರ್.ರಾಮಚಂದ್ರ, ಎಂ.ಎಸ್.ರಘುನಂದನ್ ಮತ್ತೆ ಕಣಕ್ಕಿಳಿಯಲು ಸಿದ್ಧತೆ ನಡೆಸಿದ್ದಾರೆ. ಅದರಂತೆ ಕಾಂಗ್ರೆಸ್‌ನ ಉಮ್ಮಡಹಳ್ಳಿ ಶಿವಪ್ಪಕೂಡ ಮತ್ತೊಮ್ಮೆ ಸ್ಪರ್ಧಿಸಲು ತೀವ್ರ ಕಸರತ್ತು ನಡೆಸುತ್ತಿದ್ದಾರೆ.

ಕೆ.ಆರ್.ಪೇಟೆಯಿಂದ ಜೆಡಿಎಸ್‌ನಿಂದ ಈಗಾಗಲೇ ಹಾಲಿ ಶಾಸಕರೂ ಆಗಿರುವ ಹೆಚ್.ಟಿ.ಮಂಜು ಹಾಗೂ ಮಹೇಶ್ ಎಂಬುವರ ಹೆಸರುಗಳನ್ನು ಅಧಿಕೃತವಾಗಿ ಘೋಷಣೆ ಮಾಡಲಾಗಿದೆ. ಆದರೆ ಕಾಂಗ್ರೆಸ್ ಬೆಂಬಲಿತರಾಗಿ ನಿರ್ದೇಶಕರಾಗಿದ್ದ ಡಾಲು ರವಿ ಸ್ಪರ್ಧೆ ಬಗ್ಗೆ ಇನ್ನೂ ಸ್ಪಷ್ಟವಾಗಿಲ್ಲ. ಮದ್ದೂರಿನಿಂದ ಬಿಜೆಪಿ ಬೆಂಬಲಿತರಾಗಿ ಹಾಲಿ ನಿರ್ದೇಶಕರಾದ ಎಸ್.ಪಿ.ಸ್ವಾಮಿ, ರೂಪಾ ಕಣಕ್ಕಿಳಿಯುವ ಸಾಧ್ಯತೆ ಇದೆ. ಮದ್ದೂರು ಕಾಂಗ್ರೆಸ್ ಬೆಂಬಲಿತರಾಗಿ ಕದಲೂರು ರಾಮಕೃಷ್ಣ, ಅದರಂತೆ ಪಾಂಡವಪುರದಿಂದ ಕಾಡೇನಹಳ್ಳಿ ರಾಮಚಂದ್ರು, ಶ್ರೀರಂಗಪಟ್ಟಣದಿಂದ ಬೋರೇಗೌಡ, ನಾಗಮಂಗಲದಿಂದ ನೆಲ್ಲಿಗೆರೆ ಬಾಲು, ಮಳವಳ್ಳಿಯಿಂದ ವಿಶ್ವನಾಥ್ ಮತ್ತೊಮ್ಮೆ ಅದೃಷ್ಟ ಪರೀಕ್ಷೆಗಿಳಿಯಲು ಉತ್ಸುಕರಾಗಿದ್ದಾರೆ.

ಮನ್‌ಮುಲ್‌ನಲ್ಲೂ ಮೈತ್ರಿ ಮುಂದುವರಿಕೆ: ಮನ್‌ಮುಲ್ ಚುನಾವಣೆಯಲ್ಲೂ ಜೆಡಿಎಸ್–ಬಿಜೆಪಿ ಮೈತ್ರಿ ಮುಂದುವರೆಯುವ ಸಾಧ್ಯತೆ ಇದ್ದು, 12 ನಿರ್ದೇಶಕ ಸ್ಥಾನಗಳ ಪೈಕಿ 9ರಿಂದ ಹತ್ತು ಸ್ಥಾನಗಳಲ್ಲಿ ಜೆಡಿಎಸ್ ಸ್ಪರ್ಧಿಸಲು ಸಿದ್ಧತೆ ನಡೆಸಿದೆ. ಮದ್ದೂರಿನಿಂದ ಬಿಜೆಪಿ ಬೆಂಬಲಿತರಾಗಿ ಗೆದ್ದಿರುವ ಸ್ವಾಮಿ ಹಾಗೂ ರೂಪ ಅವರಿಗೆ ಆಯಾ ಸ್ಥಾನಗಳನ್ನು ಬಿಟ್ಟುಕೊಡಲು ಜೆಡಿಎಸ್ ತೀರ್ಮಾನಿಸಿದ್ದು, ಅಗತ್ಯ ಬಿದ್ದರೆ, ಮಂಡ್ಯ ತಾಲೂಕಿನ ಮೂರು ನಿರ್ದೇಶಕರ ಪೈಕಿ, ಸಮರ್ಥ ಅಭ್ಯರ್ಥಿ ಬಿಜೆಪಿಯಿಂದ ಲಭ್ಯವಾದರೆ ಒಂದು ಸ್ಥಾನ ಬಿಟ್ಟುಕೊಡುವ ಚಿಂತನೆಯಲ್ಲಿದ್ದಾರೆ.

ಒಂದು ತಿಂಗಳ ಉಚಿತ ಯೋಗ ಶಿಬಿರಕ್ಕೆ ಚಾಲನೆ

ಕೆಆರ್.ಪೇಟೆ,ಅ.27– ಜಯನಗರ ಬಡಾವಣೆಯಲ್ಲಿರುವ ಆರ್‌ಟಿಓ ಮಲ್ಲಿಕಾರ್ಜುನ್ ಕಚೇರಿಯಲ್ಲಿ ಹಾಗೂ ಅವರ ಅಭಿಮಾನಿ ಬಳಗದ ಸಹಕಾರದಿಂದ ಬುದ್ಧ ಬಸವ ಅಂಬೇಡ್ಕರ್ ಯೋಗ ಕೇಂದ್ರದ ಯೋಗ ಗುರು ಹಾಗೂ ಅಂತಾರಾಷ್ಟ್ರೀಯ ಚಿನ್ನದ ಪದಕ ವಿಜೇತರಾದ ಯೋಗಪಟು ಎಂ.ಎಸ್.ಅಲ್ಲಮಪ್ರಭು ನೇತೃತ್ವದಲ್ಲಿ ಒಂದು ತಿಂಗಳು ಉಚಿತ ಯೋಗ ಶಿಬಿರಕ್ಕೆ ಚಾಲನೆ ನೀಡಲಾಯಿತು.

ಈ ವೇಳೆ ಮಾತನಾಡಿದ ಆರ್‌ಟಿಓ ಮಲ್ಲಿಕಾರ್ಜುನ್ ಉತ್ತಮ ಆರೋಗ್ಯಕ್ಕಾಗಿ ನಿರಂತರ ಯೋಗ ಮಾಡಬೇಕು, ಡಾ.ರಾಜ್‌ಕುಮಾರ್ ಅವರು ನಿತ್ಯ ಯೋಗ ಮಾಡುವ ಮೂಲಕ ಆರೋಗ್ಯ ಮತ್ತು ಸುಂದರ ದೇಹ ಸೌಂದರ್ಯವನ್ನು ಹೊಂದಿದ್ದರು. ಹಣ–ಅಂತಸ್ತು ಇದ್ದವರು ಶ್ರೀಮಂತರಲ್ಲ, ದೈಹಿಕ ಮತ್ತು ಮಾನಸಿಕ ಆರೋಗ್ಯ ಇದ್ದವರು ನಿಜವಾದ ಶ್ರೀಮಂತರು ಎಂದರು.

ಸಾಹಿತಿ ಬಲ್ಲೇನಹಳ್ಳಿ ಮಂಜುನಾಥ್ ಮಾತನಾಡಿದರು. ಈ ಸಂದರ್ಭದಲ್ಲಿ ಉಪನ್ಯಾಸಕ ಹರಿಚರಣ ತಿಲಕ್, ಶಿಕ್ಷಣ ಸಂಯೋಜಕ ವೀರಭದ್ರಯ್ಯ, ಗ್ರಾ.ಪಂ.ಸದಸ್ಯ ಅಗ್ರಹಾರಬಾಚಹಳ್ಳಿ ಶ್ರೀನಿವಾಸ್, ಶಿಕ್ಷಕರುಗಳಾದ ಕಾಡುಮೆಣಸ ಚಂದ್ರು, ಲಕ್ಷ್ಮಿಪುರ ಮಹೇಶ್, ಅಣ್ಣಯ್ಯ, ಕುಮಾರಿ, ಚೆಸ್ಕಾಂ ಇಂಜಿನಿಯರ್ ಟಿ.ಜಿ.ತಿಮ್ಮಪ್ಪ ರಘು ಹೊಸಹೊಳಲು, ಮಂಜುನಾಥ್ ಕಾಮನಹಳ್ಳಿ, ಮುಖಂಡರುಗಳಾದ ಬಸವರಾಜ್, ವಿಜಿಕುಮಾರ್, ಆರ್‌ಟಿಓ ಅಭಿಮಾನಿ ಬಳಗ ಅಧ್ಯಕ್ಷ ಗಂಜಿಗೆರೆ ಮಹೇಶ್, ಸೇರಿದಂತೆ ನೂರಾರು ಯೋಗಪಟುಗಳು ಉಪಸ್ಥಿತರಿದ್ದರು.



ಅಂತಾರಾಷ್ಟ್ರೀಯ ಚಿನ್ನದ ಪದಕ ವಿಜೇತರಾದ ಯೋಗಪಟು ಎಂ.ಎಸ್. ಅಲ್ಲಮಪ್ರಭು ನೇತೃತ್ವದಲ್ಲಿ ಹಮ್ಮಿಕೊಂಡಿರುವ ಒಂದು ತಿಂಗಳ ಉಚಿತ ಯೋಗ ಶಿಬಿರ ಭಾನುವಾರದಿಂದ ಆರಂಭವಾಯಿತು.

ಅರ್ಜಿ ಆಹ್ವಾನ

ಮಂಡ್ಯ,ಅ.27–ಶ್ರೀರಂಗಪಟ್ಟಣ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಆಗಸ್ಟ್ 2024 ನೇ ಸಾಲಿಗೆ ಪ್ರವೇಶಕ್ಕಾಗಿ ಬಾಕಿ ಉಳಿದಿರುವ ಸ್ಥಾನಗಳನ್ನು ಪಟ್ಟಿ ಮಾಡಲಾಗಿದ್ದು, ಖಾಲಿ ಉಳಿದಿರುವ 26 ಸ್ಥಾನಗಳಿಗೆ ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾದ ಅಭ್ಯರ್ಥಿಗಳು ಪ್ರವೇಶಕ್ಕಾಗಿ ಆಫ್‌ಲೈನ್ ಮುಖಾಂತರ ಅರ್ಜಿಗಳನ್ನು ಅ.31ರವರೆಗೆ ಸಲ್ಲಿಸಬಹುದಾಗಿದೆ

ಹೆಚ್ಚಿನ ಮಾಹಿತಿಗಾಗಿ ದೂ.ಸಂ: 08236–295224ನ್ನು ಸಂಪರ್ಕಿಸಬಹುದು.

ಪಾಂಡವಪುರದಲ್ಲಿ ಅದ್ಧೂರಿ ಮೆರವಣಿಗೆಯೊಂದಿಗೆ ಗಣೇಶ ವಿಸರ್ಜನೆ

ಪಾಂಡವಪುರ: ಪಟ್ಟಣದ ಹಳೇಬಸ್ ನಿಲ್ದಾಣದಲ್ಲಿ ಪಟ್ಟಣದ ಶ್ರೀಸಿದ್ಧಿ ವಿನಾಯಕ ಸೇವಾ ಸಮಿತಿ ವತಿಯಿಂದ ಗಣೇಶ ಹಬ್ಬದಂದು ಪ್ರತಿಷ್ಠಾಪನೆ ಮಾಡಲಾಗಿದ್ದ ಬೃಹತ್ ಗಣೇಶ, ಗೌರಿ, ಈಶ್ವರ ಹಾಗೂ ಪಾರ್ವತಿ ವಿಗ್ರಹವನ್ನು 45 ದಿನಗಳ ಬಳಿಕ ವಿವಿಧ ಜಾನಪದ ಕಲಾ ತಂಡಗಳ ಅದ್ದೂರಿ ಮೆರವಣಿಗೆಯೊಂದಿಗೆ ಪೊಲೀಸರ ಭದ್ರತೆಯಲ್ಲಿ ಭಾನುವಾರ ವಿಸರ್ಜನೆ ಮಾಡಲಾಯಿತು.

ಸಿದ್ದಿ ವಿನಾಯಕ ಸೇವಾ ಸಮಿತಿ ವತಿಯಿಂದ 44ನೇ ವರ್ಷದ ಗಣೇಶ ಪ್ರತಿಷ್ಠಾಪನೆ ಮಾಡಿದ್ದರು. ಗಣೇಶ ಪೆಂಡಾಲ್‌ನಲ್ಲಿ 45 ದಿನಗಳ ಕಾಲ ಪ್ರತಿನಿತ್ಯ ಸಂಜೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ, ಆರೋಗ್ಯ ಶಿಬಿರ, ಹೋಮ ಹಾಗೂ ಅನ್ನಸಂತರ್ಪಣೆ ನಡೆಸಲಾಗಿತ್ತು.

ಗಣೇಶನ ಮೆರವಣಿಗೆ ಪೇಟೆಬೀದಿ, ಪೊಲೀಸ್ ಠಾಣೆ ರಸ್ತೆ, ಕಾಮಚೌಕ, ಬೀರಶೆಟ್ಟಹಳ್ಳಿ ರಸ್ತೆ, ನಾಗಮಂಗಲ ರಸ್ತೆ, ಮಂಡ್ಯ ಸರ್ಕಲ್, ಐದು ದೀಪದ ವೃತ್ತ, ಹಾರೋಹಳ್ಳಿ ರಸ್ತೆ ಬಾಲಕೀಯರ ಕಾಲೇಜು ವೃತ್ತದ ಮೂಲಕ ಸಂಚರಿಸಿ ರಾತ್ರಿ ಪೋಸ್ಟ್ ಆಫೀಸ್ ರಸ್ತೆ ಮೂಲಕ ವಿಸಿ ನಾಲೆಗೆ ಬಳಿ ಹೋಗಿ ಕ್ರೇನ್ ಮೂಲಕ ಗಣಪತಿ, ಗೌರಿ, ಪಾರ್ವತಿ, ಈಶ್ವರ ಮೂರ್ತಿಗಳನ್ನು ನಾಲೆಯಲ್ಲಿ ವಿಸರ್ಜನೆ ಮಾಡಲಾಯಿತು.

ಮೆರವಣಿಗೆಯುದ್ದಕ್ಕೂ ಪೂಜಾ ಕುಣಿತ, ವೀರಗಾಸೆ, ಚಂಡವಾದ್ಯ, ತಮಟೆ, ವಾದ್ಯ, ಕಾಳಿನೃತ್ಯಗಳು ಎಲ್ಲರ ಗಮನಸೆಳೆದವು. ಡಿಜೆ ಸೌಂಡ್‌ನಲ್ಲಿ ಹಾಡುಗಳಿಗೆ ಪುಟ್ಟ ಪುಟ್ಟ ಮಕ್ಕಳು ಸೇರಿದಂತೆ ಯುವಕ–ಯುವತಿಯರು, ಸಾರ್ವಜನಿಕರು ಕುಣಿದು ಕುಪ್ಪಳಿಸಿ ಸಂಭ್ರಮಿಸಿದರು. ಮೆರವಣಿಗೆಯಲ್ಲಿ ಕೇಸರಿ ಬಾವುಟಗಳು ರಾರಾಜಿಸಿದವು.

ಪ್ರಸಾದ ವಿತರಣೆ: ಮೆರವಣಿಗೆ ಪಟ್ಟಣದ ಪೊಲೀಸ್ ಠಾಣೆ ರಸ್ತೆಯಲ್ಲಿರುವ ಶ್ರೀಸಿದ್ದಿ ವಿನಾಯಕ ಸೇವಾ ಸಮಿತಿ ಮುಖ್ಯಸ್ಥ ಸುಬ್ರಮಣ್ಯ ನಿವಾಸದ ಬಳಿ ಆಗಮಿಸಿದಾಗ 101 ಈಡುಗಾಯಿ ಹೊಡೆದು ವಿಶೇಷ ಪೂಜೆಸಲ್ಲಿಸಿ ನಂತರ ನೆರೆದಿದ್ದ ಭಕ್ತರಿಗೆ ಪುಳಿಯೋಗರೆ, ಮೊಸರನ್ನ ವಿತರಣೆ ಮಾಡಲಾಯಿತು. ಮೆರವಣಿಗೆಯುದ್ದಕ್ಕೂ ಸರ್ಕಲ್ ಇನ್ಸ್‌ಪೆಕ್ಟರ್ ವಿವೇಕಾನಂದ, ಸಬ್ ಇನ್ಸ್‌ಪೆಕ್ಟರ್ ಆರ್.ಬಿ. ಉಮೇಶ್ ನೇತೃತ್ವದಲ್ಲಿ ಬಿಗಿ ಪೊಲೀಸ್ ಭದ್ರತೆ ಒದಗಿಸಲಾಗಿತ್ತು. ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಎಚ್ಚರವಹಿಸಿ ಭದ್ರತೆಯಲ್ಲಿ ಗಣೇಶ ವಿಸರ್ಜನೆ ಮಾಡಲಾಯಿತು. ವಿಸರ್ಜನೆ ವೇಳೆ ಶ್ರೀಸಿದ್ದಿ ವಿನಾಯಕ ಸೇವಾ ಸಮಿತಿಯ ಎಲ್ಲಾ ಸದಸ್ಯರು ಸೇರಿದಂತೆ ನೂರಾರು ಭಕ್ತರು ಭಾಗವಹಿಸಿದ್ದರು.



ಪಾಂಡವಪುರ ಪಟ್ಟಣದಲ್ಲಿ ಸಿದ್ಧಿ ವಿನಾಯಕ ಸೇವಾ ಸಮಿತಿಯಿಂದ 45 ದಿನಗಳಿಂದ ಪ್ರತಿಷ್ಠಾಪಿಸಲಾಗಿದ್ದ ಗಣೇಶ, ಗೌರಿ, ಈಶ್ವರಮೂರ್ತಿಗಳನ್ನು ಭಾನುವಾರ ಅದ್ದೂರಿ ಮೆರವಣಿಗೆ ಮೂಲಕ ವಿಸರ್ಜನೆ ಮಾಡಲಾಯಿತು.

ಮೈಸೂರಿನ ಬಿವಿಬಿಯಲ್ಲಿ 'ಭಗವದ್ಗೀತೆಯ ಸಾರ' ಕುರಿತು 2ನೇ ದಿನದ ಪ್ರವಚನ

ಭಗವದ್ಗೀತೆ ಅನುಸರಿಸಿ ಜೀವನದಲ್ಲಿ ಪರಿಪೂರ್ಣತೆ ಸ್ಥಿತಿ ತಲುಪಬಹುದು

● ಆಧ್ಯಾತ್ಮಿಕ ಅನಾರೋಗ್ಯ ನಿವಾರಣೆಗೂ ಭಗವದ್ಗೀತೆ ಮದ್ದು ● ಬೆಂಗಳೂರಿನ ವೇದಾಂತ ಸಂಸ್ಥೆಯ ಸಂಸ್ಥಾಪಕ ಆಚಾರ್ಯ ಈಶ್ವರನ್ ಅಭಿಮತ

ಮೈಸೂರು,ಅ.27(ಪಿಎಂ)– ಗೀತೆಯಲ್ಲಿ ಕೃಷ್ಣನು ನಿಮ್ಮ ಜೀವನದಲ್ಲಿ ಹೇಗೆ ಬದುಕಿದರೆ ಉತ್ತಮ ಎಂಬುದನ್ನು ಪ್ರಾಯೋಗಿಕವಾಗಿ ತಿಳಿಸಿಕೊಟ್ಟಿದ್ದು, ಅದನ್ನು ಅನುಸರಿಸಿದರೆ ನಿಮ್ಮ ಜೀವನದಲ್ಲಿ ಪರಿಪೂರ್ಣತೆಯ ಸ್ಥಿತಿ ತಲುಪಲು ಸಾಧ್ಯ ಎಂದು ಬೆಂಗಳೂರಿನ ವೇದಾಂತ ಸಂಸ್ಥೆಯ ಸಂಸ್ಥಾಪಕ ಆಚಾರ್ಯ ಈಶ್ವರನ್ ಹೇಳಿದರು.

ಮೈಸೂರಿನ ವಿಜಯನಗರದ 1ನೇ ಹಂತದಲ್ಲಿರುವ ಭಾರತೀಯ ವಿದ್ಯಾಭವನದ (ಬಿವಿಬಿ) ಪ್ರೊ.ವೈ.ಟಿ.ತಾತಾಚಾರಿ ಸಭಾಂಗಣದಲ್ಲಿ ಭಾನುವಾರ 'ಭಗವದ್ಗೀತೆಯ ಸಾರ' ಕುರಿತಂತೆ ಇಂಗ್ಲಿಷ್‌ನಲ್ಲಿ ಎರಡನೇ ದಿನದ ಪ್ರವಚನದಲ್ಲಿ ಅವರು ಮಾತನಾಡಿದರು.

ಆಧ್ಯಾತ್ಮಿಕ ಅನಾರೋಗ್ಯ ನಿವಾರಣೆಗೆ ಭಗವದ್ಗೀತೆ ಮದ್ದಾಗಲಿದೆ. ಜೊತೆಗೆ ಅದೇ ಭಗವದ್ಗೀತೆ ಮೂಲಕ ನಾವು ಇನ್ನಷ್ಟು ಉನ್ನತ ಮಟ್ಟದ ಬದುಕು ಕಟ್ಟಿಕೊಳ್ಳಲೂ ಸಾಧ್ಯವಿದೆ. ನೀವು ಅನಾರೋಗ್ಯದಿಂದ ಬಳಲುತ್ತಿದ್ದರೆ ಅಥವಾ ಅದಕ್ಕೂ ಹೆಚ್ಚಾಗಿ ಅಸ್ವಸ್ಥರಾಗಿದ್ದರೆ ಆಸ್ಪತ್ರೆಗೆ ಹೋಗುತ್ತೀರಿ. ಆರೋಗ್ಯವಾಗಿದ್ದೂ ಮತ್ತಷ್ಟು ಆರೋಗ್ಯ ಹೊಂದಲು ಜಿಮ್ ಅಥವಾ ವ್ಯಾಯಾಮದ ಮೊರೆ ಹೋಗುತ್ತೀರಿ. ಅದೇ ರೀತಿಯಲ್ಲಿ ನೀವು ಆಧ್ಯಾತ್ಮಿಕವಾಗಿ ಅನಾರೋಗ್ಯ ಹೊಂದಿದ್ದರೆ ಧರ್ಮವು (ವೇದಾಂತ) ಸಹಾಯಕ್ಕೆ ಬರಲಿದೆ ಅಲ್ಲದೆ, ಆಧ್ಯಾತ್ಮಿಕವಾಗಿ ಅಭಿವೃದ್ಧಿ ಹೊಂದಲು ಬಯಸಿದರೆ ಭಗವದ್ಗೀತೆಯ ಮೊರೆ ಹೋಗಬಹುದು ಎಂದು ತಿಳಿಸಿದರು.

ದುರದೃಷ್ಟವಶಾತ್ ಅರ್ಜುನ ಭಗವದ್ಗೀತೆಯನ್ನು ಅಸ್ತ್ರೆಯಾಗಿ ಬಳಸಿಕೊಂಡ. ಅಂದಮಾತ್ರಕ್ಕೆ ಅದನ್ನು ತಪ್ಪು ಎಂದು ಭಾವಿಸಬೇಡಿ. ಒಂದು ರೀತಿಯಲ್ಲಿ ಅದು ಒಳ್ಳೆಯದೆ. ಆ ರೀತಿಯ ನಡೆಯಿಂದ ಪ್ರಯೋಜನವಿಲ್ಲವೆಂದು ನಾನು ಹೇಳುತ್ತಿಲ್ಲ. ನೀವು ಗೀತೆ (ಭಗವದ್ಗೀತೆ) ವಿಚಾರದಲ್ಲಿ ನೆನಪಿಟ್ಟುಕೊಳ್ಳಬೇಕಾದ ಎರಡನೇ ಆಯಾಮವೆಂದರೆ, ಆಧ್ಯಾತ್ಮಿಕತೆ ಮೂಲಕ ಯಾವುದೇ ಅಭ್ಯಾಸ ಮಾಡಬಹುದು. ಕರ್ಮಯೋಗ, ಭಕ್ತಿಯೋಗ, ಜ್ಞಾನಯೋಗ ಮತ್ತು ಧ್ಯಾನದ ಅಭ್ಯಾಸ ಮಾತ್ರವಲ್ಲದೇ ಮನೋವಿಜ್ಞಾನ ಅಭ್ಯಾಸ ಮಾಡಿದರೂ ಗೀತೆ ಈ ಎಲ್ಲದಕ್ಕೂ ಸಹಕಾರಿಯಾಗಲಿದೆ ಎಂದು ಪ್ರತಿಪಾದಿಸಿದರು.

ಗೀತೆಯ ಮೂರನೇ ಅಧ್ಯಾಯದ ಪ್ರಾರಂಭದಲ್ಲಿ ಅರ್ಜುನನು ಕೃಷ್ಣನಿಗೆ ನಾನು ಏನು ಮಾಡಬೇಕೆಂದು ನಿರ್ಣಾಯಕವಾಗಿ ಹೇಳು ಎಂದು ಕೇಳುತ್ತಾನೆ. ಅಂದರೆ ಅರ್ಜುನ ಕೇಳಿದ್ದು ಕೇವಲ ಒಂದು ಪದದ ಉತ್ತರ. ಆದರೆ ಕೃಷ್ಣ 15 ಅಧ್ಯಾಯಗಳನ್ನು ಬೋಧಿಸುತ್ತಾನೆ. ಗೀತೆಯ ಮೊದಲ ಅಧ್ಯಾಯದಲ್ಲಿ ಅರ್ಜುನ ಅಳುತ್ತಿರುತ್ತಾನೆ. ಎರಡನೇ ಅಧ್ಯಾಯದಲ್ಲಿ ಕೃಷ್ಣನ ಅತ್ಯುನ್ನತ ಜ್ಞಾನವು ಸ್ಫೋಟಗೊಳ್ಳುತ್ತದೆ. ಆದರೆ ಕೃಷ್ಣನು ಏನು ಹೇಳುತ್ತಿದ್ದಾನೆಂದು ಅರ್ಜುನ ಅರ್ಥ ಮಾಡಿಕೊಳ್ಳಲು ಸಾಧ್ಯವಾಗದೇ ಪರಿತಪಿಸುತ್ತಾನೆ. ಮೂರನೇ ಅಧ್ಯಾಯದ ವೇಳೆಗೆ ಅರ್ಜುನನಿಗೆ ಅರ್ಥ ಮಾಡಿಕೊಳ್ಳುವಷ್ಟು ಸಾಮರ್ಥ್ಯ ಬರುತ್ತದೆ. ಈ ಎಲ್ಲದರಲ್ಲೂ ನಮಗೆ ಬದುಕಿನ ಪಾಠವಿವೆ ಎಂದರು.

ನಿನ್ನೆ ಪ್ರವಚನದ ಬಳಿಕ ಕೆಲವರು ನನ್ನಲ್ಲಿ ಬಂದು, ನೀವು ಗೀತೆಯ ಯಾವುದೇ ಶ್ಲೋಕ ಉಲ್ಲೇಖಿಸಿಲ್ಲ ಎಂದರು. ಅಂದ ಮಾತ್ರಕ್ಕೆ ಗೀತೆಯಲ್ಲಿ ಯಾವುದೇ ಅಂಶ ನನಗೆ ಗೊತ್ತಿಲ್ಲ ಎಂದುಕೊಳ್ಳಬೇಡಿ. ಗೀತೆ ಬಗ್ಗೆ ನಿಮಗೆ ಸಂಪೂರ್ಣ ಶಿಕ್ಷಣ ಕೊಡುವುದು ಕೇವಲ ಈ ಒಂದು ಪ್ರವಚನದಿಂದ ಸಾಧ್ಯವಿಲ್ಲ. ನನ್ನ ಉದ್ದೇಶ ಗೀತೆಯಲ್ಲಿ ನಿಮಗೆ ಆಸಕ್ತಿ ಉಂಟು ಮಾಡುವುದಾಗಿದೆ ಎಂದು ಹೇಳಿದರು.

ಸಂಸಾರಿ ಸಾಧನೆ ಮೂಲಕ ಜ್ಞಾನವನ್ನು ತಲುಪುವ ತಿಳುವಳಿಕೆಯೇ ಬ್ರಹ್ಮವಿದ್ಯೆಯಾಗಿದೆ. ನಾನು ಯಾರು, ನನ್ನ ನೈಜ ಸ್ವಭಾವವೇನು ಎಂಬ ಆಲೋಚನೆಗಳು ನಿಮ್ಮಲ್ಲಿ ಜಾಗೃತವಾಗಿರಬೇಕು. ಇದನ್ನೇ ಬ್ರಹ್ಮವಿದ್ಯೆ ತಿಳಿಸಿಕೊಡಲಿದೆ. ಭಗವದ್ಗೀತೆಯು ನಿಮಗೆ ಕರ್ಮಯೋಗ, ಭಕ್ತಿಯೋಗ ಮತ್ತು ಜ್ಞಾನಯೋಗದ ಆಯ್ಕೆಗಳನ್ನು ನೀಡುತ್ತದೆ ಎಂದರು.

ಕೃಷ್ಣ ಏನನ್ನು ತಿನ್ನಬೇಕು. ಏನನ್ನು ತಿನ್ನಬಾರದು ಎಂಬುದನ್ನು ಉಲ್ಲೇಖಿಸಿದ್ದಾನೆ. ಗೀತೆಯಲ್ಲಿ ಬ್ರಹ್ಮವಿದ್ಯೆಯಂತಹ ಮಹತ್ವದ ವಿಚಾರಗಳೊಂದಿಗೆ ಆಹಾರ, ಮಾತುಗಾರಿಕೆ ಬಗ್ಗೆಯೂ ಕೃಷ್ಣ ವಿವರಿಸಿದ್ದಾನೆ ಗೀತೆಯಲ್ಲಿ ಕೃಷ್ಣನು ನಿಮ್ಮ ಜೀವನದಲ್ಲಿ ಹೇಗೆ ಬದುಕಿದರೆ ಉತ್ತಮ ಎಂಬುದನ್ನು ಪ್ರಾಯೋಗಿಕವಾಗಿ ತಿಳಿಸಿಕೊಟ್ಟಿದ್ದಾನೆ ಎಂದು ತಿಳಿಸಿದರು.

ಮೈಸೂರು ಗ್ರಾಹಕರ ಪರಿಷತ್ (ಎಂಜಿಪಿ) ಸಂಸ್ಥಾಪಕ ಅಧ್ಯಕ್ಷ ಭಾಮೀ ವಿ.ಶೆಣೈ, ಬಿವಿಬಿ ಮೈಸೂರು ಕೇಂದ್ರದ ಖಜಾಂಚಿ ಎ.ಟಿ.ಭಾಷ್ಯಂ, ಆಡಳಿತ ಮಂಡಳಿ ಸದಸ್ಯ ಡಾ.ಗಂಗಾಧರ್ ಮತ್ತಿತರರು ಹಾಜರಿದ್ದರು.





ಮೈಸೂರಿನ ಭಾರತೀಯ ವಿದ್ಯಾಭವನದ ಪ್ರೊ.ವೈ.ಟಿ.ತಾತಾಚಾರಿ ಸಭಾಂಗಣದಲ್ಲಿ ಭಾನುವಾರ 'ಭಗವದ್ಗೀತೆಯ ಸಾರ' ಕುರಿತಂತೆ ಇಂಗ್ಲಿಷ್‌ನಲ್ಲಿ ಬೆಂಗಳೂರಿನ ವೇದಾಂತ ಸಂಸ್ಥೆಯ ಸಂಸ್ಥಾಪಕ ಆಚಾರ್ಯ ಈಶ್ವರನ್ ಪ್ರವಚನ ನೀಡಿದರು. ಮತ್ತೊಂದು ಚಿತ್ರದಲ್ಲಿ ಸಭಿಕರನ್ನು ಕಾಣಬಹುದು.

ಅಧಿಕ ಕೀಟನಾಶಕ: ಗುರುವಾಯೂರ್ ದೇವಾಲಯದಲ್ಲಿ 'ತುಳಸಿ' ನಿಷೇಧ

ತಿರುವನಂತಪುರ, ಅ.27– ಭಗವಾನ್ ಶ್ರೀಕೃಷ್ಣನಿಗೆ 'ತುಳಸಿ' ಪ್ರಿಯವಾಗಿದ್ದರೂ, ಬೆಳೆಯುವಾಗ ಕೀಟನಾಶಕವನ್ನು ಹೆಚ್ಚಾಗಿ ಬಳಸುತ್ತಿರುವುದರಿಂದ, ಕೇರಳದ ತ್ರಿಶ್ಶೂರ್‌ನಲ್ಲಿರುವ ಪ್ರಸಿದ್ಧ ಗುರುವಾಯೂರು ಶ್ರೀಕೃಷ್ಣ ದೇಗುಲದಲ್ಲಿ ನಿಷೇಧಿಸಲಾಗಿದೆ.

'ತುಳಸಿ'ಯನ್ನು ಬಳಸುತ್ತಿದ್ದ ದೇಗುಲದ ಸಿಬ್ಬಂದಿಯು ಅಲರ್ಜಿ, ತುರಿಕೆ ಇನ್ನಿತರೆ ಸಮಸ್ಯೆಗಳ ಬಗ್ಗೆ ಆಗಾಗ್ಗೆ ದೂರುತ್ತಿದ್ದರು. ಇದರಿಂದ ದೇಗುಲದ ಆಡಳಿತ ಮಂಡಳಿಯು 'ತುಳಸಿ'ಯನ್ನು ಬಳಸದಂತೆ ಭಕ್ತರಿಗೆ ಸಲಹೆ ನೀಡಿದೆ. ಕೀಟನಾಶಕರಹಿತವಾಗಿ ಬೆಳೆದ 'ತುಳಸಿ'ಯನ್ನು ಪೂಜೆಗಾಗಿ ಪಡೆಯಬಹುದಾದ ವ್ಯವಸ್ಥೆಯನ್ನು ಪರಿಚಯಿಸಿದೆ.

ವಾಣಿಜ್ಯ ಉದ್ದೇಶಕ್ಕಾಗಿಯೂ 'ತುಳಸಿ'ಯನ್ನು ಬೆಳೆಯಲಾಗುತ್ತಿದ್ದು, ಅತಿಯಾಗಿ ಕೀಟನಾಶಕ ಬಳಸಲಾಗುತ್ತಿದೆ. ಹೆಚ್ಚು ದಿನ ಸಂರಕ್ಷಿಸಿ ಇಡಲೂ ಕ್ರಿಮಿನಾಶಕ ಬಳಕೆ ಆಗುತ್ತಿದೆ. ಅಂಗಡಿಗಳಲ್ಲಿ ಸಿಗುವ ಇಂತಹ 'ತುಳಸಿ'ಯನ್ನೇ ಬಹುತೇಕ ಭಕ್ತರು ಖರೀದಿಸಿ, ಪೂಜೆಗಾಗಿ ಅರ್ಪಿಸುತ್ತಿದ್ದಾರೆ. ಇದನ್ನು ನಿರಂತರವಾಗಿ ಬಳಸುವ ಸಿಬ್ಬಂದಿಯು ಅನಾರೋಗ್ಯ ಸಮಸ್ಯೆಗಳಿಗೆ ತುತ್ತಾಗುತ್ತಿರುವುದರಿಂದ, ದೇಗುಲದಲ್ಲಿ ಬಳಕೆಗೆ ನಿರ್ಬಂಧ ವಿಧಿಸಲಾಗಿದೆ ಎಂದು ದೇವಾಲಯದ ಸಿಬ್ಬಂದಿ ಸುದ್ದಿ ಮಾಧ್ಯಮಕ್ಕೆ ತಿಳಿಸಿದರು. ಈ ನಿರ್ಧಾರವನ್ನು ಕೆಲವು ಹಿಂದೂ ಸಂಘಟನೆಗಳು ಖಂಡಿಸಿದ್ದು, ಆಡಳಿತಾರೂಢ ಸಿಪಿಎಂ ಸರ್ಕಾರದ ವಿರುದ್ಧ ಕಿಡಿಕಾರಿವೆ. 'ಹಲವು ತಿಂಗಳ ಹಿಂದೆಯೇ 'ತುಳಸಿ'ಯ ನಿರ್ಬಂಧವನ್ನು ಜಾರಿಗೊಳಿಸಲಾಗಿದೆ ಕೆಲವರು ಇದೀಗ ಹಾದಿ ತಪ್ಪಿಸುವ ಕೆಲಸ ಮಾಡುತ್ತಿದ್ದಾರಷ್ಟೇ' ಎಂದು ಗುರುವಾಯೂರು ದೇವಸ್ಥಾನದ ಅಧ್ಯಕ್ಷ ವಿ.ಕೆ. ವಿಜಯನ್ ತಿಳಿಸಿದರು. 24 ವರ್ಷದ ಮಹಿಳೆಯೊಬ್ಬರು ಮೃತಪಟ್ಟ ನಂತರ, ತಿರುವಾಂಕೂರು ದೇವಸ್ಥಾನ ಆಡಳಿತ ಮಂಡಳಿಯು (ಟಿಡಿಬಿ) ತನ್ನ ಸುಪರ್ದಿಯಲ್ಲಿರುವ ದೇವಾಲಯಗಳಲ್ಲಿ ಪೂಜೆಗೆ ಅರಳಿ ಹೂವು (ಒಲಿಯಾಂಡರ್–ಕಣಗಿಲು ಜಾತಿಗೆ ಸೇರಿದ ಹೂವು) ಬಳಸುವುದನ್ನು ನಿಲ್ಲಿಸಲು ಈ ಹಿಂದೆಯೇ ತೀರ್ಮಾನಿಸಿದೆ. ಏಲಕ್ಕಿಯಲ್ಲಿ ಕೀಟನಾಶಕದ ಪ್ರಮಾಣವು ಅನುಮತಿಗಿಂತ ಹೆಚ್ಚಿತ್ತು ಎಂಬ ದೂರು ದಾಖಲಾಗಿದ್ದಕ್ಕೆ, ಶಬರಿಮಲೆ ಅಯ್ಯಪ್ಪ ದೇವಸ್ಥಾನದ ಜನಪ್ರಿಯ 'ಅರವಣ' ಪ್ರಸಾದದ 6.65 ಲಕ್ಷ ಕಂಟೇನರ್‌ಗಳನ್ನು ಬಳಸಲಿಲ್ಲ.

ಡಾ.ಎಪಿಜೆ ಅಬ್ದುಲ್ ಕಲಾಂ ಜನ್ಮದಿನದ ಅಂಗವಾಗಿ ವಿದ್ಯಾರ್ಥಿಗಳಿಗೆ ವಿಶೇಷ ಸ್ಪರ್ಧೆ

ಮೈಸೂರು, ಅ.27(ಎಸ್‌ಬಿಡಿ)– ಶ್ರೇಷ್ಠ ವಿಜ್ಞಾನಿ, ಮಾಜಿ ರಾಷ್ಟ್ರಪತಿ ದಿವಂಗತ ಡಾ.ಎಪಿಜೆ ಅಬ್ದುಲ್ ಕಲಾಂ ಅವರ 94ನೇ ಜನ್ಮದಿನದ ಅಂಗವಾಗಿ ಟೀಂ ಮೈಸೂರು ಸಂಘಟನೆ ವತಿಯಿಂದ ಪ್ರೌಢಶಾಲೆ ವಿದ್ಯಾರ್ಥಿಗಳಿಗೆ ವಿಶೇಷ ಸ್ಪರ್ಧೆ ಏರ್ಪಡಿಸಲಾಗಿತ್ತು.

ಮೈಸೂರಿನ ಬಿಎಸ್‌ಎಸ್ ವಿದ್ಯೋದಯ ಶಾಲೆಯಲ್ಲಿ ಭಾನುವಾರ ನಡೆದ 'ಭಾರತದ ಬಾಹ್ಯಾಕಾಶ ತಂತ್ರಜ್ಞಾನಕ್ಕೆ ಡಾ.ಎಪಿಜೆ ಅಬ್ದುಲ್ ಕಲಾಂ ಅವರ ಕೊಡುಗೆ' ಕುರಿತ ಸ್ಪರ್ಧೆಯಲ್ಲಿ 8, 9, 10ನೇ ತರಗತಿಯ 70ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡು, ಚಿತ್ರಪಟ (ಪೋಸ್ಟರ್) ರಚನೆಯೊಂದಿಗೆ ವಿಷಯದ ಬಗ್ಗೆ ಅಧ್ಯಯನ ನಡೆಸಿ, ವಿಚಾರ ಮಂಡಿಸಿದರು.

ಸ್ಪರ್ಧೆಯಲ್ಲಿ ತರಳಬಾಳು ಶಿಕ್ಷಣ ಸಂಸ್ಥೆಯ ಶಾವರ್ಣ್ಯ ಪ್ರಥಮ, ವಿಜಯ ವಿಠಲ ಶಾಲೆಯ ಪೂರ್ವಿಕಾ ದ್ವಿತೀಯ, ಸರ್ಕಾರಿ ಆದರ್ಶ ಶಾಲೆಯ ಹಂಸಿಕಾ ತೃತೀಯ ಬಹುಮಾನ, ಸಿಎಫ್‌ಟಿಆರ್‌ಐ ಶಾಲೆಯ ನಮನ ಹಾಗೂ ಕ್ರೈಸ್ಟ್ ಶಾಲೆಯ ಬಿ.ಕೆ.ರೋಹಿಣಿ ಸಮಾಧಾನಕರ ಬಹುಮಾನ ಪಡೆದುಕೊಂಡರು. ವಿಜೇತರಿಗೆ ಕ್ರಮವಾಗಿ 3 ಸಾವಿರ, 2 ಸಾವಿರ, 1 ಸಾವಿರ ಹಾಗೂ 500 ರೂ. ನಗದು ಬಹುಮಾನ ಹಾಗೂ ಸ್ಮರಣಿಕೆ ನೀಡಿ, ಅಭಿನಂದಿಸಲಾಯಿತು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ವಿಜ್ಞಾನಿ ಡಾ.ನವೀನ್ ಶಿವಣ್ಣ ಮಾತನಾಡಿ, ಡಾ.ಎಪಿಜೆ ಅಬ್ದುಲ್ ಕಲಾಂ ಅವರು ಇಸ್ರೋ ವಿಜ್ಞಾನಿಯಾಗಿ ಸೇವೆ ಆರಂಭಿಸಿ, ನಂತರ ಡಿಆರ್‌ಡಿಓಗೆ ಸೇರಿದರು. ಆ ಸಂಸ್ಥೆಗೆ ಸಂಬಂಧಿಸಿದ ಡಿಎಫ್‌ಆರ್‌ಎಲ್ ಘಟಕ ಮೈಸೂರಿನಲ್ಲಿದೆ. ವಿದ್ಯಾರ್ಥಿಗಳು ಕಲಾಂ ಅವರನ್ನು ಆದರ್ಶವಾಗಿಟ್ಟುಕೊಂಡು ವಿಜ್ಞಾನಕ್ಕೆ ಸಂಬಂಧಿಸಿದ ಅಧ್ಯಯನದ ಮೂಲಕ ದೇಶಕ್ಕೆ ಕೊಡುಗೆ ನೀಡಬೇಕು ಎಂದು ಆಶಿಸಿದರು.

ಮಾಜಿ ಕಾರ್ಪೊರೇಟರ್, ಉರಗ ರಕ್ಷಕ ಸ್ನೇಕ್ ಶ್ಯಾಮ್ ಮಾತನಾಡಿ, ವಿದ್ಯಾರ್ಥಿಗಳು ವಿಜ್ಞಾನ ಹಾಗೂ ತಂತ್ರಜ್ಞಾನದ ಅಧ್ಯಯನದ ಜೊತೆಗೆ ಸಾಮಾಜಿಕ ಜವಾಬ್ದಾರಿಯನ್ನು ರೂಢಿಸಿಕೊಳ್ಳಬೇಕು. ನಮಗೆ ಜನ್ಮ ನೀಡಿದ ತಂದೆ–ತಾಯಿ, ನಮ್ಮನ್ನು ಸಲಹುತ್ತಿರುವ ಪರಿಸರ, ಅನ್ನದಾತರಾದ ರೈತರು ಹಾಗೂ ದೇಶ ಕಾಯುವ ಯೋಧರನ್ನು ಸದಾ ಸ್ಮರಣೆ ಮಾಡಬೇಕು ಎಂದು ಕಿವಿಮಾತು ಹೇಳಿದರು.

ಬಿಜೆಪಿ ರಾಜ್ಯ ಉಪಾಧ್ಯಕ್ಷ ಎಂ.ರಾಜೇಂದ್ರ ಟೀಂ ಮೈಸೂರು ಸಂಘಟನೆಯ ಸಾಮಾಜಿಕ ಸೇವೆಯನ್ನು ಹಲವು ವರ್ಷಗಳಿಂದ ಗಮನಿಸಿದ್ದೇನೆ. ಗಿಡಗಳನ್ನು ನೆಟ್ಟು ಪೋಷಿಸುವುದನ್ನು ಸಂಕಲ್ಪದಂತೆ ಮುಂದುವರೆಸಿಕೊಂಡು ಬಂದಿರುವುದು ಶ್ಲಾಘನೀಯ. ಅಲ್ಲದೆ ಈ ರೀತಿಯ ಸ್ಪರ್ಧೆಗಳ ಮೂಲಕ ವಿದ್ಯಾರ್ಥಿಗಳಿಗೆ ನಮ್ಮ ದೇಶದ ಮಹನೀಯರ ಮಹತ್ವದ ಕೊಡುಗೆಗಳನ್ನು ಮನದಟ್ಟು ಮಾಡುವ ಪ್ರಯತ್ನ ನಡೆಸುತ್ತಿರುವುದು ಅಭಿನಂದನಾರ್ಹ ಎಂದರು.

ಉಪನ್ಯಾಸಕರಾದ ಪ್ರಶಾಂತ್, ಶ್ರೀಮತಿ ಗೌರಿ ರಾಯ್ ಹಾಗೂ ಬಸವರಾಜು ಅವರು ಸ್ಪರ್ಧೆಯ ತೀರ್ಪುಗಾರರಾಗಿದ್ದರು. ಉದಯೋನ್ಮುಖ ನಟ ಚೇತನ್, ಟೀಂ ಮೈಸೂರು ಸಂಚಾಲಕ ಗೋಕುಲ್ ಗೋವರ್ಧನ್, ಸಹ ಸಂಚಾಲಕ ಯಶವಂತ್ ಕುಮಾರ್, ಕಾರ್ಯಕ್ರಮ ಸಂಯೋಜಕರಾದ ಕಿರಣ್ ಜೈರಾಮ್ ಗೌಡ ಅನಿಲ್, ಹಿರಿಯಣ್ಣ, ಶಿವಪ್ರಸಾದ್, ಯತೀಶ್, ಅಮರ್, ಮುರಳಿ, ಪ್ರಸನ್ನ ರಾಜಗುರು, ಆನಂದ್, ಮನೋಹರ್, ಹೇಮಂತ್ ಕುಮಾರ್, ನವೀನ್, ಸುನಿಲ್ ಕುಮಾರ್, ರಾಮಪ್ರಸಾದ್, ಮಂಜು, ಬಾಲಕೃಷ್ಣ, ಮಂಜು ಹುಣಸೂರು, ಹರೀಶ್ ಶೆಟ್ಟಿ ಹರೀಶ್ ಬಾಬು, ಸಹನ, ಸುಕೃತ, ಕಲ್ಯಾಣಿ, ಜ್ಯೋತಿ, ಲಕ್ಷ್ಮಿ ಮತ್ತಿತರರು ಉಪಸ್ಥಿತರಿದ್ದರು.



ಮಾಜಿ ರಾಷ್ಟ್ರಪತಿ ಡಾ.ಎಪಿಜೆ ಅಬ್ದುಲ್ ಕಲಾಂ ಅವರ ಜನ್ಮದಿನದ ಅಂಗವಾಗಿ ಆಯೋಜಿಸಿದ್ದ ವಿಶೇಷ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ನೀಡಿ, ಅಭಿನಂದಿಸಲಾಯಿತು.

ದೀಪಾವಳಿಯಿಂದ ದೀಪಾವಳಿಗೆ ವರ್ಷ ಭವಿಷ್ಯ 2024





ವಿಜಯ್ ಕೆ.ವಿ.
ಜ್ಯೋತಿಷ ವಿಶಾರದ,
ಮೊ. 9739548720
'ಚೈತನ್ಯಶ್ರೀ' ವಿ. ಕೇಶವಮೂರ್ತಿ,
ಜ್ಯೋತಿಷ್ಯ ವಿದ್ವಾಂಸ ಇವರ
ಸುಪುತ್ರರು, ಮೊ. 9740973224



ಮೇಷ: ಈ ದೀಪಾವಳಿಯಿಂದ ಮುಂದಿನ ಯುಗಾದಿಯವರೆಗೆ ಗುರುಕೃಪೆಯಿಂದ ಇಚ್ಛಿತ ಕೆಲಸ ಕಾರ್ಯಗಳಲ್ಲಿ ಯಶಸ್ಸನ್ನು ಹೊಂದುವಿರಿ. ಉತ್ತಮ ಮಾತುಕತೆಯಿಂದ ಕಾರ್ಯ ಸಾಧನೆ. ಉದ್ಯೋಗಾಕಾಂಕ್ಷಿಗಳಿಗೆ ಶುಭ ಸುದ್ದಿ ಬರಲಿದೆ. ವಿದ್ಯಾರ್ಥಿಗಳಿಗೆ ಉನ್ನತ ಶ್ರೇಣಿ ದೊರೆಯುವುದು. ನೂತನ ವಾಹನ, ನಿವೇಶನ ಖರೀದಿ ಯೋಗವಿದೆ. ಗೃಹ ನಿರ್ಮಾಣಕ್ಕೆ ಕಾಲ ಕೂಡಿ ಬಂದಿದೆ. ದಾನ, ಧರ್ಮ ಕಾರ್ಯಗಳಿಂದ ಮಾನ, ಪ್ರತಿಷ್ಠೆಗಳ ವೃದ್ಧಿಯಾಗಲಿದೆ. ಯುಗಾದಿಯ ನಂತರ ಅಕಾರಣವಾದ ಕಲಹಗಳು, ಇಷ್ಟ ಜನರಿಂದ ದೂರವಿರಬೇಕಾದ ಪರಿಸ್ಥಿತಿ. ಶರೀರಕ್ಕೆ ಅನಾರೋಗ್ಯ, ರಾಜಕೀಯ ವ್ಯಕ್ತಿಗಳಿಗೆ ಅಪವಾದಗಳು ಸುತ್ತಿಕೊಳ್ಳುವುದು. ಕಬ್ಬಿಣ, ಸಿಮೆಂಟು, ಆಟೋಮೊಬೈಲ್ ವ್ಯಾಪಾರಿಗಳಿಗೆ ಅಧಿಕ ಧನಲಾಭ. ಯುಗಾದಿಯ ನಂತರ ವ್ಯಯ ಸ್ಥಾನಕ್ಕೆ ಬರುವ ಶನಿದೇವನಿಂದ 'ಸಾಡೇಸಾತಿ' ಆರಂಭವಾಗುವುದು. ವ್ಯರ್ಥ ಧನಹಾನಿ. ಆರೋಗ್ಯದಲ್ಲಿ ಏರುಪೇರು, ವೈದ್ಯಕೀಯ ಖರ್ಚುಗಳು ಎದುರಾಗುವುದು. ನ್ಯಾಯಾಲಯ ವಿಚಾರಗಳಲ್ಲಿ ಹಿನ್ನಡೆ. ಯತ್ನ ಕಾರ್ಯಗಳು ಮುಂದೂಡಲ್ಪಡುತ್ತವೆ. ದುಷ್ಟರ ಸಂಗದಿಂದ ದೂರವಿರಿ.

ಪರಿಹಾರ : ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿ.



ವೃಷಭ: ಮುಂದಿನ ಯುಗಾದಿಯವರೆಗೆ ನಿಮ್ಮ ಜನ್ಮ ರಾಶಿಯಲ್ಲಿ ಸಂಚರಿಸುವಾಗ ಮನಸ್ಸಿಗೆ ಚಿಂತೆ, ಶರೀರ ಸ್ವಾಸ್ಥ್ಯದಲ್ಲಿ ಕುಂದು. ವ್ಯಾಪಾರ ಉದ್ಯೋಗಗಳಲ್ಲಿ ಅಲ್ಪ ಪ್ರಗತಿ. ಕೆಲವು ಬಾರಿ ಬುದ್ಧಿಹೀನತೆ ಉಂಟಾಗುವುದು. ಅಧಿಕಾರಿಗಳಿಂದ ಭಯ, ಪದಭ್ರಷ್ಟತೆಯು ಸ್ವಸ್ಥಳ ಬಿಟ್ಟು ಪರಸ್ಥಳಕ್ಕೆ ತೆರಳಬೇಕಾದೀತು. ಸಜ್ಜನರ ವಿರೋಧ ಎದುರಿಸಬೇಕಾದೀತು. ವ್ಯಾಜ್ಯಗಳಿಂದ ಬವಣೆ ಪಡುವಿರಿ. ತದನಂತರ ಗುರುವು ದ್ವಿತೀಯಕ್ಕೆ ಬಂದಾಗ ಶರೀರ ಸೌಖ್ಯ, ಯಶಃ ಕೀರ್ತಿಗಳು. ಸಿರಿ ಸಂಪದಗಳನ್ನು ಗಳಿಸುವಿರಿ. ಮನೆಯಲ್ಲಿ ವಿವಾಹಾದಿ ಶುಭ ಕಾರ್ಯಗಳು ನಡೆಯುವ ಸಂಭವ. ಉತ್ತಮ ಉದ್ಯೋಗವೂ ದೊರೆಯುವುದು.

ಮುಂದಿನ ಏಪ್ರಿಲ್‌ವರೆಗೆ ಶನಿಸ್ವಾಮಿಯು ವ್ಯಾಕುಲತೆ, ಸಂತಾಪ, ಮಾಡುವ ಕೆಲಸಗಳಲ್ಲಿ ವಿಘ್ನಗಳನ್ನು ನೀಡುವನು. ಕೃಷಿಕರಿಗೆ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯದು. ಸ್ಥಾನ ಲಾಭವಾದರೂ ಧನ ಕ್ಷಯ ಉಂಟಾಗುವುದು. ಸರ್ಕಾರಿ ನೌಕರರಿಗೆ ಪದಭ್ರಷ್ಟತೆ, ದುಷ್ಕರ್ಮ ಪ್ರವೃತ್ತಿ. ಯುಗಾದಿಯ ನಂತರ ದೇಹಾರೋಗ್ಯ, ಧನಧಾನ್ಯ ಲಾಭ. ನಿಮ್ಮ ಸ್ವಭಾವದಲ್ಲಿ ತೀಕ್ಷ್ಣತೆ ಕಂಡು ಬರುವುದು. ಕೆಲಸ ಕಾರ್ಯಗಳು ನೀವಂದುಕೊಂಡಂತೆ ನಡೆಯುವುದು.

ಶ್ರೀ ಶನಿಮಹಾತ್ಮೆ ಕಥೆ ಓದಿ.



ಮಿಥುನ: ಈ ದೀಪಾವಳಿಯಿಂದ ಪ್ರಥಮ ಆರು ತಿಂಗಳು ಬೃಹಸ್ಪತಿಯು ವ್ಯಯ ಭಾವದಲ್ಲೂ, ತದನಂತರ ದೀಪಾವಳಿಯವರೆಗೆ ನಿಮ್ಮ ಜನ್ಮ ರಾಶಿಯಲ್ಲೂ ಸಂಚರಿಸುವ ಫಲವಾಗಿ ಮಾಡುವ ಮುಖ್ಯ ಕೆಲಸಗಳಲ್ಲಿ ಅನಗತ್ಯ ವಿಘ್ನಗಳು ಉಂಟಾಗುವುದು. ನ್ಯಾಯಯುಗ ಕಾರ್ಯಗಳಲ್ಲಿಯೂ ಅಸಫಲತೆ ಎದುರಾಗುವುದು. ಇದರಿಂದ ಮಾನಸಿಕ ಪೀಡೆ, ಅನಾರೋಗ್ಯ, ತೇಜೋಹೀನವಾದ ವದನ, ಬಂಧುಗಳಲ್ಲಿ ವೈರತ್ವ, ಮಾನಹಾನಿಯಂಥ ಪ್ರಸಂಗಗಳು ನಡೆಯುವ ಸಾಧ್ಯತೆ. ಶುಭ ಕಾರ್ಯಗಳಿಗೆ ಅಡ್ಡಿ, ಆತಂಕಗಳು ಉಂಟಾಗುವುದು. ಸತ್ಪತ್ನಿಯ ಸಹವಾಸ, ಸೌಖ್ಯಗಳಿಂದ ವಂಚಿತರಾಗುವಿರಿ.

ರವಿ ನಂದನನಾದ ಶನಿದೇವನೂ ಸಹ ನಿಮ್ಮ ಸಹಾಯಕ್ಕೆ ಇಲ್ಲ. ನಿಮ್ಮವರೇ ತಿರಸ್ಕಾರ ದೃಷ್ಟಿಯಿಂದ ನೋಡುವರು. ಕೆಲವು ತಪ್ಪು ನಿರ್ಧಾರಗಳಿಂದ ಸಂಕಷ್ಟಕ್ಕೆ ಈಡಾಗುವಿರಿ. ಪ್ರಮುಖ ಕಾರ್ಯ ಕಲಾಪಗಳು ಮಂದಗತಿಯಲ್ಲಿ ಸಾಗುವುದರ ಜೊತೆಗೆ ವೃಥಾ ಅಲೆದಾಟಗಳು ದುಷ್ಟ ಜನರ ಸಹವಾಸದಿಂದ ನಿಮ್ಮ ಗೌರವ, ಪ್ರತಿಷ್ಠೆಗಳಿಗೆ ಚ್ಯುತಿ ಉಂಟಾಗುವುದು, ಕೋರ್ಟು, ಕಚೇರಿ ವ್ಯವಹಾರಗಳು ನಿಮ್ಮ ಅನುಕೂಲಕ್ಕಿಲ್ಲ. ಸ್ತ್ರೀ ನಿಮಿತ್ತ ತೊಂದರೆಗೆ ಸಿಲುಕುವ ಸಾಧ್ಯತೆ ಇರುತ್ತದೆ.

ಶಾಂತಿಕ್ರಮ : ಶ್ರೀ ರಾಘವೇಂದ್ರ ಉಪಾಸನೆ. ಶ್ರೀ ಶನ್ಯಾಷ್ಟೋತ್ತರ ಪಠಣ.

ಕಟಕ: ಈ ದೀಪಾವಳಿಯಿಂದ ಪ್ರಥಮಾರ್ಧ ವರ್ಷದಲ್ಲಿ ಗುರುಕೃಪೆಯಿಂದ ಯಶಃ ಕೀರ್ತಿ ಲಾಭ. ಆರ್ಥಿಕ ಪರಿಸ್ಥಿತಿ ಸುಧಾರಣೆ. ಸರ್ವ ಕಾಯ ಜಯ. ಶುಭ ಕಾರ್ಯಾಚರಣೆ. ಮನೆಯಲ್ಲಿ ವಿವಾಹಾದಿ ಮಂಗಳ ಕಾರ್ಯಗಳು ಜರುಗುವುದು. ಶಿಕ್ಷಣದಲ್ಲಿ ಯಶಸ್ಸು. ಮಿತ್ರರು, ಐಶ್ವರ್ಯ, ವಾಹನಗಳು ಪ್ರಾಪ್ತವಾಗುತ್ತವೆ. ಶತ್ರುಗಳ ಮೇಲೆ ವಿಜಯವನ್ನು ಸಾಧಿಸುವಿರಿ. ವರ್ಷದ ದ್ವಿತೀಯಾರ್ಧಕ್ಕೆ ವೃಥಾ ಧನವ್ಯಯ, ದರಿದ್ರತ್ವ ಯಶೋ ನಾಶ. ಅನಾರೋಗ್ಯವೂ ಕಾಡಿಸುವುದು. ಜನ್ಮಸ್ಥಳ ಬಿಡಬೇಕಾದ ಸನ್ನಿವೇಶ ಎದುರಾಗುವುದು. ತಂದೆ–ಮಕ್ಕಳಲ್ಲಿ ವೈಮನಸ್ಯ. ಧನ–ಸಂಪತ್ತಿನ ಹೇತುವಿನಿಂದ ದುಃಖ, ಸತ್ಪತ್ನಿಯ ಸೌಖ್ಯ, ಸಹವಾಸಗಳಿಂದ ವಂಚಿತರಾಗುವಿರಿ.



ನೀತಿ ಮಾರ್ಗ ಕೋವಿದನಾದ ಶ್ರೀ ಶನಿಮಹಾತ್ಮನು ನಿಮ್ಮನ್ನು ಹಲವು ರೀತಿಯ ಅಗ್ನಿಪರೀಕ್ಷೆಗೆ ಗುರಿಪಡಿಸಲಿದ್ದಾನೆ. ಪ್ರಥಮಾರ್ಧ ಅವಧಿಯಲ್ಲಿ ಅಷ್ಟಮದಲ್ಲಿಯೂ, ದ್ವಿತೀಯಾರ್ಧದಲ್ಲಿ ನವಮದಲ್ಲಿಯೂ ಗೋಚರಿಸುವ ಪರಿಣಾಮ ವ್ಯಾಕುಲತೆ, ಶೋಕ ಪ್ರಸಂಗಗಳು ಘಟಿಸುವುದು. ಪಾಪ ಕಾರ್ಯದಲ್ಲಿ ಆಸಕ್ತಿ, ನಾನಾ ವಿಧವಾದ ವಿರೋಧ, ಅನಾರೋಗ್ಯ, ಅಪಮೃತ್ಯು ಭಯಗಳು ಉಂಟಾಗುವುದು. ಅಪರೂಪಕ್ಕೊಮ್ಮೆ ಧನಲಾಭವಾಗುವುದು.

ಪರಿಹಾರಕ್ಕೆ : ಮಹಾ ಮೃತ್ಯುಂಜಯ ಮಂತ್ರ ಜಪಿಸಿ.



ಸಿಂಹ: ಈ ದೀಪಾವಳಿಯಿಂದ ಯುಗಾದಿಯವರೆಗೆ ಕೃಷಿಯಲ್ಲಿ ಅಲ್ಪ ಲಾಭ, ಪ್ರತಿಫಲವಿಲ್ಲದ ತಿರುಗಾಟಗಳು. ವ್ಯಾಪಾರ–ವ್ಯವಹಾರಗಳಲ್ಲಿ ಹೂಡಿದ ಬಂಡವಾಳ ಕರಗುವುದು, ನೃಪಚೋರಾಗ್ನಿ ಭಯ. ಸ್ಥಾನಕ್ಕೆ ಚ್ಯುತಿ. ಮಕ್ಕಳಿಗೆ ಸಂಕಷ್ಟಗಳು. ಯುಗಾದಿ ನಂತರ ಶುಭ ಗುರುವಿನಿಂದ ಯಶಃ ಕೀರ್ತಿ ಲಾಭಗಳು. ಶತ್ರುಗಳು ಹಿಮ್ಮೆಟ್ಟುವರು. ಮನೆಯಲ್ಲಿ ಶುಭ ಕಾರ್ಯಗಳು ಜರುಗುವುದು. ವಿವಾಹಾಕಾಂಕ್ಷಿಗಳಿಗೆ ಸೂಕ್ತ ವಧು–ವರ ದೊರೆಯುವುದು. ಹಲವರಿಗೆ ಪುತ್ರ ಪ್ರಾಪ್ತಿಯ ಸಂಭ್ರಮ. ಸುಖೀ ಜೀವನ.

ಈ ವರ್ಷ ಪೂರ್ತಿ ಅಷ್ಟಮದಲ್ಲಿ ಹಾಗೂ ನವಮದಲ್ಲಿ ಗೋಚರಿಸುವ ಕಲಿಯುಗ ದಂಡಾಧಿಕಾರಿಯಾದ ಶನಿದೇವನು ನಿಮಗೆ ಯಾವ ರೀತಿಯಲ್ಲೂ ಕೈ ಹಿಡಿಯಲಾರ. ಬಂಧು ಮಿತ್ರರಲ್ಲಿ ಕಲಹ, ವಿರಸಗಳು, ಮನಸ್ಸಿಗೂ ಶರೀರಕ್ಕೂ ಆತಂಕಗಳು. ಕೌಟುಂಬಿಕ ಕಲಹಗಳಿಂದ ಘಾಸಿಗೆ ಒಳಗಾಗುವಿರಿ. ಅಪಘಾತ, ಶಸ್ತ್ರ ಕ್ರಿಯೆಗಳಂತಹ ಸನ್ನಿವೇಶಗಳು ಎದುರಾಗಬಹುದು. ನೀಚಕರ್ಮದಲ್ಲಿ ಆಸಕ್ತಿ, ಸಂಪತ್ತು ನಾಶಗಳು ಉಂಟಾಗುವುದು. ಧಾರ್ಮಿಕ ಕಾರ್ಯಗಳಲ್ಲಿ ವಿಘ್ನಗಳು. ಪಿತೃ ಸಮಾನ ವ್ಯಕ್ತಿಯ ವಿಯೋಗ. ದಾರಾ ಪುತ್ರರು ಆಘಾತಕಾರಿ ಸಮಸ್ಯೆಗಳನ್ನು ಉಂಟು ಮಾಡುವರು.

ಶ್ರೀ ಶನಿಚಾಲೀಸ ಪಠಿಸಿ.



ಕನ್ಯಾ: ದೀಪಾವಳಿಯ ಪ್ರಥಮ ಆರು ತಿಂಗಳು ಗುರುಗ್ರಹ ನಿಮಗೆ ಸಹಾಯಕರನಾಗಿದ್ದು, ವ್ಯಾಪಾರ, ವ್ಯವಹಾರಗಳಲ್ಲಿ ಧನಲಾಭ, ಕುಟುಂಬದಲ್ಲಿ ಸೌಖ್ಯದ ವಾತಾವರಣ. ಹೊಸ ಹುರುಪಿನಿಂದ ಕಾರ್ಯ ಕಲಾಪಗಳನ್ನು ನಿರ್ವಹಿಸುವಿರಿ. ನಿಮ್ಮ ಕನಸುಗಳು ಸಾಕಾರವಾಗುವುವು. ಗುರುಜನರ, ಬಂಧು ಮಿತ್ರರ ಮಾರ್ಗದರ್ಶನ ದೊರಕುತ್ತದೆ. ವಿವಾಹಾಕಾಂಕ್ಷಿಗಳಿಗೆ ಕಂಕಣಬಲ ಕೂಡಿ ಬರುವುದು. ನಿವೇಶನ, ಗೃಹ ಹೊಂದುವ ಯೋಗವಿದೆ. ನಂತರ ಗುರುಬಲವು ಕ್ಷೀಣವಾಗಿ ಕಾರ್ಯ ಸಾಧನೆಗಾಗಿ ಅಧಿಕ ತಿರುಗಾಟಗಳಿಂದ ದೇಹವು ಬಳಲುವುದು. ವ್ಯಾಪಾರ, ವ್ಯವಹಾರಗಳಲ್ಲಿ ಅಲ್ಪಪ್ರಗತಿ. ನಿರೀಕ್ಷಿತ ಲಾಭವಿಲ್ಲದೆ ನಾನಾ ರೀತಿಯ ಚಿಂತೆಗಳು ಕಾಡುವುದು. ಸರ್ಕಾರಿ ನೌಕರರಿಗೆ ಪದಚ್ಯುತಿಯ ಭಯ ಕಾಡುವುದು.

ಯುಗಾದಿಯವರೆಗೆ ಶ್ರೀ ಶನಿದೇವನ ಕೃಪೆ ಇದೆ. ಸ್ಥಿರಾಸ್ತಿ ಸಂಪಾದನೆ, ಕೃಷಿಯಿಂದ ಲಾಭ, ಕೃಷಿ ಉಪಕರಣ ಮಾರಾಟಗಾರರಿಗೆ ಲಾಭ ಉಂಟಾಗುವುದು. ಗುತ್ತಿಗೆದಾರರಿಗೆ ದೊಡ್ಡ ಯೋಜನೆಗಳು ದೊರೆತು ಶತ್ರುರಹಿತರಾಗಿರುತ್ತೀರ. ಜೊತೆಗೆ ಅಧಿಕಾರ ವರ್ಗದವರ ಸಹಕಾರವೂ ದೊರೆಯುವುದು. ಮೇ 2025ರ ನಂತರ ವ್ಯರ್ಥ ಧನಹಾನಿ, ನಿಮಗಾಗದವರಿಂದ ತೊಂದರೆ, ನ್ಯಾಯಾಲಯ, ಕಚೇರಿಗಳಿಗೆ ವೃಥಾ ಅಲೆದಾಟ. ಯತ್ನ ಕಾರ್ಯಗಳು ಮುಂದೂಡಲ್ಪಡುತ್ತವೆ. ಆರೋಗ್ಯವೂ ಅಷ್ಟಕ್ಕಷ್ಟೆ. ದುಷ್ಟರ ಸಂಗದಿಂದ ದೂರವಿರಿ.

ಶ್ರೀ ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿ.



ತುಲಾ: ವರ್ಷದ ಪೂರ್ವಾರ್ಧದಲ್ಲಿ ಗುರುಬಲದ ಅಭಾವದಿಂದ ಕೆಲಸ ಕಲಾಪಗಳು ಪ್ರಗತಿ ಕಾಣದೆ ಬೇಸರ, ಬಂಧು ಮಿತ್ರರಲ್ಲಿ ವಿರಸ, ಕಲಹಗಳು, ಕುಟುಂಬ ವಿಷಯಗಳಲ್ಲಿ ಒಗ್ಗಟ್ಟು ಕಾಣದೆ ಮನಸ್ಸು ಮುದುಡುತ್ತದೆ. ನಿಮ್ಮ ಕೈಯಲ್ಲಿ ಅಕೃತ್ಯವನ್ನು ಮಾಡಿಸಿ ಬಂಧನ, ದಂಡ ಪಾವತಿಗಳಂತಹ ಕೆಲಸಗಳು ನಡೆದು ಹೋಗಬಹುದು. ಪ್ರಯಾಣ ಸಮಯದಲ್ಲಿ ಹಾನಿಕಾರಕ ಘಟನೆಗಳು ದೇಶ, ಕಾಲ, ಸ್ಥಳ ಹೇಳದೆ ನಡೆದುಬಿಡುತ್ತವೆ. ಉತ್ತರಾರ್ಧದಲ್ಲಿ ಈ ಮೊದಲು ಅನುಭವಿಸಿದ್ದ ಕಷ್ಟ ಕಾರ್ಪಣ್ಯಗಳು ನಿವಾರಣೆಯಾಗಿ ಮನದಲ್ಲೂ, ಮನೆಯಲ್ಲೂ ಸಂತಸದ ಹೊನಲು ಹರಿಯುವುದು. ಧನಧಾನ್ಯ ಲಾಭ, ಸುಖ ಭೋಜನ, ಸ್ತ್ರೀ ಸುಖ ಮನೋತ್ಸಾಹಗಳನ್ನು ಅನುಭವಿಸುವಿರಿ. ನಿಮ್ಮ ಸಮಯ ಪ್ರಜ್ಞೆಯಿಂದ ಶತ್ರುಗಳ ಮೇಲೆ ವಿಜಯವನ್ನು ಸಾಧಿಸುವಿರಿ.

ಯುಗಾದಿಯವರೆವಿಗೆ ಶನಿದೇವನಿಂದ ಹಲವು ಬಗೆಯ ಪರೀಕ್ಷೆಗಳನ್ನು ಎದುರಿಸಬೇಕಾಗುತ್ತದೆ. ಧನ, ಆಸ್ತಿ ಕಳೆದುಕೊಂಡು ಕಲಹಗಳು ಸಂಭವಿಸುತ್ತವೆ. ಪತ್ನಿ–ಪುತ್ರರಿಂದ ವಿರೋಧವು ಎದುರಾಗುವುದು. ತದನಂತರ ದೀಪಾವಳಿಯವರೆಗೆ ಶುಭ ಶನಿದೇವನ ಪರಿಣಾಮ ಧನಧಾನ್ಯ ಲಾಭ. ಆಪ್ತ ಬಂಧು ವರ್ಗದವರ ಆದರ. ನೂತನ ಗೃಹ ನಿರ್ಮಾಣಕ್ಕೆ ನಾಂದಿ. ಶತ್ರುಗಳಿಂದಲೂ ರೋಗ ರುಜಿನಗಳಿಂದಲೂ ವಿಮೋಚನೆ ಉಂಟಾಗಿ ಸುಖವನ್ನು ಅನುಭವಿಸುವಿರಿ.

ಶ್ರೀ ವಿಕ್ರಮಾದಿತ್ಯನ ಕಥೆ ಓದಿ



ವೃಶ್ಚಿಕ: ವರ್ಷದ ಪ್ರಥಮಾರ್ಧದಲ್ಲಿ ದೇವಗುರು ಬೃಹಸ್ಪತಿಯು ಶುಭ ಫಲಗಳನ್ನೇ ನೀಡಲಿದ್ದಾನೆ. ಯತ್ನ ಕಾರ್ಯಾನುಕೂಲ, ಕುಟುಂಬ ಸೌಖ್ಯ, ಹಣಕಾಸಿನ ಸ್ಥಿತಿಯಲ್ಲಿ ಸುಧಾರಣೆ. ವಾಕ್ಚಾತುರ್ಯದಿಂದ ಸಂಪತ್ತು, ಸನ್ಮಾನಗಳ ಗಳಿಕೆ. ಗಣ್ಯ ವ್ಯಕ್ತಿಗಳ ಅನುಗ್ರಹದಿಂದ ಗಹನ ಕಾರ್ಯಗಳ ಸಾಧನೆ ಉಂಟಾಗಲಿದೆ. ಮನೆ, ನಿವೇಶನ ಹೊಂದಲು ಪ್ರಯತ್ನಪಟ್ಟರೆ ಸಫಲರಾಗುವಿರಿ. ವಿದ್ಯಾರ್ಥಿಗಳು ಉನ್ನತ ಶ್ರೇಣಿಯನ್ನು ಗಳಿಸುವರು. ವಿವಾಹಾಕಾಂಕ್ಷಿಗಳಿಗೆ ಉತ್ತಮ ಬಾಳ ಸಂಗಾತಿ ದೊರೆಯುವರು. ನ.7ನಂತರ ದೀಪಾವಳಿಯವರೆಗೆ ಇದರ ತದ್ವಿರುದ್ಧವಾಗಿ ಅಶುಭ ಫಲಗಳು ಒಂದರ ಮೇಲೊಂದರಂತೆ ಎರಗಿ ಜೀವನ ಜರ್ಝರಿತವಾಗುವುದು. ಮಾಡುವ ವ್ಯಾಪಾರ ವ್ಯವಹಾರಗಳಲ್ಲಿ ಬಂಡವಾಳ ನಷ್ಟ. ಆರೋಗ್ಯವೂ ಸಮರ್ಪಕವಾಗಿರದು. ಬಂಧುವರ್ಗದಲ್ಲಿ ತಿರಸ್ಕಾರಕ್ಕೆ ಗುರಿಯಾಗಿ ಅಪಮಾನವನ್ನು ಅನುಭವಿಸುವಿರಿ.

ಇತ್ತ ಯಮಪುತ್ರನಾದ ಶನಿ ಭಗವಾನನ್ನೂ ನಿಮ್ಮ ಅನುಕೂಲಕ್ಕಿಲ್ಲ. ಕೋರ್ಟು, ಕಚೇರಿ ಕೆಲಸಗಳು ನಿರಾಶಾದಾಯಕ. ಬಂಧು ಮಿತ್ರರ ವಿರೋಧ, ಸೇವಕ ವರ್ಗದವರಿಂದ ತೊಂದರೆ ಹಾಗೂ ನೀಚ ಜನರ ಸಹವಾಸದಿಂದ ಕಷ್ಟ ಕೋಟಲೆಗಳನ್ನು ಅನುಭವಿಸುವಿರಿ. ಆರೋಗ್ಯದಲ್ಲಿ ಏರುಪೇರು ಉಂಟಾಗಿ ವೈದ್ಯೋಪಚಾರದ ಖರ್ಚುಗಳು ಎದುರಾಗುವುದು.

ಶ್ರೀ ಶನಿಚಾಲಿಸ ಪಠಿಸಿ. ಎಳ್ಳೆಣ್ಣೆದಾನ.



ಧನುಸ್ಸು: ಈ ಬೆಳಕಿನ ಹಬ್ಬದ ಪೂರ್ವಾರ್ಧ ಭಾಗದಲ್ಲಿ ಗುರು ಬಲದ ಕೊರತೆಯಿಂದ ಹಣ ಅಡಚಣೆಯಿಂದ ಸಾಲ ಮಾಡಬೇಕಾದ ಪರಿಸ್ಥಿತಿ. ಮನಸ್ಸಿಗೆ ಚಿಂತೆ, ವ್ಯಾಕುಲತೆಗಳು ಆವರಿಸುತ್ತವೆ. ಕೋಗಿಲೆಯ ಮಧುರ ಧ್ವನಿಯಾಗಲೀ, ನವಿಲಿನ ನರ್ತನವಾಗಲಿ ಮನಸ್ಸಿಗೆ ಮುದವನ್ನು ನೀಡದು. ವೈರಿಜನರಿಂದ ಉಪಟಳಗಳನ್ನು ಎದುರಿಸಬೇಕಾಗುವುದು. ನಂತರದ ಉತ್ತರಾರ್ಧ ಭಾಗದಲ್ಲಿ ಅನೇಕ ರೀತಿಯ ಶುಭ ಫಲಗಳನ್ನು ಅನುಭವಿಸುವಿರಿ. ಮನೆಯಲ್ಲಿ ಮಂಗಳ ಕಾರ್ಯಗಳು ನಡೆಯುವುದು. ಆಸ್ತಿ–ಪಾಸ್ತಿ ಗಳಿಕೆ, ನೂತನ ವಾಹನ ಹೊಂದುವ ಕನಸು ನನಸಾಗುವುದು. ಪರೀಕ್ಷೆ, ಸಂದರ್ಶನಗಳಲ್ಲಿ ಸಫಲತೆ, ಅಧಿಕಾರಿಗಳಿಗೆ ಬಡ್ತಿ ಯೋಗ ಉಂಟು.

ಶನಿದೇವನ ಕೃಪೆಯಿಂದ ಯುಗಾದಿಯವರೆಗೆ ಸ್ಥಿರಾಸ್ತಿ ಸಂಪಾದನೆ, ಉದ್ಯಮ, ಉದ್ಯೋಗಗಳಲ್ಲಿ ಪ್ರಗತಿ. ಶತ್ರು ದಮನ, ಪಶು ಸಂಪತ್ತು ಲಭಿಸುತ್ತದೆ. ಭೋಗ ವಸ್ತುಗಳನ್ನು ಹೊಂದುವಿರಿ. ಸೇವಕರು ಆಜ್ಞಾನುವರ್ತಿಗಳಾಗಿರುತ್ತಾರೆ. ಕಾಯಿಲೆ ಕಸಾಲೆಗಳಿಂದ ಮುಕ್ತಿ ದೊರೆಯುತ್ತದೆ. ನಂತರದ ಸಮಯ ಬಂಧು ಬಾಂಧವರ ವಿರೋಧ ವಿನಾಕಾರಣ ಕಲಹಗಳು ಉಂಟಾಗಿ ಮನಸ್ಸು ಘಾಸಿಗೊಳ್ಳುವುದು. ಪತ್ನಿ–ಪುತ್ರರಿಂದ ದೂರವಿರಬೇಕಾದ ಪ್ರಸಂಗ ಎದುರಾಗುವುದು.

ಶ್ರೀ ಗುರುಸ್ತೋತ್ರ ಪಠಣ.



ಮಕರ: ಸಂವತ್ಸರ ಪ್ರಥಮಾರ್ಧದಲ್ಲಿ ಆಶಾದಾಯಕ ಪ್ರಸಂಗಗಳು ಘಟಿಸುವುದು. ಯೋಜಿತ ಕೆಲಸ ಕಾರ್ಯಗಳು ನೀವಂದುಕೊಂಡಂತೆ ಸಾಗುತ್ತದೆ. ಬಂಧು ಮಿತ್ರರೂ ಸಹಾಯಕ್ಕೆ ಒದಗುತ್ತಾರೆ. ಸಾಮಾಜಿಕವಾಗಿ ಗೌರವಾದರಗಳಿಗೆ ಪಾತ್ರರಾಗುವಿರಿ. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಪ್ರತಿಫಲವೂ, ಕ್ಯಾಂಪಸ್ ಸೆಲೆಕ್ಷನ್ ಶುಭ ವಾರ್ತೆಯೂ ಬರುವುದು. ಯುಗಾದಿಯ ನಂತರದ ದ್ವಿತೀಯಾರ್ಧ ನಿಮಗೆ ಅಗ್ನಿಪರೀಕ್ಷಾ ಸಮಯವೇ. ಶತ್ರುಗಳು ಪ್ರಬಲರೆನಿಸುವರು. ಮಿತಿ ಮೀರಿದ ಖರ್ಚುಗಳಿಂದ ಹಣದ ಅಡಚಣೆಯಿಂದಾಗಿ ಸಾಲ ತರಬೇಕಾದ ಪರಿಸ್ಥಿತಿ ಬರುವುದು. ಸಾರ್ವಜನಿಕ ರಂಗದಲ್ಲಿ ಸೋಲು. ಆರೋಗ್ಯದಲ್ಲಿ ವ್ಯತ್ಯಯಗಳು ಉಂಟಾಗುವುದು.

ಈ ದೀಪಾವಳಿಯಿಂದ ಪೂರ್ವಾರ್ಧದಲ್ಲಿ ಶನಿದೇವನ ಸಾಡೇಸಾತಿಯ ಅಂತಿಮ ಚರಣ ನಡೆಯಲಿದೆ. ಇದರಿಂದ ಕೌಟುಂಬಿಕ ಕಲಹಗಳು, ಮಾನಸಿಕ ಅಶಾಂತಿ, ಹಣಕಾಸಿನ ಮುಗ್ಗಟ್ಟುಗಳು ಉಂಟಾಗುವುದು. ಮುಖ್ಯ ಕೆಲಸಗಳು ನಿಂತು ನಿಂತು ಸಾಗುವುದು. ವ್ಯಾಪಾರ ವ್ಯಹಾರಗಳಲ್ಲಿ ನಿರೀಕ್ಷಿತ ಫಲವಿರದು. ವೃಥಾಪವಾದಗಳಿಗೆ ಗುರಿಯಾಗುವಿರಿ. ಸ್ತ್ರೀ ನಿಮಿತ್ತ ವ್ಯವಹಾರಗಳಿಂದ ತೊಂದರೆಗೆ ಸಿಲುಕುವಿರಿ.

ಶ್ರೀ ಶನಿ ಅಷ್ಟೋತ್ತರ ಪಠಿಸಿ.



ಕುಂಭ: ಸುರಗುರು ಬೃಹಸ್ಪತಿಯು ಪ್ರಥಮಾರ್ಧ ವರ್ಷದಲ್ಲಿ ಅನೇಕ ರೀತಿಯ ಪರೀಕ್ಷೆಗೆ ಗುರಿಪಡಿಸಲಿದ್ದಾನೆ. ಬಂಧುಗಳೊಡನೆ ವಿವಾದ. ಮಾನಸಿಕ ನೆಮ್ಮದಿಗೆ ಭಂಗ. ವ್ಯಾಪಾರದಲ್ಲಿ ನಿರೀಕ್ಷಿತ ಲಾಭವಿಲ್ಲ. ಪ್ರತಿಸ್ಪರ್ಧಿಗಳಿಂದ ವಿರೋಧ, ನಷ್ಟಗಳು ಉಂಟಾಗುವುದು. ಚತುಷ್ಪಾದ ಪ್ರಾಣಿಗಳಿಂದ ಪೀಡೆ ಉಂಟಾಗುತ್ತದೆ. ಕೌಟುಂಬಿಕ ಕಲಹಗಳು ನಿಮ್ಮ ತಾಳ್ಮೆಯನ್ನು ಪರೀಕ್ಷಿಸಲಿದೆ. ತಾಳ್ಮೆಯನ್ನು ಗಳಿಸಿಕೊಂಡು ನಿರ್ವಿಕಾರ ಬುದ್ಧಿಯಿಂದ ಇರಿ.

ದ್ವಿತೀಯಾರ್ಧದಲ್ಲಿ ಧನಲಾಭ, ಸ್ತ್ರೀ ಸುಖಾದಿಗಳು. ಗೃಹ ನಿರ್ಮಾಣ, ವಿವಾಹಾದಿ ಶುಭ ಕಾರ್ಯಾನುಕೂಲ. ಯತ್ನ ಕಾರ್ಯ ಸಿದ್ಧಿ. ಐಶ್ವರ್ಯ ಪ್ರಾಪ್ತಿ. ನೂತನ ಗೃಹ ಹೊಂದಲು ಗುರುಕೃಪೆ ಇರುತ್ತದೆ. ವಿದೇಶ ಪ್ರಯಾಣ ಯೋಗವೂ ಉಂಟು.

ಶ್ರೀ ಶನಿದೇವ ವರ್ಷ ಪೂರ್ತಿ ನಾನಾ ರೀತಿಯಿಂದ ನಿಮ್ಮನ್ನು ಪರೀಕ್ಷೆಗೆ ಒಳಪಡಿಸಲಿರುವನು. ವ್ಯರ್ಥ ಧನಹಾನಿ, ವಿಷದಿಂದಲೂ ಬೆಂಕಿಯಿಂದಲೂ ಗಂಡಾಂತರವಿರುತ್ತದೆ. ಪರಸ್ಥಳದಲ್ಲಿ ಕಾರ್ಪಣ್ಯ ಜೀವನ, ಆಯಾಸ ಜೀವನ ಸ್ವರೂಪವನ್ನೂ ಸುಖವನ್ನೂ ಕಳೆದುಕೊಂಡು ದುರ್ಬಲರಾಗುವಿರಿ.

ಶ್ರೀ ಶನಿಚಾಲೀಸ ಪಠಿಸಿ.



ಮೀನ: ಈ ಬೆಳಕಿನ ಹಬ್ಬದಿಂದ ಮುಂದಿನ ಬೆಳಕಿನ ಹಬ್ಬದವರೆಗೂ ಗುರುದೇವನು ಅಶುಭನಿದ್ದು ನಿಮ್ಮ ಯಾವ ಯೋಜನೆಗಳೂ ನಿರೀಕ್ಷಿತ ಫಲಿತಾಂಶವನ್ನು ನೀಡದು. ಬಂಧುಜನರ ವಿರೋಧ. ಕೈಗೊಂಡ ಕಾರ್ಯಗಳಲ್ಲಿ ವಿಘ್ನತೆ. ರೋಗದಿಂದ ಶಾರೀರಿಕ ಪೀಡೆ, ಚತುಷ್ಪಾದ ಪ್ರಾಣಿಗಳಿಂದ ಪೀಡೆ ಸಂಭವಿಸುತ್ತದೆ. ಈಗಿರುವ ಸ್ಥಾನಮಾನಕ್ಕೆ ಸಂಚಕಾರ ಹಾಗೂ ಪದಭ್ರಷ್ಟತೆಯನ್ನು ಎದುರಿಸಬೇಕಾಗುತ್ತದೆ. ಜನ್ಮಸ್ಥಳ ಬಿಡಬೇಕಾದ ಅನಿವಾರ್ಯತೆ ಉಂಟಾಗುವುದು. ಮನಸ್ಸಿಗೆ ಬೇಸರವಾಗುವ ಪ್ರಸಂಗಗಳು ನಡೆಯುತ್ತವೆ. ಉದ್ಯೋಗಿಗಳಿಗೆ ಮೇಲಧಿಕಾರಿಗಳ ಕಾಕದೃಷ್ಟಿ.

ಈ ವರ್ಷ ಪೂರ್ತಿ ಸಾಡೇಸಾತಿ ಶನಿಯ ದ್ವಿತೀಯಾಚರಣೆ ನಡೆಯಲಿದ್ದು ಮಾನಸಿಕ, ಶಾರೀರಿಕ ಕಿರಿಕಿರಿ. ಮಕ್ಕಳಿಂದ ಚಿಂತೆಗೀಡಾಗುತ್ತೀರಿ. ಪಾಲುದಾರಿಕೆ ವ್ಯವಹಾರಗಳಿಂದ ಧನ ನಷ್ಟ, ಆದಾಯಕ್ಕಿಂತ ಹೆಚ್ಚಿನ ಹಣ ವ್ಯಯ. ಮಿತ್ರರಿಂದ ಅಪಮಾನವನ್ನು ಅನುಭವಿಸಬೇಕಾದೀತು. ಪರಸ್ಥಳ ವಾಸದಿಂದ ಬವಣೆ ಪಡುತ್ತೀರಿ. ದೀನವಾದ ವದನ. ಅಗ್ನಿ ವಿಷ ವಸ್ತುಗಳಿಂದ ಎಚ್ಚರಿಕೆಯಲ್ಲಿರಿ. ಕಳ್ಳರಿಂದ ಹಾನಿ.

ಶ್ರೀ ನೃಸಿಂಹ ಕರಾವಲಂಬನ ಸ್ತೋತ್ರ ಪಠಿಸಿ.

ಕೋಮುವಾದ, ಜಾತಿವಾದದಿಂದ ಕಾರ್ಮಿಕ ವರ್ಗದಲ್ಲಿ ಕಂದಕ ಸೃಷ್ಟಿಸುವ ಸಂಚು

ಮೈಸೂರಲ್ಲಿ ರಾಜ್ಯ ಮಟ್ಟದ ಕಾರ್ಮಿಕ ಸಮ್ಮೇಳನದಲ್ಲಿ ಎಸ್‌ಯುಸಿಐ ರಾಜ್ಯ ಕಾರ್ಯದರ್ಶಿ ಕೆ.ಉಮಾ ಆಕ್ರೋಶ

ಮೈಸೂರು, ಅ.27(ಎಂಟಿವೈ)– ಕಾರ್ಮಿಕರು ಒಗ್ಗಟ್ಟಾಗುವುದನ್ನು ಸಹಿಸದ ಬಂಡವಾಳಶಾಹಿಗಳು ಕೋಮುವಾದ–ಜಾತಿವಾದ ಪ್ರತಿಪಾದಿಸುತ್ತಾ ಕಾರ್ಮಿಕ ವರ್ಗದಲ್ಲಿ ಕಂದಕವನ್ನುಂಟು ಮಾಡುವ ಸಂಚು ನಡೆಸುತ್ತಿದ್ದಾರೆ ಎಂದು ಎಸ್‌ಯುಸಿಐ ಕಮ್ಯೂನಿಸ್ಟ್ ಪಕ್ಷದ ರಾಜ್ಯ ಕಾರ್ಯದರ್ಶಿ ಕೆ.ಉಮಾ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಎಐಯುಟಿಯುಸಿ ಕಾರ್ಯಕಾರಿ ಮಂಡಳಿ ಸದಸ್ಯ ಗಂಗಾಧರ್ ಬಡಿಗೇರ್ ಮಾತನಾಡಿದರು.

ಮೈಸೂರಿನ ಮಹಾರಾಜ ಪದವಿ ಕಾಲೇಜಿನ ಶತಮಾನೋತ್ಸವ ಭವನದಲ್ಲಿ ಆಲ್ ಇಂಡಿಯಾ ಯುನೈಟೆಡ್ ಟ್ರೇಡ್ ಯೂನಿಯನ್ ಸೆಂಟರ್(ಎಐಯುಟಿಯುಸಿ) ವತಿಯಿಂದ ಆಯೋಜಿಸಿರುವ 4ನೇ ರಾಜ್ಯಮಟ್ಟದ ಕಾರ್ಮಿಕ ಸಮ್ಮೇಳನದ ಪ್ರತಿನಿಧಿ ಅಧಿವೇಶನವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕಾರ್ಮಿಕರ ಕಠಿಣ ಪರಿಶ್ರಮದ ಫಲವಾಗಿ ಕಾರ್ಖಾನೆಯ ಮಾಲೀಕರ ಸಂಪತ್ತು ಹೆಚ್ಚಳವಾಗುತ್ತಿದೆ. ಆದರೆ ಕಾರ್ಮಿಕರಿಗೆ ನ್ಯಾಯಯುತವಾಗಿ ಕೊಡಬೇಕಾಗಿ ಪಾಲನ್ನು ನೀಡದೆ ವಂಚಿಸಲಾಗುತ್ತಿದೆ ಇದನ್ನು ಮೊಟ್ಟ ಮೊದಲ ಬಾರಿಗೆ ವೈಜ್ಞಾನಿಕವಾಗಿ ನಿರೂಪಿಸಿ, ವರ್ಗ ಹೋರಾಟಕ್ಕೆ ಮಹಾನ್ ತತ್ವಜ್ಞಾನಿ ಕಾರ್ಲ್‌ಮಾರ್ಕ್ಸ್ ಕರೆ ನೀಡಿದರು. ವಿಶ್ವದ ಕಾರ್ಮಿಕರೇ ಒಂದಾಗಿ, ಹೋರಾಟಕ್ಕಾಗಿ ಮುಂದಾಗಿ ಎಂಬ ಘೋಷಣೆಯೊಂದಿಗೆ ನೀಡಿದ ಕರೆಗೆ ಬಂಡವಾಳಶಾಹಿ ಮಾಲೀಕರು ಹಾಗೂ ಅವರ ಪ್ರತಿನಿಧಿಗಳು ಬೆಚ್ಚಿಬಿದ್ದರು. ಇದರಿಂದ ಕಾರ್ಮಿಕರು, ಶೋಷಿತರು ಒಂದಾಗಿ ಹೋರಾಟ ನಡೆಸುವ ಆತಂಕದಿಂದ ಅಶ್ಲೀಲತೆ, ಕೋಮುವಾದ–ಜಾತೀವಾದ, ದುಷ್ಚಟಗಳಿಗೆ ಕಾರ್ಮಿಕ ವರ್ಗ ಬಲಿ ಯಾಗುವಂತೆ ಸಂಚು ನಡೆಸಿದರು. ಶ್ರಮಿಕ ವರ್ಗ ಇಂತಹ ಹೀನ ತಂತ್ರಗಳನ್ನು ಹಿಮ್ಮೆಟ್ಟಿ ನಿಲ್ಲಬೇಕು. ಎಐಯುಟಿಯುಸಿಯ ನೇತೃತ್ವದಲ್ಲಿ ವೈಚಾರಿಕ ತಿಳುವಳಿಕೆ ಪಡೆದುಕೊಂಡು ತಮ್ಮ ಹಕ್ಕಿನ ಪಾಲನ್ನು ಪಡೆಯಲು ಬಲಿಷ್ಠವಾದ ಹೋರಾಟ ಕಟ್ಟಲು ಮುಂದಾಗಬೇಕು ಎಂದು ಸಲಹೆ ನೀಡಿದರು.

ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಎಐಯುಟಿಯುಸಿಯ ಅಖಿಲ ಭಾರತ ಅಧ್ಯಕ್ಷ ಕಾಮ್ರೇಡ್ ಕೆ.ರಾಧಕೃಷ್ಣ ಮಾತನಾಡಿ, ಸಮಾಜದಲ್ಲಿ ಬಿಕ್ಕಟ್ಟು ಸೃಷ್ಟಿಯಾಗುತ್ತಲೇ ಇವೆ. ಶ್ರಮಿಕರ ಹಿತವನ್ನು ಕಾಯಲು ವಿಫಲವಾಗಿರುವ ಸರ್ಕಾರಗಳು ಬಂಡವಾಳಶಾಹಿಗಳಿಗೆ ಅಗಾಧ ಪ್ರಮಾಣದಲ್ಲಿ ರಿಯಾಯಿತಿ ನೀಡುತ್ತಿವೆ. ಬಂಡವಾಳಶಾಹಿ ವ್ಯವಸ್ಥೆ ಲಾಭಕ್ಕಾಗಿ ಯುದ್ಧಗಳನ್ನು ಪ್ರಚೋದಿಸುತ್ತದೆ. ಚುನಾವಣೆಗಳಲ್ಲಿ ಪಕ್ಷಗಳನ್ನು ಬದಲಾಯಿಸಿ, ಮತ್ತೊಂದು ಪಕ್ಷದಿಂದ ಚುನಾಯಿತರಾಗುವ ವ್ಯವಸ್ಥೆ ಇದೆ. ಕಾರ್ಮಿಕ ವರ್ಗದ ನೇತೃತ್ವದಲ್ಲಿ ಸಮಾಜವಾದಿ ಕ್ರಾಂತಿಯೊಂದೇ ಕಾರ್ಮಿಕರ ಸಮಸ್ಯೆ ಬಗೆಹರಿಸಲು ಇರುವ ಮಾರ್ಗ ಎಂದರು.

ಎಐಯುಟಿಯುಸಿ ಅಖಿಲ ಭಾರತ ಸಮಿತಿಯ ಪ್ರಧಾನ ಕಾರ್ಯದರ್ಶಿ ಕಾಮ್ರೇಡ್ ಶಂಕರ್‌ದಾಸ್ ಗುಪ್ತ ಮಾತನಾಡಿ, ಎಐಯುಟಿಯುಸಿಯ ನೇತೃತ್ವದಲ್ಲಿ ಹಲವು ಹೋರಾಟಗಳಲ್ಲಿ ಜಯಗಳಿಸಿದ್ದೇವೆ. ಅನೇಕ ಬೇಡಿಕೆಗಳನ್ನು ಈಡೇರಿಸಿಕೊಂಡಿದ್ದೇವೆ. ಆದರೆ ಕಾರ್ಮಿಕರ ಸಮಸ್ಯೆಗಳು ಇನ್ನೂ ಬಗೆಹರಿದಿಲ್ಲ. ಶೋಷಕರ ಶೋಷಣೆ ದಬ್ಬಾಳಿಕೆ ಜಾಸ್ತಿಯಾಗುತ್ತಿರುವಂತೆಯೇ ಜನ ಜೀವನದ ಸಮಸ್ಯೆಗಳು ಹೆಚ್ಚಾಗುತ್ತಿವೆ. ಇದಕ್ಕೆ ಈ ಬಂಡವಾಳಶಾಹಿ ವ್ಯವಸ್ಥೆ ಕಾರಣ. ನಾವು ನಮ್ಮ ಹೋರಾಟಗಳನ್ನು ಆರ್ಥಿಕ ಬೇಡಿಕೆಗಳಿಗೆ ಮಾತ್ರ ಸೀಮಿತಗೊಳಿಸದೇ ಇಡೀ ವ್ಯವಸ್ಥೆಯನ್ನು ಬದಲಾಯಿಸುವ ಗುರಿಯನ್ನಿಟ್ಟುಕೊಂಡು ಹೋರಾಟವನ್ನು ಕಟ್ಟಬೇಕು ಎಂದರು.

ನೂತನ ಪದಾಧಿಕಾರಿಗಳು: ಎಐಯುಟಿಯುಸಿಯ ನೂತನ ರಾಜ್ಯ ಸಮಿತಿಗೆ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ನೂತನ ಅಧ್ಯಕ್ಷರಾಗಿ ಕೆ. ಸೋಮಶೇಖರ್ ಬಳ್ಳಾರಿ, ಉಪಾಧ್ಯಕ್ಷರಾಗಿ ಕೆ.ವಿ.ಭಟ್, ದೇವದಾಸ್, ಡಿ.ನಾಗಲಕ್ಷ್ಮಿ, ಎಂ.ಉಮಾದೇವಿ, ವಿರೇಶ್ ಎನ್.ಎಸ್, ಚಂದ್ರಶೇಖರ ಮೇಟಿ, ರಮಾ ಟಿ.ಸಿ, ಷಣ್ಮುಗಂ ಪಿ.ಎಸ್, ತಾಯಿದಾಸ್, ಮಲ್ಲಿಕಾರ್ಜುನ್ ಹೆಚ್.ಟಿ, ಮಂಜುನಾಥ್ ಕೈದಾಳೆ ಅವರನ್ನು ನಿಯೋಜಿಸಲಾಯಿತು. ರಾಜ್ಯ ಕಾರ್ಯದರ್ಶಿಯಾಗಿ ಕೆ.ಸೋಮಶೇಖರ್ ಯಾದಗಿರಿ, ಸೆಕ್ರಟರಿಯೇಟ್ ಸದಸ್ಯರಾಗಿ ಡಿ.ಉಮಾದೇವಿ, ವಿ.ಜಿ.ದೇಸಾಯಿ, ಎಸ್.ಎಂ.ಶರ್ಮಾ, ಜಿ.ಹನುಮೇಶ್, ಗಂಗಾಧರ್ ಬಡಿಗೇರ್, ಡಾ.ಪ್ರಮೋದ್, ಸಂಧ್ಯಾ ಪಿ.ಎಸ್, ಮಂಜುನಾಥ್ ಕುಕ್ಕವಾಡ, ಮಹೇಶ್ ನಾಡಗೌಡ ಮತ್ತು 33 ಕಾರ್ಯಕಾರಿ ಸದಸ್ಯರು ಹಾಗೂ ಕೌನ್ಸಿಲ್ ಸದಸ್ಯರನ್ನು ಒಳಗೊಂಡ 171 ಮಂದಿ ಸಮಿತಿಯನ್ನು ಚುನಾಯಿಸಲಾಯಿತು.

ನಿರ್ಣಯಗಳು

ಗುತ್ತಿಗೆ ಪದ್ಧತಿಯನ್ನು ರದ್ದುಗೊಳಿಸಬೇಕು. ಹಾಲಿ ಇರುವ ಕಾರ್ಮಿಕರನ್ನು ಕಾಯಂಗೊಳಿಸಬೇಕು. ಸ್ಕೀಂ ನೌಕರರನ್ನು ಸರ್ಕಾರಿ ನೌಕರರೆಂದು ಪರಿಗಣಿಸಬೇಕು. ದುಡಿಯುವ ಅವಧಿಯನ್ನು ಹೆಚ್ಚಳ ಮಾಡುವ ಸರ್ಕಾರದ ಪ್ರಸ್ತಾಪ ಹಾಗೂ ರಾತ್ರಿ ಪಾಳಿಯಲ್ಲಿ ಮಹಿಳೆಯರನ್ನು ದುಡಿಸಿಕೊಳ್ಳಲು ಅನುಮೋದಿಸಿರುವ ನಿರ್ಧಾರವನ್ನು ಖಂಡಿಸಲಾಯಿತು. ಇಎಸ್‌ಐ ಅರ್ಹತೆಗೆ ಇರುವ ವೇತನದ ಮಿತಿ ಹೆಚ್ಚಳ ಮಾಡಬೇಕು. ಪಿಎಫ್ ಅರ್ಹತೆಗೆ ಇರುವ ವೇತನದ ಮಿತಿಯನ್ನು ಹೆಚ್ಚಳ ಮಾಡುವುದು. ಕನಿಷ್ಠ ಪಿಂಚಣಿಯನ್ನು 10 ಸಾವಿರ ರೂ. ನಿಗದಿ ಮಾಡಬೇಕು. ಗಿಗ್ ಕಾರ್ಮಿಕರನ್ನು ಕಾರ್ಮಿಕರೆಂದು ಪರಿಗಣಿಸಲು ಮತ್ತು ಸೇವಾ ಭದ್ರತೆಯನ್ನು ಒದಗಿಸುವಂತೆ ಸಮ್ಮೇಳನದಲ್ಲಿ ಒಕ್ಕೊರಲಿನ ನಿರ್ಣಯ ಅಂಗೀಕರಿಸಲಾಯಿತು.

ರಾಜ್ಯ ಮಟ್ಟದ ಹಾಕಿ ಟೂರ್ನಿಗೆ ಚಾಲನೆ

ಪೊನ್ನಂಪೇಟೆ ಟರ್ಫ್ ಮೈದಾನದಲ್ಲಿ ಶಾಲಾ ಬಾಲಕ-ಬಾಲಕಿಯರ ಪಂದ್ಯಾವಳಿ

ಗೋಣಿಕೊಪ್ಪ, ಅ.27-ಪೊನ್ನಂಪೇಟೆ ಟರ್ಫ್ ಮೈದಾನದಲ್ಲಿ ಕೊಡಗು ಜಿಲ್ಲಾಡಳಿತ, ಶಾಲಾ ಶಿಕ್ಷಣ ಇಲಾಖೆ, ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿ, ಪ್ರಗತಿ ಶಾಲೆ ಸಹಯೋಗದಲ್ಲಿ ಭಾನುವಾರ ರಾಜ್ಯ ಮಟ್ಟದ ಪ್ರಾಥಮಿಕ ಹಾಗೂ ಪ್ರೌಢಶಾಲಾ ಬಾಲಕ-ಬಾಲಕಿಯರ ಹಾಕಿ ಟೂರ್ನಿಗೆ ಚಾಲನೆ ನೀಡಲಾಯಿತು.



ಪೊನ್ನಂಪೇಟೆ ಟರ್ಫ್ ಮೈದಾನದಲ್ಲಿ ಶಾಲಾ ಬಾಲಕ-ಬಾಲಕಿಯರ ಹಾಕಿ ಟೂರ್ನಿಗೆ ಶಾಸಕ ಎ.ಎಸ್.ಪೊನ್ನಣ್ಣ ಹಾಗೂ ಸಂಸದ ಯದುವೀರ್ ಚಾಲನೆ ನೀಡಿದರು.

ಶಾಸಕ ಅಜ್ಜಿಕುಟ್ಟೀರ ಎಸ್.ಪೊನ್ನಣ್ಣ ಧ್ವಜಾರೋಹಣ ನೆರವೇರಿಸುವ ಮೂಲಕ ಪಂದ್ಯಾವಳಿಗೆ ಚಾಲನೆ ನೀಡಿದರು. ನಂತರ ಕ್ರೀಡಾಪಟುಗಳ ಪಥಸಂಚಲನ, ಪರಿವೀಕ್ಷಣೆ, ಗೌರವ ವಂದನೆ ಸ್ವೀಕರಿಸಲಾಯಿತು. ಕ್ರೀಡಾಪಟುಗಳಿಗೆ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

ಫಲಿತಾಂಶ: ಪ್ರೌಢಶಾಲಾ ಬಾಲಕರ ವಿಭಾಗದಲ್ಲಿ ಕಲಬುರ್ಗಿ ತಂಡ ಬೆಂಗಳೂರು ವಿರುದ್ಧ 5-4 ಗೋಲು ಹಾಗೂ ಮೈಸೂರು ತಂಡ ಬೆಳಗಾವಿ ವಿರುದ್ಧ 9-0 ಗೋಲುಗಳ ಗೆಲುವು ಸಾಧಿಸಿದವು. ಪ್ರಾಥಮಿಕ ಶಾಲಾ ವಿಭಾಗದಲ್ಲಿ ಕಲಬುರ್ಗಿ ತಂಡ ಬೆಳಗಾವಿ ವಿರುದ್ಧ 6-1 ಮತ್ತು ಮೈಸೂರು ತಂಡ ಬೆಂಗಳೂರು ವಿರುದ್ಧ 11-0 ಗೋಲುಗಳ ಜಯ ಪಡೆದವು.

ಪ್ರೌಢಶಾಲಾ ಬಾಲಕಿಯರ ವಿಭಾಗದಲ್ಲಿ ಕೊಡಗಿನ ತಂಡ ಕಲಬುರ್ಗಿ ತಂಡದ ವಿರುದ್ಧ 6-1 ಮತ್ತು ಮೈಸೂರು ತಂಡ ಬೆಂಗಳೂರು ತಂಡದ ವಿರುದ್ಧ 13-0 ಗೋಲುಗಳ ಭಾರಿ ಅಂತರದಿಂದ ಗೆಲುವು ಸಾಧಿಸಿದವು. ಪ್ರಾಥಮಿಕ ಶಾಲಾ ವಿಭಾಗದಲ್ಲಿ ಬೆಳಗಾವಿ ತಂಡ ಕಲಬುರ್ಗಿ ತಂಡದ ವಿರುದ್ಧ 17-0 ಗೋಲುಗಳ ಭರ್ಜರಿ ಗೆಲುವು ಪಡೆದುಕೊಂಡಿತು.

ಸಂಸದರ ನಿಧಿ ಮೂಲಕ ಪ್ರೋತ್ಸಾಹ: ಪಂದ್ಯಾವಳಿಗೆ ಚಾಲನೆ ವೇಳೆ ಮಾತನಾಡಿದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ರಾಷ್ಟ್ರ ಮಟ್ಟದಲ್ಲಿ ಕೊಡಗು ಕ್ರೀಡೆಯಲ್ಲಿ ಹೆಸರು ಪಡೆದಿದೆ. ಹಾಕಿ ಕ್ರೀಡೆಗೆ ನೀಡಿರುವ ಕೊಡುಗೆ ಗಮನಾರ್ಹವಾಗಿದ್ದು, ಕ್ರೀಡೆಗೆ ಮತ್ತಷ್ಟು ಪ್ರೋತ್ಸಾಹ ಸಿಗಬೇಕಿದೆ. ಸ್ಥಳೀಯವಾಗಿ ಹೆಚ್ಚು ಮೂಲಸೌಕರ್ಯ ಸಿಗಬೇಕು. ಸಂಸದರ ನಿಧಿ ಮೂಲಕ ಕೊಡಗಿನ ಕ್ರೀಡಾ ಬೆಳವಣಿಗೆಗೆ ಪ್ರೋತ್ಸಾಹ ನೀಡಲಾಗುವುದು ಎಂದು ತಿಳಿಸಿದರು.

ಶಾಸಕ ಅಜ್ಜಿಕುಟ್ಟೀರ ಎಸ್.ಪೊನ್ನಣ್ಣ ಮಾತನಾಡಿ, ಕ್ರೀಡೆಯಲ್ಲಿ ಕೊಡಗು ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಳ್ಳಲು ಮತ್ತಷ್ಟು ತರಬೇತಿ ಅವಶ್ಯವಿದೆ. ಈ ನಿಟ್ಟಿನಲ್ಲಿ ತರಬೇತಿಗೆ ಉತ್ಸಾಹ ತುಂಬಿಸುವ ಕಾರ್ಯ ನಡೆಯಬೇಕಿದೆ. ಮೂಲ ಕೊರತೆ ನೀಗಿಸಲು ಪ್ರಾಮಾಣಿಕ ಪ್ರಯತ್ನ ನಡೆಸಲಾಗುತ್ತಿದೆ. ಒಡಿಸ್ಸಾದಲ್ಲಿ ಸುಮಾರು 25 ಟರ್ಫ್ ಮೈದಾನ ಇರುವುದರಿಂದ ಹಾಕಿ ಕ್ರೀಡೆಗೆ ಹೆಚ್ಚು ಪ್ರೋತ್ಸಾಹ ಸಿಗುತ್ತಿದೆ. ಕೊಡಗಿಗೆ ಮತ್ತಷ್ಟು ಮೈದಾನದ ಅವಶ್ಯಕತೆ ಇದ್ದು, ಪೊನ್ನಂಪೇಟೆ ಬಾಲಕಿಯರ ಕ್ರೀಡಾ ವಸತಿ ನಿಲಯಕ್ಕೆ 5 ಕೋಟಿ ರೂ. ಅನುದಾನ ನೀಡಲಾಗಿದೆ. ನಿರ್ಮಾಣ ಕಾರ್ಯ ಶೀಘ್ರದಲ್ಲೇ ಆರಂಭಗೊಳ್ಳಲಿದೆ ಎಂದರು.

ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಸಿ.ರಂಗಧಾಮಪ್ಪ, ಪೊನ್ನಂಪೇಟೆ ಪಪಂ ಅಧ್ಯಕ್ಷ ಅಣ್ಣೀರ ಹರೀಶ್, ಗೋಣಿಕೊಪ್ಪ ಗ್ರಾಪಂ ಅಧ್ಯಕ್ಷ ಕುಲ್ಲಚಂಡ ಪ್ರಮೋದ್ ಗಣಪತಿ, ಪೊನ್ನಂಪೇಟೆ ಸಿಐಸಿ ಸರ್ಕಾರಿ ಪದವಿಪೂರ್ವ ಕಾಲೇಜು ಆಡಳಿತ ಮಂಡಳಿ ಉಪಾಧ್ಯಕ್ಷ ಮೂಕಳೇರ ಕುಶಾಲಪ್ಪ, ವಿರಾಜಪೇಟೆ ಶಿಕ್ಷಕರ ಕಲ್ಯಾಣ ಸಮಿತಿ ಅಧ್ಯಕ್ಷ ಮಾದಂಡ ತಿಮ್ಮಯ್ಯ, ಅನುದಾನಿತ ಶಾಲಾ-ಕಾಲೇಜು ನೌಕರರ ಸಂಘದ ಜಿಲಾಧ್ಯಕ್ಷ ಪ್ರಭುಕುಮಾರ್, ಹಿರಿಯರಾದ ಎರ್ಮು ಹಾಜಿ ಇದ್ದರು.

ಕಾರ್ಯಕರ್ತನ ಕ್ಷೇಮ ವಿಚಾರಿಸಿದ ಸಂಸದ...



ಅಂಗವೈಕಲ್ಯಕ್ಕೆ ಒಳಗಾಗಿರುವ ಗೋಣಿಕೊಪ್ಪ ಸಮೀಪದ ಕೆ.ಬಾಡಗ ಗ್ರಾಮದ ಬಿಜೆಪಿ ಕಾರ್ಯಕರ್ತ ಅಳಮೇಂಗಡ ನರೇಶ್ ಅವರ ಮನೆಗೆ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಭೇಟಿ ನೀಡಿ, ಕ್ಷೇಮ ವಿಚಾರಿಸಿದರು.

ಹಿರಿಯ ಕೊಡವರಿಗೆ ಮೀದಿ ಸಮರ್ಪಣೆ



ಮಡಿಕೇರಿ ಕೋಟೆ ಮತ್ತು ನಾಲ್ನಾಡ್ ಅರಮನೆ ಆವರಣದಲ್ಲಿ ಸಿಎನ್‌ಸಿಯಿಂದ ಹಿರಿಯ ಕೊಡವರಿಗೆ ಮೀದಿ ಸಮರ್ಪಿಸಲಾಯಿತು.

ಮಡಿಕೇರಿ, ಅ.27-ಕಾವೇರಿ ತುಲಾ ಸಂಕ್ರಮಣದ 'ಪಥಲೋಧಿ' ದಿನದ ಅಂಗವಾಗಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ವತಿಯಿಂದ ಮಡಿಕೇರಿ ಕೋಟೆ ಮತ್ತು ನಾಲ್ನಾಡ್ ಅರಮನೆ ಆವರಣದಲ್ಲಿ ಕುತಂತ್ರಕ್ಕೆ ಸಿಲುಕಿ ಜೀವ ಕಳೆದುಕೊಂಡ ಹಿರಿಯ ಕೊಡವರಿಗೆ ಮೀದಿ ಸಮರ್ಪಿಸಲಾಯಿತು.

ಕಾರ್ಯಕ್ರಮದ ನೇತೃತ್ವ ವಹಿಸಿದ್ದ ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಮೌನ ಪ್ರಾರ್ಥನೆ ಮೂಲಕ ಹಿರಿಯರನ್ನು ಸ್ಮರಿಸಿದರು. ಅರಮನೆ ಪಿತೂರಿಯಲ್ಲಿ ಕೊಡವ ಬುಡಕಟ್ಟು ಜನಾಂಗದ ಹತ್ಯೆಗಳು ಎರಡು ಶತಮಾನಗಳಿಗೂ ಹೆಚ್ಚು ಕಾಲ ನಿರಂತರವಾಗಿ ನಡೆದಿದೆ. ಷಡ್ಯಂತ್ರದಿಂದ ಪ್ರಾಣ ಕಳೆದುಕೊಂಡ ಅಮಾಯಕ ಹಿರಿಯರನ್ನು ಸ್ಮರಿಸುವುದು ನಮ್ಮ ಆದ್ಯ ಕರ್ತವ್ಯವಾಗಿದೆ ಎಂದರು.

ಮಡಿಕೇರಿ ಕೋಟೆ ಮತ್ತು ನಾಲ್ನಾಡ್ ಅರಮನೆ ಆವರಣದಲ್ಲಿ ಅರಸರ ಕಾಲದ 201 ವರ್ಷ ಕರಾಳ ವಿಶ್ವಾಸಘಾತಕ ಆಡಳಿತಗಾರರಿಂದ ಕೊಡವರ ದುರಂತ ಅಂತ್ಯವಾಗಿದೆ. 40 ಸಾವಿರಕ್ಕೂ ಹೆಚ್ಚು ಅಮಾಯಕ ಕೊಡವ ಬುಡಕಟ್ಟು ಜನರನ್ನು ಕೋಟೆ ಆವರಣದಲ್ಲೇ ರಾಜರು ಕೊಂದು ಹಾಕಿದರು. ದೇವಟ್ ಪರಂಬುವಿನಲ್ಲಿ ನಿರಾಯುಧ ಕೊಡವ ಬುಡಕಟ್ಟು ಯೋಧರು ಟಿಪ್ಪುವಿನ ಕಾಲದಲ್ಲಿ ಕೊಲ್ಲಲ್ಪಟ್ಟರು. ಇದು ಕೊಡವ ಇತಿಹಾಸದ ಅತ್ಯಂತ ಹೇಯ ಅಧ್ಯಾಯವಾಗಿದೆ ಮತ್ತು ಕ್ಷೀಣಿಸುತ್ತಿರುವ ಕೊಡವ ಜನಸಂಖ್ಯೆಗೆ ಕಾರಣವಾಗಿದೆ ಎಂದರು.

ಪುಲಿಯಂಡ ಮನೆತನ ಮತ್ತು ಕೇಟೋಳಿರ ವಂಶಸ್ಥರು ನಾಲ್ನಾಡ್ ಅರಮನೆಯನ್ನು ನಿರ್ಮಿಸಲು ರಾಜಮನೆತನಕ್ಕೆ ತಮ್ಮ ಅಮೂಲ್ಯವಾದ ಪೂರ್ವಜರ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಅವಕಾಶ ಮಾಡಿಕೊಟ್ಟರು. ಆದರೆ, ಕೃತಜ್ಞತೆ ಇಲ್ಲದ ರಾಜಮನೆತನದವರು ರಾಜನ ಭೂ ಸ್ವಾಧೀನವನ್ನು ವಿರೋಧಿಸಿದ ಪುಲಿಯಂಡ ಕರಿಚನನ್ನು ಎಳೆದೊಯ್ದು ಆನೆ ಕಾಲಿಗೆ ಕಟ್ಟಿ ಚಿತ್ರಹಿಂಸೆ ನೀಡಿ ಗಲ್ಲಿಗೇರಿಸಿದರು. ಕೊಡವ ಬುಡಕಟ್ಟಿನ ವಿರುದ್ಧದ ಘೋರ ಅಪರಾಧಕ್ಕಾಗಿ ಪಶ್ಚಾತ್ತಾಪ ಮತ್ತು ಕೊಡವರ ಜನಸಂಖ್ಯೆಯ ನಷ್ಟಕ್ಕೆ ಪರಿಹಾರವಾಗಿ ಕೊಡವ ಬುಡಕಟ್ಟು ಅನ್ನು ನಮ್ಮ ಸಂವಿಧಾನದ ವೇಳಾಪಟ್ಟಿಯಲ್ಲಿ ಸೇರಿಸಬೇಕು. ಕೊಡವ ಬುಡಕಟ್ಟು ಜನಾಂಗಕ್ಕೆ ಭೌಗೋಳಿಕ-ರಾಜಕೀಯ ಸ್ವಾಯತ್ತತೆ ನೀಡಬೇಕು ಎಂದು ನಾಚಪ್ಪ ಒತ್ತಾಯಿಸಿದರು.

ಇದೇ ಸಂದರ್ಭ ಕಲಿಯಂಡ ಪ್ರಕಾಶ್, ಅರೆಯಡ ಗಿರೀಶ್, ಚಂಬಂಡ ಜನತ್, ನಂದೇಟಿರ ರವಿ, ಮಣವಟ್ಟಿರ ಚಿಣ್ಣಪ್ಪ, ಅಪ್ಪಾರಂಡ ಶ್ರೀನಿವಾಸ್, ಅಪ್ಪಾರಂಡ ಪ್ರಸಾದ್, ಅಪ್ಪಾರಂಡ ಪ್ರಕಾಶ್, ಅಪ್ಪಾರಂಡ ವಿವೇಕ್, ಪುದಿಯೊಕ್ಕಡ ಕಾಶಿ, ರಮೇಶ್ ಇದ್ದರು.

ಮಡಿಕೇರಿಯಲ್ಲಿ ಆರ್‌ಎಸ್‌ಎಸ್ ಪಥಸಂಚಲನ



ಮಡಿಕೇರಿಯಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕಾರ್ಯಕರ್ತರು ಪಥಸಂಚಲನ ನಡೆಸಿದರು.

ಮಡಿಕೇರಿ, ಅ.27-ರಾಷ್ಟ್ರೀಯ ಸ್ವಯಂ ಸೇವಕ ಸಂಘದ ವತಿಯಿಂದ ನಗರದಲ್ಲಿ ಪಥಸಂಚಲನ ನಡೆಸಲಾಯಿತು.

ಜಿಲ್ಲಾ ಕ್ರೀಡಾಂಗಣದಲ್ಲಿ ಧ್ವಜಾರೋಹಣ ನೆರವೇರಿಸಿದ ಬಳಿಕ ನೂರಾರು ಗಣವೇಷಧಾರಿಗಳು ನಗರದ ಮುಖ್ಯ ರಸ್ತೆಗಳಲ್ಲಿ ಶಿಸ್ತು ಬದ್ಧವಾಗಿ ಹೆಜ್ಜೆ ಹಾಕಿದರು. ಪಥಸಂಚಲನದ ಉದ್ದಕ್ಕೂ ಘೋಷವಾದನ ಕರಾರುವಕ್ಕಾಗಿ ಮೂಡಿ ಬಂತು. ಪುಟಾಣಿಗಳ ಸಹಿತ ಹಿರಿಯ ಸ್ವಯಂ ಸೇವಕರು ಕೂಡ 4 ಕಿ.ಮೀ.ವರೆಗೆ ಪಥಸಂಚಲನದಲ್ಲಿ ಉತ್ಸಾಹದಿಂದ ಪಾಲ್ಗೊಂಡಿದ್ದರು. ಪಥಸಂಚಲನದ ಮಾರ್ಗದ ಉದ್ದಕ್ಕೂ ಭಾರತಾಂಬೆ ಭಾವಚಿತ್ರಕ್ಕೆ ಸಾರ್ವಜನಿಕರು ಹೂಮಳೆಗೈದು ಗೌರವ ಸಮರ್ಪಿಸಿದರು.

ನಾಳೆ ರಾಷ್ಟ್ರೀಯ ಆಯುರ್ವೇದ ದಿನಾಚರಣೆ

ಮಡಿಕೇರಿ, ಅ.27-ಕೊಡಗು ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಆಯುಷ್ ಇಲಾಖೆ ಸಹಯೋಗದಲ್ಲಿ ಮಹಿಳಾ ಸಬಲೀಕರಣಕ್ಕಾಗಿ ಆಯುರ್ವೇದ ಎಂಬ ಘೋಷವಾಕ್ಯದಡಿ 9ನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆ ಅ.29ರಂದು ಬೆಳಗ್ಗೆ 9 ಗಂಟೆಗೆ ಮೇಕೇರಿಯ ಸತ್ಯಸಾಯಿ ಮಂದಿರದಲ್ಲಿ ನಡೆಯಲಿದೆ.

ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜು, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕರಾದ ಡಾ.ಮಂತರ್‌ಗೌಡ, ಎ.ಎಸ್.ಪೊನ್ನಣ್ಣ, ವಿಧಾನಪರಿಷತ್ ಸದಸ್ಯರಾದ ಎಂ.ಪಿ.ಸುಜಾ ಕುಶಾಲಪ್ಪ, ಭೋಜೇಗೌಡ, ಡಾ.ಧನಂಜಯ ಸರ್ಜಿ, ಕೊಡಗು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ. ಎನ್.ವಿ.ಪ್ರಸಾದ್, ಆಯುಷ್ ಇಲಾಖೆ ಆಯುಕ್ತ ಶ್ರೀನಿವಾಸಲು, ಡಿಸಿ ವೆಂಕಟ ರಾಜಾ, ಜಿಲ್ಲಾ ಎಸ್‌ಪಿ ಕೆ.ರಾಮರಾಜನ್, ಇತರರು ಪಾಲ್ಗೊಳ್ಳಲಿದ್ದಾರೆ.

ವಿರಾಜಪೇಟೆಯಲ್ಲಿ ಲಕ್ಷ್ಮೀ ಪೂಜೆ



ವಿರಾಜಪೇಟೆ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನಾ ಕಚೇರಿಯಲ್ಲಿ ಶ್ರೀ ಲಕ್ಷ್ಮೀ ಪೂಜೆ ನಡೆಸಲಾಯಿತು.

ವಿರಾಜಪೇಟೆ: ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ದೀಪಾವಳಿ ಹಬ್ಬದ ಪ್ರಯುಕ್ತ ತಾಲೂಕು ಯೋಜನಾ ಕಚೇರಿ ಸಭಾಂಗಣದಲ್ಲಿ ಶ್ರೀ ಲಕ್ಷ್ಮೀ ಪೂಜೆ, ಗಣಹೋಮ ಮತ್ತು ಆಯುಧಗಳಿಗೆ ಪೂಜೆ ಸಲ್ಲಿಸಲಾಯಿತು.

ಲಕ್ಷ್ಮಿ ಪೂಜೆ ವೇಳೆ ಪೊನ್ನಂಪೇಟೆ ನಿಸರ್ಗ ಕಲಾ ಮಂಡಳಿಯಿಂದ ಭಜನೆ ಕಾರ್ಯಕ್ರಮ ನಡೆಯಿತು. ಈ ಸಂದರ್ಭ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಜಿಲ್ಲಾ ನಿರ್ದೇಶಕಿ ಲೀಲಾವತಿ, ತಾಲೂಕು ಯೋಜನಾಧಿಕಾರಿ ಬಿ.ದಿನೇಶ್, ಜನಜಾಗೃತಿ ವೇದಿಕೆ ಜಿಲ್ಲಾ ಸದಸ್ಯ ವಿ.ಎಂ.ಸುಬ್ರಮಣಿ, ವಿರಾಜಪೇಟೆ ಪೊಲೀಸ್ ವೃತ್ತ ನಿರೀಕ್ಷಕ ಶಿವರುದ್ರ, ಯೋಜನೆ ಮೇಲ್ವಿಚಾರಕರ ಶ್ರೇಣೆಯಾ, ಕಚೇರಿ ಸಿಬ್ಬಂದಿ ಹಾಜರಿದ್ದರು.

ಮನ್ ಕಿ ಬಾತ್ ವೀಕ್ಷಿಸಿದ ನಾರಾಯಣಸ್ವಾಮಿ



ಚಾಮರಾಜನಗರ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಛಲವಾದಿ ನಾರಾಯಣಸ್ವಾಮಿ, ಪಕ್ಷದ ಮುಖಂಡರೊಂದಿಗೆ ಮನ್ ಕಿ ಬಾತ್ ಕಾರ್ಯಕ್ರಮ ವೀಕ್ಷಿಸಿದರು.

ಚಾಮರಾಜನಗರ, ಅ.27-ನಗರದ ರಾಮಸಮುದ್ರ ಕುಲುಮೆ ರಸ್ತೆಯ ಜಿಲ್ಲಾ ಬಿಜೆಪಿ ಕಚೇರಿಗೆ ಭಾನುವಾರ ಭೇಟಿ ನೀಡಿ ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಪಕ್ಷದ ಮುಖಂಡರು, ಕಾರ್ಯಕರ್ತರೊಂದಿಗೆ ಪ್ರಧಾನಿ ನರೇಂದ್ರ ಮೋದಿ ಅವರ 115ನೇ ಆವೃತ್ತಿ ಮನ್ ಕಿ ಬಾತ್ ಕಾರ್ಯಕ್ರಮ ವೀಕ್ಷಿಸಿದರು.

ಬಳಿಕ ಮಾತನಾಡಿದ ಅವರು, ಪ್ರಧಾನಿ ಮೋದಿಯವರ ಮನ್ ಕಿ ಬಾತ್ ಒಂದು ವಿಶಿಷ್ಟವಾದ ಕಾರ್ಯಕ್ರಮವಾಗಿದೆ. ಈ ಕಾರ್ಯಕ್ರಮದ ಮೂಲಕ ದೇಶದ ಸಾಧಕರನ್ನು ನೇರವಾಗಿ ಮಾತನಾಡಿಸಿ ಅವರ ಪ್ರತಿಭೆ ಹಾಗೂ ಶ್ರಮವನ್ನು ದೇಶಕ್ಕೆ ಪರಿಚಯ ಮಾಡಿಕೊಡಲಾಗುತ್ತಿದೆ. ಜೊತೆಗೆ ಅವರನ್ನು ಪ್ರೋತ್ಸಾಹಿಸುವ ಕೆಲಸ ಮಾಡುತ್ತಿರುವುದು ದೇಶದ ಅಭಿವೃದ್ಧಿಗೆ ಪೂರಕವಾಗಿದೆ ಎಂದರು.

ಸನ್ಮಾನ: ಇದೇ ವೇಳೆ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಛಲವಾದಿ ನಾರಾಯಣಸ್ವಾಮಿ ಅವರನ್ನು ಸನ್ಮಾನಿಸಲಾಯಿತು. ಬಿಜೆಪಿ ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್, ಮಾಜಿ ಶಾಸಕ ಎಸ್.ಬಾಲರಾಜ್, ಮಾಜಿ ಅಧ್ಯಕ್ಷ ಆರ್.ಸುಂದರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಪಿ.ವೃಷಬೇಂದ್ರಪ್ಪ ಹೊನ್ನೂರು ಮಹದೇವಸ್ವಾಮಿ, ಎಸ್‌ಸಿ ಮೋರ್ಚಾ ಜಿಲ್ಲಾಧ್ಯಕ್ಷ ಮೂಡಹಳ್ಳಿ ಮೂರ್ತಿ, ಉಪಾಧ್ಯಕ್ಷೆ ಪದ್ಮ, ಜಿಲ್ಲಾ ಕಾರ್ಯದರ್ಶಿ ಸರಸ್ವತಿ, ಎಸ್‌ಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿಗಳಾದ ರಾಮಣ್ಣ, ಮುತ್ತಿಗೆ ಮೂರ್ತಿ, ಕಾರ್ಯದರ್ಶಿ ಚೆನ್ನಬಸವಯ್ಯ, ಮಂಡಲ ಅಧ್ಯಕ್ಷ ಮುಕುಂದ ಮೂರ್ತಿ, ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಮಲೆಯೂರು ಕಮಲಮ್ಮ, ಪ್ರಧಾನ ಕಾರ್ಯದರ್ಶಿ ಎಂ.ಶೈಲ, ರಾಜ್ಯ ಕಾರ್ಯಕಾರಿಣಿ ಸದಸ್ಯೆ ಜಯಶೀಲ, ಜಿಲ್ಲಾ ಕಾರ್ಯದರ್ಶಿ ಕುಮಚಹಳ್ಳಿ ಪಾರ್ವತಮ್ಮ, ಕಾರ್ಯಾಲಯ ಕಾರ್ಯದರ್ಶಿ ರಂಗಸ್ವಾಮಿ, ವೇಣುಗೋಪಾಲ, ಸಹಮಾಧ್ಯಮ್ ಪ್ರಮುಖ್ ಶಿವಣ್ಣ ಹಾಜರಿದ್ದರು.

ರಸಗೊಬ್ಬರ ಗೂಡ್ಸ್ ರೈಲಿಗೆ ಪೂಜೆ...



ಮಂಗಳೂರಿನಿಂದ ಚಾಮರಾಜನಗರಕ್ಕೆ ಪ್ರಥಮ ಬಾರಿಗೆ ರಸಗೊಬ್ಬರ ಸಾಗಣೆ ಮಾಡಿದ ಗೂಡ್ಸ್ ರೈಲಿಗೆ ಜಿಲ್ಲೆಯ ರಸಗೊಬ್ಬರ ಮಾರಾಟಗಾರರು ಪೂಜೆ ಸಲ್ಲಿಸಿದರು.

ಸೆಸ್ಕ್ ಸಿಬ್ಬಂದಿ ಮಹೇಶ್ ಅವರಿಗೆ ಸನ್ಮಾನ



ಕೆರೆಯಲ್ಲಿ ತುಂಡಾಗಿ ಬಿದ್ದಿದ್ದ ವಿದ್ಯುತ್ ತಂತಿಗಳನ್ನು ದುರಸ್ತಿ ಪಡಿಸಿದ ಕಬ್ಬಹಳ್ಳಿ ಸೆಸ್ಕ್ ಸಿಬ್ಬಂದಿ ಮಹೇಶ್ ಸಾಹಸ ಕಾರ್ಯ ಮೆಚ್ಚಿ ಕರ್ನಾಟಕ ಪ್ರಜಾಶಕ್ತಿ ವೇದಿಕೆ ರಾಜ್ಯಾಧ್ಯಕ್ಷ ಅಶೋಕ್ ರಾಜ್ ಸನ್ಮಾನಿಸಿದರು. ವೇದಿಕೆ ರಾಜ್ಯ ಪ್ರಧಾನ ಕಾರ್ಯದರ್ಶಿ ಅಜಯ್, ದಿವಾಕರ್, ಸಿದ್ದರಾಜು, ಕರಿನಾಯಕ, ಯುವ ಘಟಕದ ಅಧ್ಯಕ್ಷ ವಿನೋದ್ ಇದ್ದರು.

ರಾಜ್ಯದಲ್ಲಿ ಕಾಂಗ್ರೆಸ್ ಕಳ್ಳರ ಸರ್ಕಾರ

• ಮುಖ್ಯಮಂತ್ರಿ ಸಿದ್ದರಾಮಯ್ಯಗೆ ನೈತಿಕತೆ ಇಲ್ಲ • ಛಲವಾದಿ ನಾರಾಯಣಸ್ವಾಮಿ ಟೀಕೆ

ಕೊಳ್ಳೇಗಾಲ, ಅ.27-ರಾಜ್ಯದಲ್ಲಿ ಕಾಂಗ್ರೆಸ್ ಕಳ್ಳರ ಸರ್ಕಾರ ಇದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ನೈತಿಕತೆ ಇದ್ದರೆ, ನ್ಯಾಯಾಲಯದ ಆದೇಶ ಪಾಲಿಸುವ ಮೂಲಕ ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿದ್ದರು ಎಂದು ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಟೀಕಿಸಿದರು.



ಕೊಳ್ಳೇಗಾಲ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿಯಲ್ಲಿ ಛಲವಾದಿ ನಾರಾಯಣಸ್ವಾಮಿ ಮಾತನಾಡಿದರು.

ಪಟ್ಟಣಕ್ಕೆ ಭಾನುವಾರ ಆಗಮಿಸಿ ಅವರು, ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸಿದ್ದರಾಮಯ್ಯ ಅವರಿಗೆ ಸಂವಿಧಾನದ ಬಗ್ಗೆ ಗೌರವವಿಲ್ಲ. ಶೀಘ್ರದಲ್ಲೇ ಸಿದ್ದರಾಮಯ್ಯ ರಾಜೀನಾಮೆ ನೀಡುವ ಕಾಲ ಬಂದೇ ಬರುತ್ತೆ. ಅಭಿವೃದ್ಧಿ ಬಗ್ಗೆ ಕಾಳಜಿಯೂ ಇಲ್ಲದಾಗಿದೆ. ಮುಖ್ಯಮಂತ್ರಿ ವಿರುದ್ಧ ನ್ಯಾಯಾಲಯ ಮುಡಾ ಹಗರಣದ ತನಿಖೆ ನಡೆಸಲು ಆದೇಶಿಸಿದ್ದರೂ ರಾಜೀನಾಮೆ ನೀಡುತ್ತಿಲ್ಲ. ಉಪಚುನಾವಣೆ ನೆಪದಲ್ಲಿ ರಾಜ್ಯದ ಜನರು ಮುಡಾ ಹಗರಣ ಮರೆಯಲಿ ಎಂದು ತಪ್ಪಿಸಿಕೊಂಡು ತಿರುಗಾಡುತ್ತಿದ್ದಾರೆ ಎಂದು ಹೇಳಿದರು.

ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಹೆಲಿಕಾಪ್ಟರ್‌ನಲ್ಲಿ ಬಂದು ಮುಡಾ ಫೈಲ್‌ಗಳನ್ನು ಹೊತ್ತುಕೊಂಡು ಹೋದ ಕಳ್ಳ. ಅವರಿಗೆ ಯಾರ ಬಗ್ಗೆಯೂ ಮಾತನಾಡುವ ನೈತಿಕತೆ ಇಲ್ಲ. ಅವರಿಗೆ ರಾಜಕೀಯ ಚರಿತ್ರೆ ಗೊತ್ತಿಲ್ಲದವರು. ಜನರೇ ತಕ್ಕ ಉತ್ತರ ನೀಡುತ್ತಾರೆ. ಕಾಂಗ್ರೆಸ್ ಮುಳುಗುವ ಹಡಗು. ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ನೇತೃತ್ವದಲ್ಲಿ 150ಕ್ಕೂ ಹೆಚ್ಚು ಸ್ಥಾನ ಗೆದ್ದು ಸರ್ಕಾರ ಅಧಿಕಾರಕ್ಕೆ ಬರಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಯೋಗೇಶ್ವರ್‌ಗೆ ಆಮಿಷವೊಡ್ಡಿ ಅಪಹರಿಸಿದ್ದಾರೆ: ಚನ್ನಪಟ್ಟಣದಲ್ಲಿ ಕಾಂಗ್ರೆಸ್‌ಗೆ ಅಭ್ಯರ್ಥಿ ಹಾಕಲು ತಾಕತ್ತಿಲ್ಲದೆ ಮಾಜಿ ಸಚಿವ ಯೋಗೇಶ್ವರ್ ಅವರನ್ನು ಆಮಿಷವೊಡ್ಡಿ ಅಪಹರಿಸಿದ್ದಾರೆ ಎಂದು ಆರೋಪಿಸಿದರು.

ಮೊದಲು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಾನೇ ನಿಲ್ಲುವೆ ಅಂದ್ರು, ನಂತರ ಗಟ್ಟಿ ವ್ಯಕ್ತಿಬೇಕು ಎಂದು ಡಿ.ಕೆ.ಸುರೇಶ್ ನಾನೇ ನಿಲ್ಲುವೆ ಅಂದ್ರು, ಆ ಮೇಲೆ ನಾವಿಬ್ಬರೂ ಗಟ್ಟಿತನವಿಲ್ಲದವರು ಎಂದು ಯೋಗೇಶ್ವರ್‌ಗೆ ಆಸೆ, ಆಮಿಷವೊಡ್ಡಿ ಕರೆದುಕೊಂಡು ಹೋಗಿದ್ದಾರೆ. ಕಾಂಗ್ರೆಸ್‌ನಲ್ಲಿ ಅಭ್ಯರ್ಥಿ ಕೊರತೆ ಇದೆ. ಹಗಲು ಕಂಡ ಬಾವಿಯಲ್ಲಿ ನಮ್ಮ ಶಾಸಕರಾರು ರಾತ್ರಿ ಬೀಳಲ್ಲ ಎಂದರು.

ಎಂಪಿ ಏಳೋದೋ ಲೇಟು: ಸಂಸದ ಸುನೀಲ್ ಬೋಸ್ ಮಲಗೋದು ಲೇಟ್, ಏಳೋದು ಲೇಟು ಹಾಗಾಗಿ, ಇಲ್ಲಿನ ಕೆಲಸ ಕಾರ್ಯಗಳು ಲೇಟು ಎಂಬುದನ್ನು ಜಿಲ್ಲೆಯ ಜನತೆ ಅರಿಯಬೇಕು ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಮಾಜಿ ಸಚಿವ ಎನ್.ಮಹೇಶ್, ಮಾಜಿ ಶಾಸಕ ಎಸ್.ಬಾಲರಾಜು ಇದ್ದರು.

ಪಕ್ಷ ಬಿಟ್ಟವರು ಕಪ್ಪೆಗಳಿದ್ದಂತೆ

ಆಸೆ, ಆಮಿಷಕ್ಕೊಳಗಾಗಿ ಕೊಳ್ಳೇಗಾಲ ನಗರಸಭೆ ಕೆಲ ಬಿಜೆಪಿ ಸದಸ್ಯರು ಕಾಂಗ್ರೆಸ್ ಸೇರಿದ್ದಾರೆ. ಅವರು ಕಪ್ಪೆಗಳಿದ್ದಂತೆ, ಪಕ್ಷ ಬಿಟ್ಟು ಪಕ್ಷಕ್ಕೆ ಜಿಗಿಯಲಿದ್ದಾರೆ ಎಂದು ಛಲವಾದಿ ನಾರಾಯಣಸ್ವಾಮಿ ಸ್ವಪಕ್ಷ ಸದಸ್ಯರ ವಿರುದ್ಧ ಗರಂ ಆದರು.

ಆಸೆಗಳಿಗೆ ಒಪ್ಪಿಕೊಂಡು ಹೋದವರು ಒಂದು ಕಡೆ ಇರಲ್ಲ. ಅವರು ಬದ್ಧತೆ ಇಲ್ಲದ ರಾಜಕಾರಣಿಗಳು. ಎಲ್ಲೆ ಇದ್ದರೂ ಸ್ವಾಭಿಮಾನ ಮುಖ್ಯ ಎಂದು ಪಕ್ಷ ತೊರೆದ ನಗರಸಭೆ ಸದಸ್ಯರನ್ನು ಟೀಕಿಸಿದರು. ಯಾರೇ ಪಕ್ಷ ಬಿಟ್ಟು ಹೋದರು ಕಾರ್ಯಕರ್ತರಿಂದ ಬಿಜೆಪಿ ಸುಭದ್ರವಾಗಿದೆ ಎಂದರು.

ಆಧ್ಯಾತ್ಮಿಕ ಕೇಂದ್ರಗಳಿಂದ ದೇವತಾ ಗುಣ ಚಿಂತನೆ

ಚಾಮರಾಜನಗರ: ಗ್ರಾಮೀಣ ಜನರಿಗೆ ಭಗವಂತನ ಸಂದೇಶ ತಲುಪಿಸುವ ಮೂಲಕ ವಿಶ್ವ ನವನಿರ್ಮಾಣಕ್ಕೆ ನಾಂದಿ ಹಾಡೋಣ. ವಿಶ್ವಜ್ಞಾನ ಜ್ಯೋತಿ ಬೆಳಗಿಸುವ ಮೂಲಕ ದೇವತಾ ಗುಣಗಳ ಚಿಂತನೆಗೆ ಅವಕಾಶ ಕಲ್ಪಿಸುವುದು ಆಧ್ಯಾತ್ಮಿಕ ಕೇಂದ್ರಗಳ ವೈಶಿಷ್ಟವಾಗಿದೆ ಎಂದು ಕೊಳ್ಳೇಗಾಲ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರಿಯ ವಿಶ್ವವಿದ್ಯಾಲಯದ ಬಿ.ಕೆ.ಪ್ರಭಾಮಣಿಜೀ ತಿಳಿಸಿದರು.

ತಾಲೂಕಿನ ಮಸಗಾಪುರದಲ್ಲಿ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿಯ ವಿಶ್ವವಿದ್ಯಾಲಯದಿಂದ ನಿರ್ಮಿಸಿರುವ ಸತ್ಯ ಗೀತಾ ಜ್ಞಾನ ಪಾಠಶಾಲೆ ಕಟ್ಟಡ ಉದ್ಘಾಟನೆ ಸಮಾರಂಭದಲ್ಲಿ ಮಾತನಾಡಿದ ಅವರು, ಈ ಪಾಠಶಾಲೆ ನೂತನ ಕಟ್ಟಡ ಧ್ಯಾನ, ಯೋಗ, ಸದ್ಭಾವ ಮಂದಿರವಾಗಲಿ. ಜನರು ಸಂಪೂರ್ಣ ಸದುಪಯೋಗಪಡಿಸಿಕೊಂಡು ಆತ್ಮಜ್ಞಾನ ಹೆಚ್ಚಿಸಿಕೊಂಡು ಉತ್ತಮ ಬದುಕನ್ನು ರೂಪಿಸಿಕೊಳ್ಳಬೇಕು ಎಂದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ನಗರಸಭೆ ಅಧ್ಯಕ್ಷ ಸುರೇಶ್ ನಾಯಕ, ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿಯ ವಿಶ್ವವಿದ್ಯಾಲಯ ವಿಶ್ವದ ಎಲ್ಲೆಡೆ ಶಾಂತಿ, ಸನ್ಮಾರ್ಗದ ಬೋಧಿಸಿ ಮಾನವರನ್ನು ಶ್ರೇಷ್ಠರನ್ನಾಗಿಲು ಕಾರ್ಯ ರೂಪಿಸುತ್ತಿದೆ. ಗ್ರಾಮೀಣ ಭಾಗದ ಮಸಗಾಪುರದಲ್ಲಿ ರೂಪಿಸಿರುವುದು ಬಹಳ ಸಂತೋಷ ಎಂದರು.

ಜೈ ಹಿಂದ್ ಪ್ರತಿಷ್ಠಾನ ಅಧ್ಯಕ್ಷ ಸುರೇಶ್ ಎನ್.ಋಗ್ವೇದಿ ಮಾತನಾಡಿ, ಸತ್ಯದ ಹಾದಿಯಲ್ಲಿ ಸಾಗಬೇಕು. ಸತ್ಯ ಮತ್ತು ಪ್ರಾಮಾಣಿಕತೆ ಮೂಲಕ ವಿಶ್ವದಲ್ಲಿ ಶಾಂತಿ ಸ್ಥಾಪಿಸುತ್ತಿರುವ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿಯ ವಿಶ್ವವಿದ್ಯಾಲಯದ ಸಂಪರ್ಕವನ್ನು ಪ್ರತಿಯೊಬ್ಬರು ಹೊಂದಿ ಜನ್ಮ ಸಾರ್ಥಕ ಪಡಿಸಿಕೊಳ್ಳಬೇಕು ಎಂದು ತಿಳಿಸಿದರು.



ಚಾಮರಾಜನಗರ ತಾಲೂಕಿನ ಮಸಗಾಪುರದಲ್ಲಿ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದಿಂದ ನಿರ್ಮಿಸಿರುವ ಸತ್ಯ ಗೀತಾ ಜ್ಞಾನ ಪಾಠಶಾಲೆ ಕಟ್ಟಡ ಉದ್ಘಾಟಿಸಲಾಯಿತು.

ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿಯ ವಿವಿಯ ರಾಜಯೋಗಿನಿ ಬಿ.ಕೆ.ದಾನೇಶ್ವರಿ ಮಾತನಾಡಿದರು. ಸಮಾಜ ಸೇವಕರಾದ ಪರಮೇಶ್ವರಪ್ಪ ಟಿ.ಜೆ.ಸುರೇಶ್, ಬಿ.ಕೆ.ಆರಾಧ್ಯ, ಮಹದೇವೇಗೌಡ ಮಂಜುನಾಥ್, ನಂದೀಶ್ ಪ್ರಮೀಳಾ, ಶಿವಕುಮಾರ್, ಶ್ರೀನಿವಾಸ್, ಗ್ರಾಪಂ ಸದಸ್ಯರು, ದಾನಿಗಳು ಉಪಸ್ಥಿತರಿದ್ದರು.

ಕ್ಯಾನ್ಸರ್ ಭಯಪಡುವ ಕಾಯಿಲೆ ಅಲ್ಲ

ಕೊಳ್ಳೇಗಾಲ, ಅ.27-ಲಯನ್ಸ್ ಕ್ಲಬ್ ಹಾಗೂ ಮೈಸೂರಿನ ಭಾರತ್ ಕ್ಯಾನ್ಸರ್ ಆಸ್ಪತ್ರೆ ಸಹಯೋಗದೊಂದಿಗೆ ಪಟ್ಟಣದ ಲಯನ್ಸ್ ಕಮ್ಯೂನಿಟಿ ಹಾಲ್‌ನಲ್ಲಿ ಆಯೋಜಿಸಿದ್ದ ಉಚಿತ ಮೇಗಾ ಕ್ಯಾನ್ಸರ್ ತಪಾಸಣೆ ಶಿಬಿರಕ್ಕೆ ಡಾ.ಆರ್.ರಕ್ಷಿತ್ ಶೃಂಗೇರಿ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಅವರು, ಕ್ಯಾನ್ಸರ್ ಭಯಪಡುವಂತಹ ಕಾಯಿಲೆ ಅಲ್ಲ. ಹಾಗಾಗಿ, ಆತಂಕ ಪಡುವ ಅವಶ್ಯಕತೆ ಇಲ್ಲ. ತಪಾಸಣೆಗೆ ಒಳಪಡುವ ಮೂಲಕ ಚಿಕಿತ್ಸೆ ಪಡೆದರೆ ಕ್ಯಾನ್ಸ್ ದೂರವಿಡಲು ಸಾಧ್ಯ. ಜೊತೆಗೆ ಸುತ್ತಮುತ್ತಲ ಪರಿಸರವನ್ನು ಸ್ವಚ್ಛವಾಗಿಡುವ ಮೂಲಕ ಎಲ್ಲಾ ರೋಗಗಳನ್ನು ದೂರ ಮಾಡಬಹುದು ಎಂದರು. ಶಿಬಿರದಲ್ಲಿ ಭಾರತ್ ಕ್ಯಾನ್ಸರ್ ಆಸ್ಪತ್ರೆ ವ್ಯವಸ್ಥಾಪಕ ಶಿವಪ್ರಸಾದ್, ಲಯನ್ಸ್ ಕ್ಲಬ್ ಅಧ್ಯಕ್ಷ ಬಿ.ಚಿಕ್ಕಬಸವಯ್ಯ,



ಖಜಾಂಚಿ ವಿರೂಪಾಕ್ಷ, ನಿಕಟಪೂರ್ವ ಅಧ್ಯಕ್ಷ ವೆಂಕಟೇಶ್ ಬಾಬು, ಎಸ್.ನಾಗರಾಜು, ಜಿ.ಎಸ್.ಎಂ.ಪ್ರಸಾದ್, ಚನ್ನಮಾದೇಗೌಡ, ಗಿರಿರಾಜ್, ಎಂ.ಎಸ್.ನಾಗರಾಜಪ್ಪ, ಚೇತನ್ ಇನ್ನಿತರಿದ್ದರು.

ಚನ್ನಮಲ್ಲಾಚಾರ್ ನಿಧನ

ಕೊಳ್ಳೇಗಾಲ: ತಾಲೂಕಿನ ಕುಣಗಳ್ಳಿ ಗ್ರಾಮದ



ಚನ್ನಮಲ್ಲಾಚಾರ್(65) ಅನಾರೋಗ್ಯದಿಂದ ಶನಿವಾರ ನಿಧನರಾದರು.

ಮೃತರು ಪುತ್ರರಾದ ಉಮೇಶ್, ರಮೇಶ್, ಪುತ್ರಿ ಜಗದಾಂಬ ಸೇರಿದಂತೆ ಅಪಾರ ಬಂಧು-ಬಳಗ ಅಗಲಿದ್ದಾರೆ. ಭಾನುವಾರ ಸಂಜೆ ಸ್ವಗ್ರಾಮ ಕುಣಗಳ್ಳಿಯಲ್ಲಿ ಅಂತ್ಯಕ್ರಿಯೆ ನೆರವೇರಿತು.

ಮೂರನೇ ಪುಟದಿಂದ

ನಗದು ವ್ಯವಹಾರ ಇರಲ್ಲ

ವಹಿವಾಟು ಯುಪಿಐ ಮೂಲಕ ನಡೆಯುತ್ತಿದೆ. ಇದು ಮುಂದಿನ ವರ್ಷಕ್ಕೆ ದುಪ್ಪಟ್ಟಾಗಲಿದೆ ಎಂದು ಶಕ್ತಿಕಾಂತ್ ದಾಸ್ ಹೇಳಿದ್ದಾರೆ. ಭಾರತದ ಎಲ್ಲಾ ಕ್ಷೇತ್ರಗಳಲ್ಲಿ ಯುಪಿಐ ಪೇಮೆಂಟ್ ಅಥವಾ ಡಿಜಿಟಲ್ ಕರೆನ್ಸಿ ಪ್ರವೇಶ ಮಾಡಿದೆ. ಹಳ್ಳಿ ಹಳ್ಳಿಗಳಲ್ಲೂ ಇದೀಗ ಡಿಜಿಟಲ್ ಕರೆನ್ಸಿ ಮೂಲಕವೇ ವ್ಯವಹಾರ ನಡೆಯುತ್ತಿದೆ. ಸದ್ಯ ಇದು ಸಂಪೂರ್ಣವಾಗಿ ಆವರಿಸಿಕೊಂಡಿಲ್ಲ. ಆದರೆ ಹಂತ ಹಂತವಾಗಿ ಭಾರತದ ಎಲ್ಲೆಡೆ ನಗದು ವ್ಯವಹಾರ ಸಂಪೂರ್ಣವಾಗಿ ನಿಂತು ಹೋಗಲಿದೆ. ಇತ್ತ ನೋಟುಗಳು, ನಾಣ್ಯಗಳ ಚಲಾವಣೆ ಬಂದ್ ಆಗಲಿದೆ. ಎಲ್ಲವೂ ಡಿಜಿಟಲ್ ಕರೆನ್ಸಿ ಮೂಲಕವೇ ನಡೆಯಲಿದೆ ಎಂಬುದು ಶಕ್ತಿಕಾಂತ ದಾಸ್ ಅಭಿಪ್ರಾಯ. ಭಾರತದ ನಕಲಿ ನೋಟುಗಳು ಚಲಾವಣೆಯಾಗುತ್ತಿದೆ. ಆರ್‌ಬಿಐ ಈ ಕುರಿತು ಹಲವು ಕ್ರಮಗಳನ್ನು ಕೈಗೊಂಡಿದೆ ಆದರೆ ಸಂಪೂರ್ಣವಾಗಿ ನಕಲಿ ನೋಟು ಹಾವಳಿ ನಿಯಂತ್ರಿಸಲು ಸಾಧ್ಯವಾಗಿಲ್ಲ. ಇವೆಲ್ಲವನ್ನು ಪರಿಗಣಿಸಿ ಭವಿಷ್ಯದಲ್ಲಿ ಸುರಕ್ಷತೆ ಹಾಗೂ ಸುಭದ್ರ ವಹಿವಾಟಿಗೆ ಡಿಜಿಟಲ್ ಕರೆನ್ಸಿ ಅತ್ಯಗತ್ಯ. ಸದ್ಯ ಭಾರತ ಡಿಜಿಟಲ್ ಕರೆನ್ಸಿ ವಹಿವಾಟಿನಲ್ಲಿ ಮುಂದಿದೆ. ಬಹುತೇಕ ವ್ಯವಹಾರಗಳು ಡಿಜಿಟಲ್ ಕರೆನ್ಸಿ ಮೂಲಕವೇ ನಡೆಯುತ್ತಿದೆ. ಇದು ಕೆಲವೇ ದಿನಗಳಲ್ಲಿ ಸಂಪೂರ್ಣವಾಗಿ ವ್ಯಾಪಿಸಲಿದೆ ಎಂದು ಶಕ್ತಿಕಾಂತ ದಾಸ್ ಹೇಳಿದ್ದರೆ.

ನಾಲ್ವರು ಮುಡಾ ಅಧಿಕಾರಿಗಳ ವಿಚಾರಣೆ

ಸೇರಿದಂತೆ ನಾಲ್ವರನ್ನು ಇಡಿ ನಿನ್ನೆ ವಿಚಾರಣೆಗೊಳಪಡಿಸಿದೆ. ಮುಡಾದ ದಾಖಲಾತಿ ಕೊಠಡಿ ಮುಖ್ಯಸ್ಥ ರವಿ, ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳಾದ ಆರ್.ಶ್ರೀನಿವಾಸ್ ಮತ್ತು ರಾಜಶೇಖರ್, ಸೇರಿದಂತೆ ನಾಲ್ವರಿಗೆ ಸಮನ್ಸ್ ನೀಡಿದ್ದು ಇವರನ್ನು ನಾಳೆ ಇಡಿ ವಿಚಾರಣೆ ಮಾಡಲಿದೆ. ಮುಡಾ ಆಡಳಿತ ಮಂಡಳಿಯ ಹಾಲಿ ಹಾಗೂ ಮಾಜಿ ಸದಸ್ಯರು, ಮಾಜಿ ಅಧ್ಯಕ್ಷರು ಹಾಗೂ ಅಧಿಕಾರಿಗಳಿಗೆ ಕೂಡ ಸಮನ್ಸ್ ನೀಡುವ ಇಡಿ ಅವರನ್ನು ಕೂಡ ವಿಚಾರಣೆಗೊಳಪಡಿಸಲಿದೆ ಎನ್ನಲಾಗಿದೆ. ದೀಪಾವಳಿ ಹಬ್ಬದ ತರುವಾಯ ಮುಡಾದ ಹಿಂದಿನ ಆಯುಕ್ತರಾದ ಡಾ.ನಟೇಶ್ ಹಾಗೂ ದಿನೇಶ್ ಕುಮಾರ್ ಅವರನ್ನು ಕೂಡ ಇಡಿ ವಿಚಾರಣೆ ಮಾಡಲಿದೆ ಎಂದು ತಿಳಿದು ಬಂದಿದೆ.

ಫಿಜಿಯಿಂದ ಅತ್ಯುನ್ನತ ಪೌರ ಪ್ರಶಸ್ತಿ

ಹೆಚ್.ಇ.ರಟು ವಿಲ್ಲಿಯಮೆ ಎಂ.ಕಟೋನಿವೆರಿಯವರು ಗುರೂಜಿಯವರಿಗೆ ನೀಡಿದರು. ಗುರುದೇವರಿಗೆ ತಮ್ಮ ದೇಶದ ಅತ್ಯುನ್ನತ ಪೌರ ಪ್ರಶಸ್ತಿಯನ್ನು ನೀಡುತ್ತಿರುವ ಆರನೆಯ ದೇಶವು ಫಿಜಿಯಾಗಿದ್ದು, ಆರ್ಟ್ ಆಫ್ ಲಿವಿಂಗ್‌ನ ಮೂಲಕ ಗುರೂಜಿಯವರು ಕಳೆದ 43 ವರ್ಷಗಳಿಂದ ಹರಡುತ್ತಿರುವ ಸಂತೋಷ ಮತ್ತು ಸಾಮರಸ್ಯವನ್ನು ಗುರುತಿಸಿ, ಇದರೊಡನೆ ಅವರು ಮಾನಸಿಕ ಆರೋಗ್ಯ, ಶಿಕ್ಷಣ, ಪರಿಸರ, ಮಹಿಳಾ ಹಾಗೂ ಯುವಕ ಸಬಲೀಕರಣ, ಒತ್ತಡ ನಿವಾರಣೆ , ಧ್ಯಾನದ ಕಾರ್ಯಕ್ರಮಗಳು, ಹೀಗೆ ಅನೇಕಾನೇಕ ಕ್ಷೇತ್ರಗಳಲ್ಲಿ ಅವರು ನಿರ್ವಹಿಸುತ್ತಿರುವ ಕಾರ್ಯಗಳಿಗಾಗಿ ಗುರುದೇವರಿಗೆ ಈ ಪ್ರಶಸ್ತಿಯನ್ನು ನೀಡಲಾಗಿದೆ.

ಹಾಸನಾಂಬೆಯಲ್ಲಿ ಬೇಡಿಕೊಂಡಿದ್ದೇನೆ

ಪಡೆದ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಹಾಸನಾಂಬೆ ಪವಾಡವನ್ನು ನಾವು ಚಿಕ್ಕಮಕ್ಕಳಿಂದ ಗಮನಿಸಿದ್ದೇವೆ. ನಮ್ಮ ಚಿಕ್ಕವಯಸ್ಸಿನಲ್ಲಿ ಒಂದುವರೆ ತಿಂಗಳು ಜಾತ್ರೆ ನಡೆಯುತ್ತಿತ್ತು. ರೈತ ಬಂಧುಗಳು ಉತ್ತಮ ರೀತಿಯಲ್ಲಿ ಬದುಕು ನಡೆಸುವಂತಾಗಲಿ. ಮಳೆ, ಬೆಳೆ ಎಲ್ಲವೂ ಚನ್ನಾಗಿ ಆಗಿ ನೆಮ್ಮದಿಯ ಬದುಕು ಸಿಗುವಂತಾಗಲಿ. ನಮ್ಮ ಹಳೆಯ ಸಂಪ್ರಾದಾಯದಂತೆ ಬಂಧು ಬಾಂಧವರು ಉತ್ತಮ ಸಂಬಂಧ ಇಟ್ಟುಕೊಳ್ಳುವಂತಾಗಲಿ. ದೇವರ ಆಶೀರ್ವಾದದಿಂದ ನಮ್ಮ ಬೇಡಿಕೆಗಳು ಈಡೇರುತ್ತವೆ ಎಂದು ತಿಳಿಸಿದ್ದಾರೆ.

ವೀಡಿಯೊ ಕರೆ ಮೂಲಕ ಸಂಪರ್ಕಿಸುವುದಿಲ್ಲ

ಡಿಜಿಟಲ್ ಅರೆಸ್ಟ್: ಡಿಜಿಟಲ್ ವಂಚನೆಗಳ ಬಗ್ಗೆ ಎಚ್ಚರದಿಂದಿರಿ. ಇಂತಹ ತನಿಖೆಗಳಿಗೆ ಯಾವುದೇ ತನಿಖಾ ಸಂಸ್ಥೆಯು ಫೋನ್ ಅಥವಾ ವೀಡಿಯೊ ಕರೆ ಮೂಲಕ ನಿಮ್ಮನ್ನು ಸಂಪರ್ಕಿಸುವುದಿಲ್ಲ ಎಂದರು. ರಾಷ್ಟ್ರೀಯ ಸೈಬರ್ ಸಹಾಯವಾಣಿ ಯೊಂದಿಗೆ ಸಂಪರ್ಕ ಸಾಧಿಸಲು ಅಥವಾ ಅದರ ಪೋರ್ಟಲ್‌ನೊಂದಿಗೆ ಸಂಪರ್ಕ ಸಾಧಿಸಲು 1930 ನಂಬರ್ ಡಯಲ್ ಮಾಡಲು ಮತ್ತು ಅಂತಹ ಅಪರಾಧದ ಬಗ್ಗೆ ಪೊಲೀಸರಿಗೆ ತಿಳಿಸಿ. ಇಂತಹ ಕರೆಗಳು ಬಂದಾಗ ಸಂಭಾಷಣೆಗಳನ್ನು ರೆಕಾರ್ಡ್ ಮಾಡಿ ಸ್ಕ್ರೀನ್‌ಶಾಟ್‌ಗಳನ್ನು ತೆಗೆದು ದೂರು ನೀಡಿ ಎಂದರು. ಪ್ರಧಾನ ಮಂತ್ರಿಗಳು ಎನಿಮೇಷನ್ ಜಗತ್ತಿನಲ್ಲಿ ಭಾರತೀಯ ಪ್ರತಿಭೆಗಳು ಹೆಚ್ಚುತ್ತಿರುವ ಬಗ್ಗೆ ಶ್ಲಾಘಿಸಿದರು. ಸೃಜನಶೀಲ ಶಕ್ತಿಯ ಅಲೆಯು ಭಾರತವನ್ನು ಆವರಿಸುತ್ತಿದೆ. ಅನಿಮೇಷನ್ ಜಗತ್ತಿನಲ್ಲಿ 'ಮೇಡ್ ಇನ್ ಇಂಡಿಯಾ' ಮತ್ತು 'ಮೇಡ್ ಬೈ ಇಂಡಿಯಾ' ಪ್ರಕಾಶಮಾನವಾಗಿ ಮಿಂಚುತ್ತಿವೆ ಎಂದರು. ಛೋಟಾ ಭೀಮ್, ಕೃಷ್ಣ ಮತ್ತು ಮೋಟು ಪತ್ಲು ಮುಂತಾದ ಭಾರತೀಯ ಅನಿಮೇಷನ್ ಪಾತ್ರಗಳು ವ್ಯಾಪಕವಾಗಿ ಜನಪ್ರಿಯ ವಾಗಿವೆ. ಭಾರತದ ವಿಷಯ, ಸಂಸ್ಕೃತಿ ಮತ್ತು ಸೃಜನಶೀಲತೆಯನ್ನು ಜಗತ್ತಿನಾದ್ಯಂತ ಇಷ್ಟಪಡಲಾಗುತ್ತಿದೆ. ಭಾರತವು ಅನಿಮೇಷನ್‌ನಲ್ಲಿ ಕ್ರಾಂತಿಯನ್ನು ಸೃಷ್ಟಿಸುವ ಹಾದಿಯಲ್ಲಿದೆ. ಭಾರತೀಯ ಆಟಗಳು ಕೂಡ ಜನಪ್ರಿಯವಾಗುತ್ತಿವೆ ಎಂದು ಮೋದಿ ಹೇಳಿದರು. 'ಆತ್ಮನಿರ್ಭರ ಭಾರತ'ದ ಪ್ರಯತ್ನವು ಪ್ರತಿಯೊಂದು ವಲಯದಲ್ಲೂ ದಾಪುಗಾಲು ಹಾಕುತ್ತಿದೆ, ದೇಶವು ತನ್ನ ರಕ್ಷಣಾ ಉತ್ಪನ್ನಗಳನ್ನು ಈಗ 85 ಕ್ಕೂ ಹೆಚ್ಚು ದೇಶಗಳಿಗೆ ರಫ್ತು ಮಾಡುತ್ತಿದೆ ಎಂದರು.

1ಕ್ಕೆ ಸೇರಿಸಲು ಸೂಕ್ತ ತೀರ್ಮಾನ

ಸಮೀಕ್ಷಾ ವರದಿಗಳು ಮುಖ್ಯವಾಗಿದೆ. 2011ರ ಜನಗಣತಿಯೇ ಕೊನೆ ಗಣತಿ. ಈಗ ನಮ್ಮ ಸರ್ಕಾರ ಜಾತಿ ಗಣತಿ ವರದಿಯನ್ನು ಸ್ವೀಕರಿಸಿದೆ. ಕೇಂದ್ರದ ಮೋದಿ ಸರ್ಕಾರ ಆರ್ಥಿಕವಾಗಿ ಹಿಂದುಳಿದವರಿಗೆ ಶೇ. 10 ರಷ್ಟು ಮೀಸಲಾತಿ ನೀಡಿದೆ. ಈ ವ್ಯಾಪ್ತಿಯೊಳಗೆ ಹಳ್ಳಿಕಾರ ಸಮುದಾಯ ಬರುತ್ತದೆಯಾ ಎನ್ನುವುದು ಪರಿಶೀಲಿಸಬೇಕಿದೆ ಎಂದು ಹೇಳಿದರು. ಹಳ್ಳಿಕಾರ ಸಮುದಾಯವನ್ನು ಪ್ರವರ್ಗ 3ಎ ಗೆ ಸೇರಿಸಿರುವುದು ಸರಿಯಲ್ಲ. ಆದ್ದರಿಂದ ಶಾಶ್ವತ ಹಿಂದುಳಿದ ಆಯೋಗಕ್ಕೆ ಬೇಡಿಕೆ ಕಳುಹಿಸಿ ಅಧ್ಯಯನ ಮಾಡಿಸಿ ವರದಿ ಪಡೆಯಲಾಗುವುದು. ಆ ಬಳಿಕ ಸಮುದಾಯಕ್ಕೆ ನ್ಯಾಯಯುತವಾಗಿ ಏನು ಸಲ್ಲಬೇಕು ಎನ್ನುವುದನ್ನು ಪರಿಶೀಲಿಸಲಾಗುವುದು ಎಂದು ಭರವಸೆ ನೀಡಿದರು.

'ಇರುಮುಡಿ' ಸಾಗಿಸಲು ಅನುಮತಿ

ಸೇರಿದಂತೆ ಅರ್ಪಣೆಗಳನ್ನು ಹೊಂದಿರುವ ಪವಿತ್ರ) ತೆಂಗಿನಕಾಯಿಯನ್ನು ಸಾಗಿಸಲು ವಿನಾಯಿತಿ ನೀಡಲಾಗಿದೆ ಎಂದು ಹೇಳಿದರು. ಈ ಆದೇಶವು 2025ರ ಜನವರಿ 20 ರವರೆಗೆ ಮಾತ್ರ ಚಾಲ್ತಿಯಲ್ಲಿರುತ್ತದೆ. ಅಗತ್ಯವಿರುವ ಎಕ್ಸ್‌-ರೇ, ಇಟಿಡಿ (ಎಕ್ಸ್‌ಪ್ಲೋಸಿವ್ ಟ್ರೇಸ್ ಡಿಟೆಕ್ಟರ್) ಮತ್ತು ಭೌತಿಕ ತಪಾಸಣೆ ಹೀಗೆ ಭದ್ರತಾ ತಪಾಸಣೆಗಳ ಬಳಿಕವೇ ಅನುಮತಿ ನೀಡಲಾಗುವುದು ಎಂದಿದ್ದಾರೆ. ಒಟ್ಟು ಎರಡು ತಿಂಗಳ ಕಾಲ ಅಂದರೆ ಜನವರಿ ಅಂತ್ಯದವರೆಗೆ ತೀರ್ಥಯಾತ್ರೆಗಾಗಿ ಶಬರಿಮಲೆಯ ಅಯ್ಯಪ್ಪ ದೇವಾಲಯವು ತೆರೆದಿರುತ್ತದೆ. ಪ್ರತಿ ವರ್ಷ ಲಕ್ಷಾಂತರ ಭಕ್ತರು ದೇಗುಲಕ್ಕೆ ಭೇಟಿ ನೀಡುತ್ತಾರೆ. ಜೊತೆಗೆ 'ಇರುಮುಡಿ ಕಟ್ಟು' (ತುಪ್ಪ ತುಂಬಿದ ತೆಂಗಿನಕಾಯಿ ಸೇರಿದಂತೆ ಅರ್ಪಣೆಗಳನ್ನು ಹೊಂದಿರುವ ಪವಿತ್ರ ಚೀಲವನ್ನು ಭಗವಂತನಿಗೆ ಕೊಂಡೊಯ್ಯುತ್ತಾರೆ). ಸಾಮಾನ್ಯವಾಗಿ, ಶಬರಿಮಲೆಗೆ ಯಾತ್ರೆ ಕೈಗೊಳ್ಳುವವರು 'ಕಟ್ಟುನಿರಕಲ್' ಆಚರಣೆಯ ಭಾಗವಾಗಿ 'ಇರುಮುಡಿ ಕಟ್ಟು' ಸಿದ್ಧಪಡಿಸುತ್ತಾರೆ. ಆಚರಣೆಯ ಸಮಯದಲ್ಲಿ, ತೆಂಗಿನಕಾಯಿಯೊಳಗೆ ತುಪ್ಪ ತುಂಬಿಸಲಾಗುತ್ತದೆ. ನಂತರ ಅದನ್ನು ಇತರ ನೈವೇದ್ಯಗಳೊಂದಿಗೆ ಚೀಲದಲ್ಲಿ ಇರಿಸಲಾಗುತ್ತದೆ. ತೀರ್ಥಯಾತ್ರೆಯ ಸಮಯದಲ್ಲಿ ವಿವಿಧ ಪವಿತ್ರ ಸ್ಥಳಗಳಲ್ಲಿ ಒಡೆಯಲು ಹೆಚ್ಚಿನ ತೆಂಗಿನಕಾಯಿಗಳನ್ನು ಇರಿಸಿರಲಾಗುತ್ತದೆ. ಇರುಮುಡಿ ಕಟ್ಟನ್ನು ತಲೆಯ ಮೇಲೆ ಹೊತ್ತ ಯಾತ್ರಾರ್ಥಿಗಳಿಗೆ ಮಾತ್ರ ದೇವಾಲಯದ ಗರ್ಭಗುಡಿಯನ್ನು ತಲುಪಲು 18 ಪವಿತ್ರ ಮೆಟ್ಟಿಲುಗಳನ್ನು ಹತ್ತಲು ಅನುಮತಿಸಲಾಗುತ್ತದೆ. ಅದನ್ನು ಹೊತ್ತುಕೊಳ್ಳದವರು ಗರ್ಭಗುಡಿಯನ್ನು ತಲುಪಲು ಬೇರೆ ಮಾರ್ಗದ ಮೂಲಕ ಗರ್ಭಗುಡಿಗೆ ಹೋಗಬೇಕು.

ಗೆದ್ದರೆ ಡಿಕೆಶಿ ಸಿಎಂ ಸಾಧ್ಯತೆ

ಎಂಎಲ್‌ಸಿ ಪುಟ್ಟಣ್ಣ: ಸಿದ್ದರಾಮಯ್ಯ ಅವರ ಬಳಿಕ ಡಿ.ಕೆ.ಶಿವಕುಮಾರ್ ಅವರಿಗೆ ಸಿಎಂ ಆಗುವ ಎಲ್ಲಾ ಅವಕಾಶ ಇದೆ. ಸಿ.ಪಿ.ಯೋಗೇಶ್ವರ್ ಅವರನ್ನ ಗೆಲ್ಲಿಸಿದರೆ ಡಿ.ಕೆ.ಶಿವಕುಮಾರ್‌ಗೆ ಶಕ್ತಿ ಬರುತ್ತೆ ಎಂದು ಕಾಂಗ್ರೆಸ್ ವಿಧಾನ ಪರಿಷತ್ ಸದಸ್ಯ ಪುಟ್ಟಣ್ಣ ಹೇಳಿದ್ದಾರೆ. ಡಿ.ಕೆ.ಸುರೇಶ್ ಸೋಲಿಸಲು ಕುಮಾರಸ್ವಾಮಿ ಭಾವನನ್ನು ತಂದು ನಿಲ್ಲಿಸಿದರು. ಈಗ ಈ ಕ್ಷೇತ್ರವನ್ನು ಯೋಗೇಶ್ವರ್‌ಗೆ ಬಿಟ್ಟುಕೊಡಬಹುದಿತ್ತು. ಆದರೆ ಅವರ ಮನೆಯವರಿಗೆ ಬಿಟ್ಟು ಬೇರೆ ಯಾರಿಗೂ ಕುಮಾರಸ್ವಾಮಿ ಟಿಕೆಟ್ ಕೊಡಲ್ಲ. ಕುಮಾರಸ್ವಾಮಿ ಟೂರಿಂಗ್ ಟಾಕೀಸ್, ಎಲ್ಲೂ ನಿಲ್ಲಲ್ಲ ಎಂದು ವ್ಯಂಗ್ಯವಾಡಿದ್ದಾರೆ. ಯೋಗೇಶ್ವರ್ ಕ್ಷೇತ್ರಕ್ಕೆ ನೀರಿನ ಸೌಲಭ್ಯ ಕಲ್ಪಿಸಿಕೊಟ್ಟಿದ್ದಾರೆ. ಡಿಕೆಶಿ ಕ್ಷೇತ್ರದ ಜನರಿಗೆ ಟ್ರಾನ್ಸ್‌ಫಾರ್ಮರ್ ಕೊಟ್ಟಿದ್ದಾರೆ. ಕುಮಾರಸ್ವಾಮಿ ಎರಡು ಬಾರಿ ಗೆದ್ದು ಏನು ಕೊಟ್ಟಿದ್ದಾರೆ? ಕಾಂಗ್ರೆಸ್ ಸರ್ಕಾರ ಇನ್ನೂ 3 ವರ್ಷ ಇರುತ್ತೆ. ಸಿಪಿವೈ ಗೆದ್ದರೆ ಹೆಚ್ಚಿನ ಅನುದಾನ ತಂದು ಕ್ಷೇತ್ರ ಅಭಿವೃದ್ಧಿ ಮಾಡ್ತಾರೆ. ಸ್ವಾಭಿಮಾನ ಉಳಿಸಿಕೊಳ್ಳಬೇಕಾದರೆ ಯೋಗೇಶ್ವರ್ ಗೆಲ್ಲಿಸಬೇಕು ಎಂದು ಕರೆ ಕೊಟ್ಟಿದ್ದಾರೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಬಾಡಿಗೆಗೆ ದೊರೆಯುತ್ತದೆ
ರೆಸಾರ್ಟ್ ನಡೆಸಲು ಅನ್ಯಕ್ರಾಂತವಾಗಿರುವ ಸುಂದರವಾದ ಜಾಗ ಹಿನಕಲ್ ರಿಂಗ್ ರಸ್ತೆಯಿಂದ 10 ಕಿ.ಮೀ
AVAILABLE FOR RENT
RESORT PURPOSE CONVERTED BEAUTIFUL LAND
ಸಂಪರ್ಕಿಸಿ : 8105586679

WANTED
COMPUTER TYPIST (Male / Female) FOR ADVOCATE OFFICE
Qualification: Typing - English & Kannada (Kan - Nudi / Baraha) in M.S. Word & Excel / Page Maker
For evening: (Male only). 7.00 pm to 11.00 pm.
Salary: Rs. 8,000/- per month.
7349337469, 9448525072

HOME APPLIANCES SERVICE
ಫ್ರಿಡ್ಜ್, ವಾಶಿಂಗ್ ಮೆಶೀನ್, ಮೈಕ್ರೋ ವೋವೆನ್, ಎಲ್‌ಸಿಡಿ, ಸೋಲಾರ್, ಯುಪಿಎಸ್, ವಾಟರ್ ಪ್ಯೂರಿಫೈಯರ್, ಸೇಲ್ಸ್ ಅಂಡ್ ಸರ್ವೀಸ್, ನಿಮ್ಮ ಮನೆಯ ಹತ್ತಿರ ದೊರೆಯುತ್ತದೆ.
Contact: Srinivas 9379699229

ಸುಸಜ್ಜಿತವಾಗಿ ನಡೆಯುತ್ತಿರುವ
ಇಟ್ಟಿಗೆ ಫ್ಯಾಕ್ಟರಿ
ಬಾಡಿಗೆಗೆ ದೊರೆಯುತ್ತದೆ (ಮಣ್ಣಿನ ಸಮೇತ)
BRICK FACTORY AVAILABLE FOR RENT (WITH SOIL)
ಹಿನಕಲ್ ರಿಂಗ್ ರಸ್ತೆಯಿಂದ 10 ಕಿ.ಮೀ
ಸಂಪರ್ಕಿಸಿ : 9008949783

ಶ್ರೀ ಗೌರೀಶಂಕರ ಟ್ರಾವೆಲ್ಸ್
12-12-24 (9 ದಿನ): ಅಹಮದಾಬಾದ್, ಮಾತೃಗಯಾ, ನಾಗೇಶ್ವರ, ಸೋಮನಾಥ್, ದ್ವಾರಕ, SVP ಸ್ಟ್ಯಾಚ್ಯು, ವಡೋದರ, ಉಜ್ಜಯಿನಿ, ಓಂಕಾರೇಶ್ವರ ಇತ್ಯಾದಿ.
18-1-25 (4 ದಿನ): ಶಿರಡಿ, ಭೀಮಶಂಕರ, ಘೃಷ್ಣೇಶ್ವರ, ಎಲ್ಲೋರ, ತ್ರ್ಯಂಬಕೇಶ್ವರ, ನಾಸಿಕ್ ಇತ್ಯಾದಿ. (ವಿಮಾನ, ಬಸ್, ಊಟ, ರೂಂ)
Mob: 9620002114

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7975101020

HOUSE FOR SALE
NORTH EAST CONSTRUCTIONS "Turn your Dream into Address"
20x30 - 3 BHK, Brand New House
Pay Just 20 lakhs Down Payment & Remaining Easy EMI
Call: 98800 65122, 76193 99919

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ: 7406375196, 9880548596

SITE FOR SALE
20x30, 30x40 (Bank Loan Available) Srirampura Ring Road, Mysore. Contact:
Mob: 8050345574

ಸದ್ಗುರು ಮ್ಯಾರೇಜಸ್
ಒಕ್ಕಲಿಗ ಎಂ.ಎ. ಸುಂದರ ವಧುವಿಗೆ ಬ್ರಾಹ್ಮಣ ಎಂ.ಬಿ.ಎ. ಸುಂದರ ವಧುವಿಗೆ ಲಿಂಗಾಯಿತ BE, MBA ಸುಂದರ ವಧುವಿಗೆ ಕುರುಬ B.Com., ಸರ್ಕಾರಿ ನೌಕರಿ ವಧುವಿಗೆ, ನಾಯಕ BA, LL.B. ಸುಂದರ ವಧುವಿಗೆ ಸೂಕ್ತ ವರಗಳು ಬೇಕು
9448229184 / 7899625268

HOME LOANS
CORPORATION, MUDA, KHB
GRAMATHANA PROPERTY
Site Purchase, Site Construction
House Purchase
Site Mortgage, house Mortgage
Contact: 9108416410

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI / PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ + ಓಟಿ, 15200 – 86,000.
7411565140, 7892046990

SBIT TRAVELS
Group Tours
DUBAI 4N5D
Dec: 27| Jan:20, 22, 30, |Feb: 5, 12,20,27, Mar: 5, 9, 12, 20, 27
Baku 5N6D
|Dec:1, 3, 6 | Jan:9, 13, 20, 29 | Apr:4, 13, 20, 30, | May: 2, 14, 20, 27
(Saraswathipuram, Mysuru) 9343524127

SUMP & TANK CLEANING
Mob: 9606838940

JOBNET
ಮೊಬೈಲ್‌ನಲ್ಲಿ ಕೆಲಸ
ಮನೆಯಲ್ಲೆ ಕುಳಿತು ಮೊಬೈಲ್ ಮೂಲಕ ಫಾರಂ ಫಿಲ್ಲಿಂಗ್ ಮಾಡಿ ಪ್ರತಿ ತಿಂಗಳಿಗೆ 10,000 ರಿಂದ 20,000 ಸಂಪಾದಿಸಿ
9731891409

ಬೋಳು ತಲೆಯ ಸಮಸ್ಯೆಯೇ?


ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ವಾರ್ಥತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

FOR SALE
1. Properties at Kuvempu Nagar Starting @ 35L
2. 20x30 Site @Vijaya Nagar 4th stg
3. 14x100 Old Hs @ Ramavilas Rd
4. Old Hs @ Krishnamurthy Puram
5. Properties For Sale at Vidyaranyapuram
6. 20x30 Site Near SBM Lyt, Bogadhi
7. Ready to Move Apartments @ Hebbal
8. Commercial Properties @ Saraswathi Puram, Kuvempu Ngr & Hunsur Rd
PRAKRUTHI PROPERTIES
95386 90359, 90359 90359

ಶೀಘ್ರ ವಿವಾಹಕ್ಕಾಗಿ ಸಂಪರ್ಕಿಸಿ ಮದುವೆಯಾಗಲಿಲ್ಲವೇ?
ವಧು–ವರರ ಹುಡುಕಾಟದಲ್ಲಿದ್ದೀರಾ? ಚಿಂತಿಸಬೇಡಿ. ಶೀಘ್ರ ವಿವಾಹಕ್ಕಾಗಿ ಎಲ್ಲಾ ಜಾತಿಯ ವಧು–ವರರ ವೈವಾಹಿಕ ಸಂಬಂಧದ ಸೂಕ್ತವಾದ ಆಯ್ಕೆಗೆ ಸಂಪರ್ಕಿಸಬಹುದು. ಎರಡನೇ ವಿವಾಹಕ್ಕಾಗಿ ವಿಧವೆ, ವಿಧುರ, ವಿಚ್ಛೇದಿತರು, ಜಾತಿಯ ಅಭ್ಯಂತರವಿಲ್ಲದವರು ಕೂಡಾ ಎರಡನೇ ವಿವಾಹಕ್ಕಾಗಿ ಸಂಪರ್ಕಿಸಬಹುದು. ಹೆಸರು ನೋಂದಾಯಿಸಿ.
M: 9483385177

ಬೇಕಾಗಿದ್ದಾರೆ
ವಿಜಯನಗರದಲ್ಲಿ ಹೋಟೆಲ್‌ಗೆ ಸೆಕ್ಯೂರಿಟಿ ಗಾರ್ಡ್‌ಗಳು ಹೌಸ್‌ಕೀಪಿಂಗ್ ಮಹಿಳೆಯರು ಹೌಸ್‌ಕೀಪಿಂಗ್ ಹುಡುಗರು ಮತ್ತು ಕ್ಲೀನಿಂಗ್ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ. ವಿಜಯನಗರ ಸುತ್ತ ಮುತ್ತ ಇರುವವರಿಗೆ ಆದ್ಯತೆ.
9353646312 / 8792483926

Wanted House
Rent / Lease 3 BHK
Kuvempunagar, Ramakrishna Nagar, Saraswathipuram, Jayanagar, Chamundipuram
Call: 99804 11288

ಕರ್ನಾಟಕದಾದ್ಯಂತ Full time/part time data entry, sms sending, writing, ಹೆಸರಾಂತ MNC ಕಂಪನಿ, ಆಫೀಸ್ ಕೆಲಸಕ್ಕೆ (Receptionist, Data Entry Account) ಯುವಕ / ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+OT [Food and Room Free]. 18800/–68000/– WhatsApp or call
7353049700 / 7795704282

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 6360485921

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ಸ್: 10th / PUC (ಹೂಟಗಳ್ಳಿ, ಬೆಳವಾಡಿ, ಹಿನಕಲ್, ಕೆ.ಆರ್.ಎಸ್)
ಸೆಕ್ಯೂರಿಟಿ ಸೂಪರ್‌ವೈಸರ್ಸ್: PUC/Any Degree (ಕೆ.ಆರ್.ಎಸ್, ಬೆಳಗೊಳ)
ಸೆಕ್ಯೂರಿಟಿ ಲೇಡಿಗಾರ್ಡ್ಸ್: 10th / PUC (ಕೆಆರ್.ಎಸ್)
9739166772 / 9880419847

ವಧು-ವರರಿಗೆ ಸಂಪರ್ಕಿಸಿ
ಒಕ್ಕಲಿಗ, ಕುರುಬ, ನಾಯಕ ಲಿಂಗಾಯತ, ಹಾಗೂ ಎಲ್ಲಾ ಜಾತಿಯ ವಧು–ವರರು, ವಿಚ್ಛೇದಿತರು, ವಿಧುರ– ವಿಧವೆಯರು
9980273659 9731066259

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವೇ ಬಿಡಿಸಿ ಉಳಿದ ಹಣವನ್ನು ತಕ್ಷಣ ನೀಡುತ್ತೇವೆ. ಒಂದು ಗ್ರಾಂ ಚಿನ್ನಕ್ಕೆ ರೂ. 7600 (24 CT).
Mob: 9108146123

ಕೆಲಸಕ್ಕೆ ಬೇಕಾಗಿದ್ದಾರೆ
Non-Veg (ನಾನ್‌ವೆಜ್) ಅಡುಗೆ ಕೆಲಸ ಮಾಡಲು ಅನುಭವವುಳ್ಳ ನುರಿತ, ಅಡುಗೆ ಭಟ್ಟರು ಕೆಲಸಕ್ಕೆ ಬೇಕಾಗಿದ್ದಾರೆ. ಕೂಡಲೇ ಸಂಪರ್ಕಿಸಿ: ಸ್ಥಳ: K.V.K. ಫಾರಂ, ಬೈಪಾಸ್ ಸತ್ತಿ ರಸ್ತೆ, ಚಾಮರಾಜನಗರ.
9844474411, 9482197688

ಕೆಲಸಕ್ಕೆ ಬೇಕಾಗಿದ್ದಾರೆ
ಶಾಮಿಯಾನ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ, ಹುಡುಗರು ಮತ್ತು ಟಾಟಾ ಎಸ್ ಗಾಡಿ ಓಡಿಸುವವರು ಬೇಕಾಗಿದ್ದಾರೆ. ಆಕರ್ಷಕ ಸಂಬಳ. ಸ್ಥಳ: ಹಿನಕಲ್ ಮೈಸೂರು. ಸಂಪರ್ಕಿಸಿ:
9945859995

ರೂ. 2000 ಕ್ಕೆ
ದಪ್ಪನೆಯ ಡಬಲ್ ಹತ್ತಿ ಹಾಸಿಗೆ, 2 ದಿಂಬು, ದಿಂಬಿನ ಕವರ್, ಹಾಸಲು ಬೆಡ್‌ಶೀಟ್, ಸೂಟ್‌ಕೇಸ್ ರಗ್ಗು ಎಲ್ಲಾ ಸೇರಿ 2000/– ಮಾತ್ರ
Mob: 8884179981

ತಕ್ಷಣ ಬೇಕಾಗಿದ್ದಾರೆ
ಮೇಟಗಳ್ಳಿ ಮತ್ತು ಹೆಬ್ಬಾಳ್ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC ಮತ್ತು ಮೇಲ್ಪಟ್ಟು. ಸಂಬಳ: 18,000 + W/o (8 hrs). ಊಟ, ತಿಂಡಿ ಸೌಲಭ್ಯಗಳು ಇರುತ್ತದೆ. ಸಂಪರ್ಕಿಸಿ:
9880727819, 9620777819

WANTED
for DELHIVERY ಮೈಸೂರ್ (ಆಲನಹಳ್ಳಿ) Job Role: Delivery Executive (Delivery Boy). ಸಂಬಳ: ಮಾಸಿಕ ಪಾವತಿ & ಪರ್ ಶಿಪ್‌ಮೆಂಟ್ ಪಾವತಿ. 15,000 – 25,000 ರೂ. + ಪೆಟ್ರೋಲ್ ಭತ್ಯೆ, ಮೊಬೈಲ್ ರೀಚಾರ್ಜ್ + ESI & PF ಸೌಲಭ್ಯಗಳು. ಅಗತ್ಯ: ಬೈಕ್ ಮತ್ತು ಸ್ಮಾರ್ಟ್ ಮೊಬೈಲ್
HURRY UP & JOIN TODAY.
9742293343, 9731254908

WANTED
ಮೈಸೂರಿನ ಹೆಸರಾಂತ MNC ಕಂಪನಿಗಳಿಗೆ 7th, 10th, PUC, ITI, Diploma, Any Degree, MBA, M.Com. ಆದವರು Q/C checking, packing, helper, production, helper, machine operator, Data entry, Telecalling, Cashier, Billing, Admin, HR Assistant, Drivers ಬೇಕಾಗಿದ್ದಾರೆ. ESI, PF + OT ನೊಂದಿಗೆ ಸಂಬಳ 16000 ರಿಂದ 46,000. ಸಂಪರ್ಕಿಸಿ:
9036509884, 8951413287

ಬೇಕಾಗಿದ್ದಾರೆ
ಮೈಸೂರಿನ ಬನ್ನಿಮಂಟಪದಲ್ಲಿರುವ ಸೆಂಟ್ ಜೋಸೆಫ್ ಆಸ್ಪತ್ರೆಯಲ್ಲಿ ಕೆಲಸ ನಿರ್ವಹಿಸಲು ಸ್ವಚ್ಛತಾ ಕೆಲಸಗಾರರು (ಹೌಸ್‌ಕೀಪಿಂಗ್) ಬೇಕಾಗಿದ್ದಾರೆ. ಆಕರ್ಷಕ ವೇತನವಿರುತ್ತದೆ. ESI, PF, W/o (ಪುರುಷರು) Shift ಇರುತ್ತದೆ. ಸಂಪರ್ಕಿಸಿ: ಕರ್ನಾಟಕ ಸೆಕ್ಯೂರಿಟಿ ಏಜೆನ್ಸಿ, ನಂ. 513, ಗಾಯತ್ರಿ ಚಿತ್ರಮಂದಿರ ಹತ್ತಿರ, ಕೆ.ಆರ್. ಮೊಹಲ್ಲಾ, ಮೈಸೂರು
Ph: 0821-4247385

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

WANTED
ಫರ್ನಿಷಿಂಗ್ ಅಂಗಡಿಯಲ್ಲಿ Sales Bill and Telecaller ಕೆಲಸಕ್ಕೆ 1 year experience ಇರುವವರು ಮಹಿಳೆಯರು ಮತ್ತು ಹುಡುಗರು ಬೇಕಾಗಿದ್ದಾರೆ. Language: Hindi & Kannada compulsory. Address: Akbar Road, Near Ashoka Road.
Mob: 9916514950

ಬೇಕಾಗಿದ್ದಾರೆ
ಮೈಸೂರಿನಲ್ಲಿ ನೂತನವಾಗಿ ಪ್ರಾರಂಭವಾಗಿರುವ Action World Group of Company ಯಲ್ಲಿ 259 ವಿವಿಧ ಹುದ್ದೆಗಳಿಗೆ SSLC (Pass), PUC, Any Degree, ITI, Dip. ಆಗಿರುವಂತಹ ಕನ್ನಡ ಬಲ್ಲ ಯುವಕ ಯುವತಿಯರು ಬೇಕಾಗಿದ್ದಾರೆ. ತಿಂಗಳಿಗೆ: 21600 ರಿಂದ 28,000. ವಯೋಮಿತಿ: 18 ರಿಂದ 32 ವರ್ಷಗಳು. (ಉಚಿತ ಊಟ । ವಸತಿ । Promotion).
ಸಂಪರ್ಕಿಸಿ: ಡಿಂಪಲ್
7406821955 / 7349699460

ಬೇಕಾಗಿದ್ದಾರೆ
ಕೃಷಿಕ್ ಸರ್ವೋದಯ ಫೌಂಡೇಷನ್ (ರಿ), ಮೈಸೂರು ಇಲ್ಲಿ ಕಛೇರಿ ವ್ಯವಸ್ಥಾಪಕ ಹಾಗೂ ಲೆಕ್ಕನಿರ್ವಾಹಕರಾಗಿ ಹುದ್ದೆಗೆ ಪದವಿ, ಕಂಪ್ಯೂಟರ್ ಜ್ಞಾನ (ಟ್ಯಾಲಿ) ಇದ್ದು, ನಿವೃತ್ತಿ ಹೊಂದಿದವರಿಗೆ ಆದ್ಯತೆ. ಸಂಪರ್ಕಿಸಿ:
Mob: 8296031570
Email: ksf.mysorebranch@gmail.com

ಬೇಕಾಗಿದ್ದಾರೆ
ಹೌಸ್‌ಕೀಪಿಂಗ್ ಸ್ಟಾಫ್ (4 ಹುದ್ದೆಗಳು)
ಸಂಬಳ: 12,000 ರಿಂದ 15,000
ದಿ ಕೋರಮ್ ಹೋಟೆಲ್
2257/1, ಬಿ–1, ವಿನೋಭಾ ರಸ್ತೆ, ಮೈಸೂರು–570 005. ಸಂಪರ್ಕಿಸಿ:
Mob: 9620274630

WANTED
ವಿಜಯನಗರ ರೈಲ್ವೆ ಬಡಾವಣೆ ಗಣಪತಿ ದೇವಸ್ಥಾನಕ್ಕೆ ಅರ್ಚಕರು ಬೇಕಾಗಿದ್ದಾರೆ.
ಸಂಪರ್ಕಿಸಿ: Mob: 7204401125

ವಾರ್ಡನ್ ಬೇಕಾಗಿದ್ದಾರೆ
ಬೆಂಗಳೂರು ಮತ್ತು ಕೋಲಾರದ ಇಂಜಿನಿಯರಿಂಗ್ ಕಾಲೇಜಿಗೆ ವಾರ್ಡನ್ ಬೇಕಾಗಿದ್ದಾರೆ. ಬೆಂಗಳೂರಿಗೆ ಕನ್ನಡ, ಹಿಂದಿ, ಅಥವಾ ಇಂಗ್ಲೀಷ್ ಮಾತನಾಡಲು ಬರಬೇಕು. ಕೋಲಾರಕ್ಕೆ ಕನ್ನಡ, ಹಿಂದಿ, ಮಲಯಾಳಂ ಭಾಷೆ ಮಾತನಾಡಲು ಬರಬೇಕು. ಸಂಪರ್ಕಿಸಿ:
Mob: 8088419322

ತಕ್ಷಣವೇ ಬೇಕಾಗಿದ್ದಾರೆ
ಮೈಸೂರು, ಹೆಬ್ಬಾಳಿನ ಕಂಪನಿಯಲ್ಲಿ ಕೆಲಸ ಮಾಡಲು ಟೈಲರುಗಳು. ಹೆಲ್ಪರ್‌ಗಳು ಹಾಗೂ ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ. ತಕ್ಷಣವೇ ಸಂಪರ್ಕಿಸಿ.
8105249880 / 7795285485

ಬೇಕಾಗಿದ್ದಾರೆ
ಗುಡ್ ವಿಲ್ ಫೌಂಡೇಷನ್ ಸೇವಾ ಸಂಸ್ಥೆ ಯೊಂದರಲ್ಲಿ ಪುರುಷ ಅಭ್ಯರ್ಥಿ WARDEN ಕೆಲಸಕ್ಕೆ ಬೇಕಾಗಿದ್ದಾರೆ. ಉಚಿತ, ಊಟ ಹಾಗೂ ವಸತಿ ಸೌಲಭ್ಯವಿರುತ್ತದೆ. ಸ್ಥಳ: (ಎನ್‌ಪಿಎಸ್ ಸ್ಕೂಲ್‌ಹತ್ತಿರ), ವಿಜಯನಗರ, ಮೈಸೂರು. ಸಂಪರ್ಕಿಸಬಹುದಾದ ಸಂಖ್ಯೆ.
7795708156 / 9071107156

ಚಾಮುಂಡೇಶ್ವರಿ ಮ್ಯಾರೇಜ್ ಬ್ಯೂರೋ
ಎಲ್ಲಾ ಜಾತಿಯ ವಧು–ವರರು, ವಿಧುರ–ವಿಧವೆಯರು, ವಿಚ್ಛೇದಿತರು, ವೈವಾಹಿಕ ಮಾಹಿತಿಗಾಗಿ ಸಂಪರ್ಕಿಸಿ. BE or PUC ವಧುಗಳು ಬೇಕು. ದೇವಾಂಗ ಹುಡುಗಿಯರು ಬೇಕು. Engg. ವರೆಗೆ ವರಗಳು ನಮ್ಮಲ್ಲಿ ಇದೆ.
Mob: 8951241381

SITE FOR SALE
Vidya Shankara Layout, 30x50
R.T. Nagar 30x30
Kaveri Layout 30x40
Mob: 9945215789
Buyers and sellers welcome

WANTED
Female Receptionist
For Natural Hair Fixing Centre, Mysuru.
Mob: 7625026662

ಕೆಲಸಕ್ಕೆ ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ
Age: 18 ರಿಂದ 50
ಸಂಬಳ: 15000 ರಿಂದ 18000
7353332335 9591406868

SITE FOR SALE
Yesh Serenity - Phase 3, Gungralchatra Site No. 14, 30x40 East face Price 1675, slightly negotiable. Sale from direct owner. Contact:
Mob: 9663340006

REQUIRED
for a reputed distributing company @ Hebbal Industrial Area
Delivery Boys - 3 Nos.
Qualification: SSLC, PUC or Degree pass or fail. Must having DL.
Mob: 9972029007

ಟೈಲ್ಸ್ ಆ್ಯಸಿಡ್ ವಾಷ್
ಟೈಲ್ಸ್ ಕೆಲಸ & ನಲ್ಲಿ ಕೆಲಸ ಮಾಡಿಕೊಡಲಾಗುವುದು.
Mob: 9606145228

ದೀಪಾವಳಿ ಹಬ್ಬದ ಪ್ರಯುಕ್ತ
1) EASTMAN- 10 Years Warranty 150 AH BTY-10.50 V.A SW UPS Only- 18.000/-
2) 200 A.H BTY-120000VASWUPS Only 23,000/-
Mob: 7676899663

ಬೇಕಾಗಿದ್ದಾರೆ
ಪುರುಷ ಸಸ್ಯಾಹಾರಿ ಅಡುಗೆ ತಯಾರಕರು ESI, PF ಮತ್ತು ವಸತಿ ಸೌಲಭ್ಯವಿರುತ್ತದೆ. ವಿಕ್ರಂ ಕಾಲೇಜ್ ಆಫ್ ನರ್ಸಿಂಗ್, ಮೈಸೂರು
8310846772, 9535096161

28x40, ಕಾರ್ನರ್ ಸೈಟು ಮಾರಾಟಕ್ಕಿದೆ
16 ಲಕ್ಷದ 50 ಸಾವಿರಗಳು DTCP 'A' ಖಾತೆ GSS ಲೇಔಟ್, TVS ಫ್ಯಾಕ್ಟರಿ ತಳೂರು ಹತ್ತಿರ, ಮೈಸೂರು
9972557534

ಸೈಟ್ ಮಾರಾಟಕ್ಕಿದೆ
20x30, 30x40, 60x40, 60x60
DTCP and MUDA Approved Site Yelwala ಸುತ್ತ ಮುತ್ತ
Ganesh: 8660653229
Manju: 9886422943

ಒಂದಲ್ಲ ಎರಡಲ್ಲ 200ನೇ BATCH NOV 5 ರಂದು
ಕೇವಲ 5 ದಿನಗಳಲ್ಲಿ ENGLISH ಕಲಿಸದಿದ್ದಲ್ಲಿ MONEY BACK
8147132702

ಬೇಕಾಗಿದ್ದಾರೆ
ಕನ್ನಡ ಮತ್ತು ಹಿಂದಿ ಭಾಷೆ ಬರುವ 35 ವರ್ಷ ಒಳಗಿನ ಮಹಿಳೆಯರು ಕೆಲಸಕ್ಕೆ ಬೇಕಾಗಿದ್ದಾರೆ. ಆಕರ್ಷಕ ಸಂಬಳ ಮತ್ತು ಪ್ರೋತ್ಸಾಹ ಧನ ನೀಡಲಾಗುವುದು. ಲೈಫ್‌ಗೈನ್ ಮೆಡಿಕೇರ್ ಇಂಡಿಯಾ ಪ್ರೈ.ಲಿ.,
8668958605, 9702952299

ಬೇಕಾಗಿದ್ದಾರೆ
ಮೈಸೂರಿನಲ್ಲಿರುವ ಲಾಡ್ಜ್‌ವೊಂದಕ್ಕೆ ಕಸ ಗುಡಿಸಲು, ಒರೆಸುವುದಕ್ಕಾಗಿ ಮಹಿಳಾ ಕೆಲಸಗಾರರು ಬೇಕಾಗಿದ್ದಾರೆ ಸಮಯ: ಬೆಳಿಗ್ಗೆ 9.30 ರಿಂದ ಸಂಜೆ 5ರ ತನಕ ವೇತನ: 11,500 + ಊಟ ನೀಡಲಾಗುವುದು.
Mob: 97401-29291

ನಿವೇಶನ ಮಾರಾಟಕ್ಕಿದೆ
ವಾಜಮಂಗಲ ಗ್ರಾಮದ ಹತ್ತಿರ ಮೂಡ ಅನುಮೋದಿತ ಬಡಾವಣೆ ಅಳತೆ 40X40, ಪಶ್ಚಿಮ ಮುಖ, ತಕ್ಷಣ ಮನೆ ನಿರ್ಮಿಸಲು ಸೂಕ್ತವಾದ ನಿವೇಶನ, ಬೆಲೆ ಚದರಡಿಗೆ ರೂ.2,500/– ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
ಮೈಸೂರು ಈಸ್ಟ್ ಪ್ರಾಪರ್ಟೀಸ್
9535830530

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಮೈಸೂರು ಮಿತ್ರ ಸೋಮವಾರ 28 ಅಕ್ಟೋಬರ್ 2024

ಬುದ್ಧ ಮನುಷ್ಯತ್ವ, ಪ್ರೀತಿ, ದಯೆ, ಕರುಣೆಯ ಸಂಕೇತ

• ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಭಿಪ್ರಾಯ • ಕೂಡ್ಲೂರಲ್ಲಿ ನಳಂದ ಬುದ್ಧ ವಿಹಾರ ಲೋಕಾರ್ಪಣೆ

ತಿ.ನರಸೀಪುರ, ಅ.27– ಬುದ್ಧ ಎಂದರೆ ಪ್ರಜಾಪ್ರಭುತ್ವ, ಮನುಷ್ಯತ್ವ, ಪ್ರೀತಿ, ದಯೆ, ಕರುಣೆ ಹಾಗೂ ಸಾಮರ್ಥ್ಯದ ಸಂಕೇತ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅಭಿಪ್ರಾಯಪಟ್ಟರು.

ತಾಲೂಕಿನ ವರುಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕೂಡ್ಲೂರು ಗ್ರಾಮದಲ್ಲಿ ಭಾನುವಾರ ತ್ರಿವೇಣಿ ನಗರದ ಗೌತಮ ಬುದ್ಧ ಎಜುಕೇಶನಲ್ ಅಂಡ್ ಕಲ್ಚರಲ್ ಟ್ರಸ್ಟ್ ವತಿಯಿಂದ ನೂತನವಾಗಿ ನಿರ್ಮಿಸಿರುವ ನಳಂದ ಬುದ್ಧ ವಿಹಾರ ಲೋಕಾರ್ಪಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮನುಷ್ಯ ಹುಟ್ಟಿದ ಮೇಲೆ ಧರ್ಮ ಹುಟ್ಟಿದೆ. ಆ ಧರ್ಮವನ್ನು ನಾವು ಮಾಡಿಕೊಂಡಿದ್ದೇವೆ. ಧರ್ಮವು ನಮ್ಮ ನಡೆ–ನುಡಿ, ಆಚಾರ–ವಿಚಾರಗಳು, ಜೀವನ ಶೈಲಿ, ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ನಿರ್ಮಾಣವಾಗಿದೆ. ಧರ್ಮದಿಂದ ಸಾಂಸ್ಕೃತಿಕ ಚಿಂತನೆಗಳು ಬಂದಿಲ್ಲ. ಸಾಂಸ್ಕೃತಿಕ ಚಿಂತನೆಗಳಿಂದ ಧರ್ಮ ರೂಪಿಸಲ್ಪಟ್ಟಿದೆ. 2,600 ವರ್ಷಗಳ ಹಳೆಯ ಬೌದ್ಧ ಧರ್ಮವು ಬದುಕಿನ ಮೌಲ್ಯಗಳನ್ನು, ಜೀವನೋಪಾಯದ ಮಾರ್ಗಗಳನ್ನು ಮತ್ತು ಸತ್ಯದ ಅರಿವನ್ನು ಮೂಡಿಸಿದೆ ಎಂದು ಹೇಳಿದರು.

ಜಗತ್ತಿನ ಶ್ರೇಷ್ಠ ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೀನ್ ನಾನು ಯಾವ ಧರ್ಮವನ್ನು ಪಾಲಿಸುವುದಿಲ್ಲ. ಪಾಲಿಸುವುದೇ ಆದರೆ ಬೌದ್ಧ ಧರ್ಮವನ್ನು ಮಾತ್ರ ಪಾಲಿಸುತ್ತೇನೆ. ಏಕೆಂದರೆ ಬೌದ್ಧ ಧರ್ಮ ವಾಸ್ತವಿಕ ಅಂಶಗಳ ಮಾಹಿತಿಯನ್ನು ಜಗತ್ತಿಗೆ ನೀಡಿದೆ ಎಂದು ಹೇಳಿದರೆ, ಸ್ವಾಮಿ ವಿವೇಕಾನಂದರು ನಾನು ಬುದ್ಧರ ಸೇವಕರ ಸೇವಕ ಎಂದು ಹೇಳುವುದರ ಹಿಂದೆ ಬೌದ್ಧ ಧರ್ಮದ ಮಹತ್ವ ಎದ್ದು ಕಾಣುತ್ತದೆ ಎಂದು ಅಭಿಪ್ರಾಯಪಟ್ಟರು.

ಜಗತ್ತಿನಲ್ಲಿ ಸಮಾಜ ಸುಧಾರಣೆ ವ್ಯಕ್ತಿಯಾಗಿ ಬುದ್ಧ ವೈಜ್ಞಾನಿಕ ಹಾಗೂ ವೈಚಾರಿಕತೆಯ ಸಮತಾವಾದದ ನೆಲೆಗಟ್ಟಿನಲ್ಲಿ ಸಮೃದ್ಧ ಭಾರತದ ನಿರ್ಮಾಣಕ್ಕೆ ಮುನ್ನುಡಿಯಾಗಿದ್ದಾರೆ ಎಂದರು.

ಅಂಬೇಡ್ಕರ್ ಅವರು ಹಿಂದೂ ಧರ್ಮದಲ್ಲಿದ್ದ ಅಸ್ಪೃಶ್ಯತೆ, ಅಸಮಾನತೆ, ಅಸಹನೆ,



ನಳಂದ ಬುದ್ಧ ವಿಹಾರ ಲೋಕಾರ್ಪಣೆ ಕಾರ್ಯಕ್ರಮವನ್ನು ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಉದ್ಘಾಟಿಸಿದರು.

ಲಿಂಗಬೇಧ ಸರಿಪಡಿಸಲು ಪ್ರಯತ್ನಿಸಿ ಅದು ಸಾಧ್ಯವಾಗದ ಕಾರಣ ಬೌದ್ಧ ಧರ್ಮ ಸ್ವೀಕರಿಸುತ್ತಾರೆ. ಬಳಿಕ ಕಠ್ಮಂಡುವಿನಲ್ಲಿ ನಡೆದ ಬೌದ್ಧ ಸಮ್ಮೇಳನದಲ್ಲಿ ಭಾಗ ವಹಿಸಿ ಬೌದ್ಧ ಧರ್ಮದ ಸಂದೇಶಗಳನ್ನು ಪ್ರಚಾರಪಡಿಸುವುದೇ ನನ್ನ ಮುಖ್ಯ ಗುರಿ ಎನ್ನುವ ಅವರು, ತಮ್ಮ ಸಂಪಾದನೆಯಲ್ಲಿ ಅಲ್ಪ ಪ್ರಮಾಣವನ್ನು ಬೌದ್ಧ ಧರ್ಮ ಪ್ರಚಾರಕ್ಕೆ ಬಳಸುವಂತೆ ಜನರಿಗೆ ಸಲಹೆ ನೀಡುತ್ತಾರೆ ಎಂದರು.

ಅಂಬೇಡ್ಕರ್ ಅವರು ಪ್ರಜಾಪ್ರಭುತ್ವ ಎಂದರೆ ಜನರಿಂದ, ಜನರಿಗೋಸ್ಕರ, ಜನರಿಗಾಗಿ ಎಂಬುದನ್ನು ಕೂಡ ಬ್ರಿಟಿಷರಿಗೆ ತಿಳಿಸುತ್ತಾರೆ. ಅಂಬೇಡ್ಕರ್ ವಾದಿಗಳು ಬುದ್ಧನ ಅನುಯಾಯಿಗಳು ಎಂಬುದು ನಮಗೆ ತುಂಬಾ ಹೆಮ್ಮೆ ಎಂದರು.

ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಶಾಸಕ ದರ್ಶನ್, ವಿಧಾನ ಪರಿಷತ್ ಸದಸ್ಯ ಡಾ.ತಿಮ್ಮಯ್ಯ, ಬೌದ್ಧ ಧರ್ಮದ ಬಂತೆ ಬುದ್ಧ ಪ್ರಕಾಶ್, ಮಹಾಬೋಧಿ ಮಿಷನ್, ತಮಿಳುನಾಡು ಬಂತೆ ಬೋಧಿದತ್ತ, ನಳಂದ ಬುದ್ಧ ಮಹಾವಿಹಾರ ಬಂತೆ ಡಾ. ಕಲ್ಯಾಣಸಿರಿ,

> ಬುದ್ಧ ಒಂದು ಕಡೆ ನಾನು ದೇವರಲ್ಲ. ದೇವರ ಪ್ರತಿನಿಧಿಯೂ ಅಲ್ಲ. ಪ್ರವಾದಿಯೂ ಅಲ್ಲ. ನಾನು ಕೇವಲ ಸಾಮಾನ್ಯ ಮನುಷ್ಯ. ನಾನು ಬದುಕಿನ ಸತ್ಯ ಹೇಳುತ್ತಿದ್ದೇನೆ. ನಾನು ಹೇಳುವ ಮಾತು ಸರಿ ಇದ್ದರೆ ಅಳವಡಿಸಿಕೊಳ್ಳಿ ಎಂದು ಆಯ್ಕೆಯನ್ನು ನಮಗೆ ಬಿಟ್ಟಿದ್ದರು. ಈಗ ಇಂತಹ ಶ್ರೇಷ್ಠ ಧರ್ಮ ಮನುವಾದದ ಕಪಿಮುಷ್ಠಿಯಲ್ಲಿ ನಲುಗಿ ನಾಶವಾಗುತ್ತಿದೆ. ಪ್ರೀತಿ, ಕರುಣೆ, ಸಮಾನತೆ ಬಯಸುವವರೆಲ್ಲಾ ಒಟ್ಟಾಗಿ 2600ರಲ್ಲೇ ಸಂಸತ್ತಿನ ಕಲಾಪಗಳನ್ನು ತಿಳಿಸಿದಂತಹ ಬುದ್ಧನ ಧಮ್ಮದ ಪ್ರಚಾರ ಅನುಕರಣೆ ಮಾಡುವ ಮೂಲಕ ಧರ್ಮ ಕಾಪಾಡಲು ಮುಂದಾಗಬೇಕಿದೆ.
>
> – ಡಾ.ಹೆಚ್.ಸಿ.ಮಹದೇವಪ್ಪ, ಜಿಲ್ಲಾ ಉಸ್ತುವಾರಿ ಸಚಿವ.

ವಿಶ್ವಮೈತ್ರಿ, ಬಂತೆ ಸುಗತ ಪಾಲ, ಬಂತೆ ಬುದ್ಧರತ್ನ, ಬಂತೆ ಕಮಲರತ್ನ, ಮಾತಾಜಿ ಬುದ್ಧಮ್ಮ ಬಿಕ್ಖುಣಿ, ನಾಗಸೇನ, ಮಾತಾಜಿ ಗೌತಮಿ ಬಿಕ್ಖುಣಿ, ಸಾರನಾಥ ಬಂತೇಜಿ, ನಳಂದ ಬುದ್ಧವಿಹಾರ ಬೋಧಿರತ್ನ ಬಂತೇಜಿ, ದಿವ್ಯ ಸಾನಿಧ್ಯ ವಹಿಸಿದ್ದರು.

ಜಿಪಂ ಮಾಜಿ ಅಧ್ಯಕ್ಷ ಸಿದ್ದಾರ್ಥ, ಮಾಜಿ ಸದಸ್ಯರಾದ ಮಹಾದೇವ್, ಶಶಿಕಲಾ ನಾಗರಾಜ್, ಎಪಿಎಂಸಿ ಮಾಜಿ ಅಧ್ಯಕ್ಷ ಎನ್.ಅನಿಲ್ ಕುಮಾರ್, ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಕೆಂಪಯ್ಯನಹುಂಡಿ ಮಹದೇವಣ್ಣ, ಪುರಸಭಾ ಸದಸ್ಯ ಸಿ.ಪ್ರಕಾಶ್, ಕಿರಗಸೂರು ಗ್ರಾಪಂ ಅಧ್ಯಕ್ಷ ನಿಂಗರಾಜು, ತಾಲೂಕು ಕುರುಬರ ಸಂಘದ ಅಧ್ಯಕ್ಷ ಮನ್ನೇಹುಂಡಿ ಮಹೇಶ್, ಸೋಸಲೆ ಮಹದೇವಸ್ವಾಮಿ, ತಾಪಂ ಮಾಜಿ ಸದಸ್ಯರಾದ ಗಣೇಶ್, ನರಸಿಂಹ ಮಾದನಾಯ್ಕ, ತುಂಬಲ ರಾಮಣ್ಣ, ಟ್ರಸ್ಟ್ ಕಾರ್ಯದರ್ಶಿ ಬಿ.ಆರ್.ಪುಟ್ಟಸ್ವಾಮಿ, ಸಹ ಕಾರ್ಯದರ್ಶಿ ಎನ್.ಲಿಂಗಪ್ಪಾಜಿ, ಖಜಾಂಚಿ ಸೀನಪ್ಪ, ನಿರ್ದೇಶಕರಾದ ಮರಿಮಾದಯ್ಯ, ಪುಟ್ಟರಾಜು, ಶಿವಣ್ಣ, ಇಂದ್ರಮ್ಮ, ಚಂದ್ರಕಲಾ ಸೇರಿದಂತೆ ಗೌತಮ ಬುದ್ಧ ಎಜುಕೇಷನಲ್ & ಕಲ್ಚರಲ್ ಟ್ರಸ್ಟ್ ಸದಸ್ಯರು ಕಾರ್ಯಕ್ರಮದಲ್ಲಿ ಹಾಜರಿದ್ದರು.

ಬಿಜೆಪಿ ಸದಸ್ಯತ್ವ ಅಭಿಯಾನಕ್ಕೆ ಚಾಲನೆ



ಹುಣಸೂರು, ಅ.27– ತಾಲೂಕಿನ ಗಾವಡಗೆರೆ ಹೋಬಳಿ ಮಹಾಶಕ್ತಿ ಕೇಂದ್ರದಲ್ಲಿ ಬಿಜೆಪಿ ಸದಸ್ಯತ್ವ ಅಭಿಯಾನಕ್ಕೆ ಗಾವಡಗೆರೆ ಹೋಬಳಿ ಉಸ್ತುವಾರಿ ದೇವರಹಳ್ಳಿ ಸೋಮಶೇಖರ್ ಚಾಲನೆ ನೀಡಿದರು.

ಹೋಬಳಿ ವ್ಯಾಪ್ತಿಯ ಮುಳ್ಳೂರು, ಜಾಬಗೆರೆ, ಬಿಳಿಗೆರೆ, ಜಿಪಂ ವ್ಯಾಪ್ತಿ ಮಹಾಶಕ್ತಿ ಕೇಂದ್ರದ ಪ್ರತಿಯೊಂದು ಬೂತ್ ಭೇಟಿ ನೀಡಿ ಹೆಚ್ಚು ಸದಸ್ಯತ್ವ ಮಾಡಿಸುವಂತೆ ಕಾರ್ಯಕರ್ತರಿಗೆ ಕರೆ ನೀಡಿದರು.

ಈ ವೇಳೆ ತಾಲೂಕು ಬಿಜೆಪಿ ಪ್ರಧಾನ ಕಾರ್ಯದರ್ಶಿ ಸತೀಶ್, ಕಾರ್ಯದರ್ಶಿ ನಾರಾಯಣ್, ಗಾವಡಗೆರೆ ಮಹಾಶಕ್ತಿ ಕೇಂದ್ರದ ಅಧ್ಯಕ್ಷ ನಾಗೇಂದ್ರ, ಪಕ್ಷದ ಮುಖಂಡ ಶಿವು ಹಾಗೂ ಕಾರ್ಯಕರ್ತರು ಹಾಜರಿದ್ದರು.

ಹೈಟೆಕ್ ಶೌಚಾಲಯ ನಿರ್ಮಾಣಕ್ಕೆ ಭೂಮಿ ಪೂಜೆ



ಹೈಟೆಕ್ ಶೌಚಾಲಯ, ಸ್ನಾನಗೃಹ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಲಾಯಿತು.

ನಂಜನಗೂಡು, ಅ.27– ನಗರದ ಶ್ರೀಕನಕದಾಸ ಸಾರ್ವಜನಿಕ ವಿದ್ಯಾರ್ಥಿ ನಿಲಯದ ಆವರಣದಲ್ಲಿ 12.5 ಲಕ್ಷ ರೂ. ವೆಚ್ಚದ ಹೈಟೆಕ್ ಶೌಚಾಲಯ ಮತ್ತು ಸ್ನಾನ ಗೃಹ ನಿರ್ಮಾಣ ಕಾಮಗಾರಿಗೆ ಶ್ರೀಕನಕದಾಸ ಸಾರ್ವಜನಿಕ ಟ್ರಸ್ಟ್ ಅಧ್ಯಕ್ಷ ಹಾಗೂ ಜಿಪಂ ಮಾಜಿ ಅಧ್ಯಕ್ಷ ಬಿ.ಎಂ. ರಾಮು ಭೂಮಿಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು, ದಿ.ಎನ್.ರಾಚಯ್ಯ ಅವರು ಶ್ರೀಕನಕದಾಸ ಸಾರ್ವಜನಿಕ ಟ್ರಸ್ಟ್ ಸ್ಥಾಪಿಸಿ, ಪ್ರೌಢಶಾಲೆ ಮತ್ತು ವಿದ್ಯಾರ್ಥಿ ನಿಲಯ ತೆರೆದು ಆ ಮೂಲಕ ತಾಲೂಕಿನ ಹಿಂದುಳಿದ ವರ್ಗದ ಬಡ ಮಕ್ಕಳ ಉಚಿತ ವಿದ್ಯಾಭ್ಯಾಸಕ್ಕೆ ನೆರವಾಗಿದ್ದಾರೆ. ಈ ವಿದ್ಯಾರ್ಥಿ ನಿಲಯದ ಕಟ್ಟಡ 73 ವರ್ಷ ಹಳೆಯದಾಗಿರುವುದರಿಂದ ಸ್ನಾನಗೃಹ ಮತ್ತು ಶೌಚಾಲಯ ಕೊರತೆಯಿಂದ ವಿದ್ಯಾರ್ಥಿಗಳು ತೊಂದರೆ ಅನುಭವಿಸುವಂತಾಗಿತ್ತು. ಹೀಗಾಗಿ ಈ ಸಮಸ್ಯೆ ಪರಿಹರಿಸಿ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಎಂಎಲ್‌ಸಿಗಳಾದ ಡಾ.ಡಿ.ತಿಮ್ಮಯ್ಯ ಅವರ ಶಾಸಕರ ಪ್ರದೇಶಾಭಿವೃದ್ಧಿ ನಿಧಿಯಿಂದ 4.5 ಲಕ್ಷ, ಹೆಚ್.ವಿಶ್ವನಾಥ್ ಅವರ ಶಾಸಕರ ಪ್ರದೇಶಾಭಿವೃದ್ಧಿ ನಿಧಿಯಿಂದ 3 ಲಕ್ಷ, ಮರಿತಿಬ್ಬೇಗೌಡರ ಶಾಸಕರ ಪ್ರದೇಶಾಭಿವೃದ್ಧಿ ನಿಧಿ 5 ಲಕ್ಷ ಸೇರಿದಂತೆ ಒಟ್ಟು 12.5 ಲಕ್ಷ ಅನುದಾನದಲ್ಲಿ ಹೈಟೆಕ್ ಶೌಚಾಲಯ ಮತ್ತು ಸ್ನಾನಗೃಹ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಕಾಮಗಾರಿ ಶೀಘ್ರ ಮುಕ್ತಾಯಗೊಂಡು ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ ಎಂದರು.

ಕಾಗಿನೆಲೆ ಪೀಠದ ಶ್ರೀಶಿವಾನಂದಪುರಿ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಈ ವೇಳೆ ಟ್ರಸ್ಟ್ ನಿರ್ದೇಶಕರಾದ ನಂಜಯ್ಯ, ಶಿವಮಲ್ಲು ಮಹದೇವಯ್ಯ, ಮಹದೇವು, ಹುಚ್ಚಯ್ಯ, ಸೋಮಣ್ಣ ಕೆಂಪಣ್ಣ ಸೇರಿದಂತೆ ಇತರರಿದ್ದರು.

ಗ್ರಾಮ ಆರೋಗ್ಯ ತರಬೇತಿ ಕಾರ್ಯಾಗಾರ



ಹಾರನಹಳ್ಳಿಯಲ್ಲಿ ಗ್ರಾಮ ಆರೋಗ್ಯ ತರಬೇತಿ ಕಾರ್ಯಾಗಾರ ನಡೆಯಿತು.

ಬೆಟ್ಟದಪುರ, ಅ.27– ಸಮೀಪದ ಹಾರನಹಳ್ಳಿ ಗ್ರಾಪಂ ವತಿಯಿಂದ ಗ್ರಾಮದ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಗ್ರಾಮ ಆರೋಗ್ಯ ತರಬೇತಿ ಕಾರ್ಯಾಗಾರ ನಡೆಯಿತು.

ಕರ್ನಾಟಕ ಪಬ್ಲಿಕ್ ಶಾಲೆ ಮುಖ್ಯಶಿಕ್ಷಕ ಸತೀಶ್ ಮಾತನಾಡಿ, ಚಿಕ್ಕ ವಯಸ್ಸಿನಲ್ಲೇ ಮಕ್ಕಳ ಆರೋಗ್ಯ ತಪಾಸಣೆ ಮಾಡಿಸುವುದರಿಂದ ದೊಡ್ಡ ಕಾಯಿಲೆಗಳಿಗೆ ಬಾಲ್ಯದಲ್ಲೇ ಕಡಿವಾಣ ಹಾಕಬಹುದು. ಆದ್ದರಿಂದ ಪೋಷಕರು ಮಕ್ಕಳ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು ಎಂದು ಸಲಹೆ ನೀಡಿದರು.

ಈ ವೇಳೆ ಗ್ರಾಪಂ ಅಧ್ಯಕ್ಷ, ಉಪಾಧ್ಯಕ್ಷ, ಸದಸ್ಯರು, ಪಿಡಿಓ, ಸಿಬ್ಬಂದಿ ವರ್ಗ, ತಾಲೂಕು ಆರೋಗ್ಯ ಶಿಕ್ಷಣಾಧಿಕಾರಿಗಳು, ಅಂಗನವಾಡಿ, ಆಶಾ ಕಾರ್ಯಕರ್ತೆಯರು, ಶಾಲೆ ಶಿಕ್ಷಕರು ಇದ್ದರು.

ಚಿತ್ತಧಾಮದಲ್ಲಿ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ



ಚಿತ್ತಧಾಮದಲ್ಲಿ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ನಡೆಯಿತು.

ಹೆಚ್.ಡಿ.ಕೋಟೆ, ಅ.27– ನಮ್ಮ ಚಿತ್ತಧಾಮದಲ್ಲಿ ವಿದೇಶಿ ವ್ಯಕ್ತಿಗೆ ಚಿಕಿತ್ಸೆ ನೀಡಿ ಆತನನ್ನು ಗುಣಮುಖನನ್ನಾಗಿ ಮಾಡಿದ ಕೀರ್ತಿ ನಮ್ಮ ಚಾರಿಟಬಲ್ ಟ್ರಸ್ಟ್‌ಗೆ ಸಲ್ಲುತ್ತದೆ ಎಂದು ಚಿತ್ತಪ್ರಕಾಶ್ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ, ಮನೋವೈದ್ಯ ಡಾ.ಬಿ.ಆರ್.ರವಿಶಂಕರ್‌ರಾವ್ ತಿಳಿಸಿದರು.

ಪಟ್ಟಣದ ಶಾಂತಿಪುರ ಗ್ರಾಮದ ನಿರಾಶ್ರಿತ ಮಾನಸಿಕ ಅಸ್ವಸ್ಥರ ಪುನರ್ವಸತಿ ತಾಣ (ಚಿತ್ತಧಾಮ)ದಲ್ಲಿ ಬೆಂಗಳೂರಿನ ಚಿತ್ತಪ್ರಕಾಶ್ ಚಾರಿಟಬಲ್ ಟ್ರಸ್ಟ್ ಹಾಗೂ ಇತರ ಟ್ರಸ್ಟ್‌ಗಳ ಸಹಯೋಗದೊಂದಿಗೆ ಆಯೋಜಿಸಿದ್ದ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆಯಲ್ಲಿ ಮಾತನಾಡಿದ ಅವರು, ನಮ್ಮ ಚಿತ್ತಧಾಮಕ್ಕೆ ಸೇರುವಾಗ ಆ ವ್ಯಕ್ತಿ ವಿದೇಶಿ ವ್ಯಕ್ತಿ ಎಂದು ತಿಳಿದಿರಲಿಲ್ಲ. ಆತ ಗುಣಮುಖನಾದ ಬಳಿಕ ಆತನನ್ನು ಅವರ ಸಂಬಂಧಿಕರ ಮನೆಗೆ ಬಿಡಲು ಕೋಲ್ಕತ್ತಾಗೆ ತೆರಳಿದಾಗ ಆತ ಬಾಂಗ್ಲಾದೇಶದ ಢಾಕಾದವರು ಎಂದು ತಿಳಿಯಿತು ಎಂದರು.

ನಮ್ಮ ಪುನರ್ವಸತಿ ಕೇಂದ್ರಕ್ಕೆ ರಾಜ್ಯವಲ್ಲದೇ ಹರಿಯಾಣ, ಮಧ್ಯಪ್ರದೇಶ, ತಮಿಳುನಾಡು ಸೇರಿದಂತೆ ದೇಶದ ಹಲವು ರಾಜ್ಯಗಳಿಂದ ಆಗಮಿಸಿ ತಪಾಸಣೆಗೆ ಒಳಗಾಗಿದ್ದಾರೆ. ಅಲ್ಲದೇ ಗುಣಮುಖರಾಗಿ ತೆರಳಿದ್ದಾರೆ. ಬೇರೆ ರಾಜ್ಯದಿಂದ ಆಗಮಿಸಲು, ತೆರಳಲು ಬಡತನ ಎದುರಾದ ಸಂದರ್ಭ ಅವರಿಗೆ ನಮ್ಮ ಟ್ರಸ್ಟ್ ಮೂಲಕವೇ ಹಣದ ವ್ಯವಸ್ಥೆ ಮಾಡಿ ಅವರ ಆರೋಗ್ಯದ ಕಾಳಜಿ ವಹಿಸಲಾಗಿದೆ ಎಂದರು.

ನಮ್ಮ ಚಿತ್ತಧಾಮದಲ್ಲಿ ಇದುವರೆಗೂ 139 ಮಂದಿಗೆ ಚಿಕಿತ್ಸೆ ನೀಡಿದ್ದೇವೆ. ಈ ಪೈಕಿ 38 ಮಂದಿ ಒಳ ರೋಗಿಗಳಾಗಿ ಚಿಕಿತ್ಸೆ ಪಡೆಯುತ್ತಿದ್ದು, ಉಳಿದವರು ಗುಣಮುಖರಾಗಿ ತೆರಳಿದ್ದಾರೆ ಎಂದು ತಿಳಿಸಿದರು. ವಕೀಲ ರವಿಶಂಕರ್ ಮಾತನಾಡಿ, ಪ್ರಪಂಚದ ದೊಡ್ಡ ವಿಜ್ಞಾನಿಗಳಾಗಿ ಸೇವೆ ಸಲ್ಲಿಸಿದ ಕೆಲ ವಿಜ್ಞಾನಿಗಳು ಸಮಾಜದಲ್ಲಿ ಮಾನಸಿಕ ಖಿನ್ನತೆ ಹೊಂದಿದ್ದರು ಎಂದು ತಿಳಿಸಿದರು.

ಪಡುವಲು ವಿರಕ್ತ ಮಠದ ಮಹದೇವ ಸ್ವಾಮೀಜಿ ಮಾತನಾಡಿ, ಮಾನಸಿಕ ಖಿನ್ನತೆಗೆ ಒಳಗಾದ ವ್ಯಕ್ತಿಯನ್ನು ನಮ್ಮ ಸಮಾಜದಲ್ಲಿ ಬೇರೆ ರೀತಿ ನೋಡಲು ಆರಂಭಿಸುತ್ತಾರೆ. ಅದಾಗಬಾರದು, ಅವರು ಸಹ ಮನುಷ್ಯರು, ಅವರಿಗೆ ಚಿಕಿತ್ಸೆ ಕೊಡಿಸುವ ಕೆಲಸಕ್ಕೆ ಭಾಗಿಯಾಗಬೇಕು ಎಂದರು.

ಇದೇ ವೇಳೆ ಚಿತ್ತಧಾಮದ ಸಮಾಜ ಸೇವಕ ಲೋಕೇಶ್ ಅವರಿಗೆ ಜೀವನ ನಿರ್ವಹಣೆಗಾಗಿ ಹಸು ನೀಡಲಾಯಿತು. ವಿವಿಧ ಆಟೋಟಗಳಲ್ಲಿ ಜಯ ಗಳಿಸಿದವರಿಗೆ ಬಹುಮಾನ ವಿತರಿಸಲಾಯಿತು. ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಗಿರಿಜನ ಮುಖಂಡ ಪದ್ಮಶ್ರೀ ಪುರಸ್ಕೃತ ಸೋಮಣ್ಣ, ಮನೋರೋಗ ತಜ್ಞರಾದ ಡಾ. ಸಂಜೀವ್ ಜೈನ್, ಡಾ.ಮುರುಳಿ, ಆರಕ್ಷಕ ಉಪ ನಿರೀಕ್ಷಕ ಬಿ.ಪ್ರಕಾಶ್, ಪುರಸಭಾ ಸದಸ್ಯ ಲೋಕೇಶ್, ವಕೀಲರಾದ ಕೃಷ್ಣೇಗೌಡ, ಸರಸ್ವತಿ, ಮಹೇಶ್, ಮುಖಂಡ ದೊಡ್ಡನಾಯಕ, ಪಳನಿಸ್ವಾಮಿ, ಶಿವಮ್ಮ ದೇವರಾಜು, ಸಣ್ಣಮ್ಮ, ಕವಿತಾ, ಸುನೀತಾ, ರಮೇಶ್, ಚಿತ್ತಧಾಮದ ಸಿಬ್ಬಂದಿಗಳಾದ ಮಹದೇವಸ್ವಾಮಿ, ಮಂಜುಳಾ ಇದ್ದರು.

ಶ್ರೀರಾಮನ ಚರಿತ್ರೆ ವಿಶ್ವಕ್ಕೆ ಸಾರಿದ ಶ್ರೀಮಹರ್ಷಿ ವಾಲ್ಮೀಕಿ

ವಾಲ್ಮೀಕಿ ಜಯಂತಿಯಲ್ಲಿ ಶಾಸಕ ಡಿ.ರವಿಶಂಕರ್



ಶಾಸಕ ಡಿ.ರವಿಶಂಕರ್, ಸಿ.ಪಿ.ರಮೇಶ್ ಅವರನ್ನು ಸನ್ಮಾನಿಸಲಾಯಿತು.

ಸಾಲಿಗ್ರಾಮ, ಅ.27– ಶ್ರೀರಾಮನ ಚರಿತ್ರೆಯನ್ನು ವಿಶ್ವಕ್ಕೆ ಸಾರಿದ ಮಹಾನ್ ನಾಯಕ ಶ್ರೀಮಹರ್ಷಿ ವಾಲ್ಮೀಕಿ ಅವರ ಆದರ್ಶ ಗುಣಗಳು ಪ್ರಜಾಪ್ರಭುತ್ವಕ್ಕೆ ಬಹುಮುಖ್ಯ ಎಂದು ಶಾಸಕ ಡಿ.ರವಿಶಂಕರ್ ತಿಳಿಸಿದರು.

ತಾಲೂಕಿನ ಭೇರ್ಯದಲ್ಲಿ ನಡೆದ ವಾಲ್ಮೀಕಿ ಜಯಂತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ವಾಲ್ಮೀಕಿ ಸಮಾಜದ ಅಭಿವೃದ್ಧಿಗೆ ಸರ್ಕಾರ ಸಾಕಷ್ಟು ಯೋಜನೆಗಳನ್ನು ಜಾರಿಗೆ ತಂದಿದೆ. ಅವುಗಳನ್ನು ಪ್ರತಿಯೊಬ್ಬರೂ ಸದ್ಬಳಕೆ ಮಾಡಿಕೊಳ್ಳುವ ಮೂಲಕ ಆರ್ಥಿಕ, ಶೈಕ್ಷಣಿಕ ಮತ್ತು ಸಾಮಾಜಿಕವಾಗಿ ಅಭಿವೃದ್ಧಿ ಹೊಂದಬೇಕು. ಸಮಾಜದ ಅಭಿವೃದ್ಧಿಗೆ ಹೆಚ್ಚು ಹೊತ್ತು ನೀಡುವ ಮೂಲಕ ಎಲ್ಲಾ ರೀತಿಯ ಸಹಕಾರ ನೀಡುತ್ತೇನೆ ಎಂದರು.

ಸರ್ಕಾರಿ ಸೌಲಭ್ಯ ಪಡೆಯಲು ಯಾವುದೇ ಜಾತಿಭೇದ ಮಾಡಬೇಡಿ. ಸಮಾಜಕ್ಕೆ ನಾವೆಲ್ಲರೂ ಒಂದೇ ಎಂಬ ಸಂದೇಶ ವಾಲ್ಮೀಕಿ ಸಮುದಾಯದವರು ಸಾರಬೇಕು. ಎಲ್ಲರನ್ನು ಒಗ್ಗೂಡಿಸುವ ಮೂಲಕ ಯಾವುದೇ ಭಿನ್ನಾಭಿಪ್ರಾಯ ಬಾರದಂತೆ ನೋಡಿಕೊಳ್ಳುವುದು ಸಂಘದ ಸದಸ್ಯರ ಜವಾಬ್ದಾರಿಯಾಗಿದ್ದು, ಗ್ರಾಮದ ಎಲ್ಲಾ ನಾಯಕ ಸಮಾಜದವರನ್ನು ಒಟ್ಟಾಗಿ ಕರೆದೊಯ್ಯುವ ಜವಾಬ್ದಾರಿ ಇರಬೇಕು ಎಂದು ಸಲಹೆ ನೀಡಿದರು. ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಸಿ.ಪಿ.ರಮೇಶ್ ಮಾತನಾಡಿದರು. ಇದಕ್ಕೂ ಮುನ್ನಾ ಶ್ರೀಮಹರ್ಷಿ ವಾಲ್ಮೀಕಿ ಅವರ ಭಾವಚಿತ್ರವನ್ನು ಶ್ರೀಕರಿಯಮ್ಮ ದೊಡ್ಡಮ್ಮ ದೇವಸ್ಥಾನದಿಂದ ಮಹಿಳೆಯರ ಪೂರ್ಣ ಕುಂಭ ಕಳಸದೊಂದಿಗೆ ಇಲ್ಲಿನ ಕುರುಬರ ಬೀದಿ, ನಾಯಕರ ಬೀದಿ, ಕೆ.ಆರ್.ಪೇಟೆ ಮುಖ್ಯರಸ್ತೆ, ಮೈಸೂರು–ಹಾಸನ ಮುಖ್ಯ ರಸ್ತೆ, ಗಾಂಧಿ ವೃತ್ತ, ಸಾಲಿಗ್ರಾಮ ರಸ್ತೆ ಸೇರಿದಂತೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಮೆರವಣಿಗೆಗೆ ವೀರಗಾಸೆ, ನಗಾರಿ ಸೇರಿದಂತೆ ವಿವಿಧ ಜಾನಪದ ಕಲಾ ತಂಡಗಳು ಮೆರಗು ನೀಡಿದವು. ಈ ವೇಳೆ ಯುವಕರು ಕುಣಿದು ಕುಪ್ಪಳಿಸಿದರು.

ಕಾರ್ಯಕ್ರಮದಲ್ಲಿ ಶಾಸಕ ಡಿ.ರವಿಶಂಕರ್, ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಸಿ.ಪಿ.ರಮೇಶ್ ಸೇರಿದಂತೆ ಇನ್ನಿತರರನ್ನು ಸನ್ಮಾನಿಸಲಾಯಿತು. ತಾಲೂಕು ವಾಲ್ಮೀಕಿ ನಾಯಕರ ಸಂಘದ ಅಧ್ಯಕ್ಷ ಮಹದೇವ್, ಶ್ರೀಮಹರ್ಷಿ ವಾಲ್ಮೀಕಿ ಸಂಘದ ಅಧ್ಯಕ್ಷ ಪ್ರತಾಪ್, ಗೌರವಾಧ್ಯಕ್ಷ ರಮೇಶ್, ಉಪಾಧ್ಯಕ್ಷ ನಾಗರಾಜು, ಪ್ರದೀಪ್, ನಾಗರಾಜ್, ಮಹೇಶ ನಾಯಕ, ಮಹದೇವ್, ಮಂಜು, ಶಂಭು, ಮಧು, ಮಾಧು, ಗಿರೀಶ್, ಶಿವಪ್ರಸಾದ್, ಸಚಿನ್, ದರ್ಶನ್, ಪುಟ್ಟಸ್ವಾಮಿ, ಜಯರಾಮ್ ಇನ್ನಿತರರಿದ್ದರು.

ನಾಲ್ವಡಿ ಅವರಿಗೆ ಭಾರತರತ್ನ ನೀಡಲು ಒತ್ತಾಯ



ವಿಶ್ವ ಮಾನವ ಸೇವಾ ಸಂಸ್ಥೆ ಸಂಸ್ಥಾಪಕ ಅಧ್ಯಕ್ಷ ಸೀಹಳ್ಳಿ ರಾಜೂಗೌಡ ಮಾತನಾಡಿದರು.

ತಿ.ನರಸೀಪುರ, ಅ.27– ರಾಜರ್ಷಿ, ಪ್ರಜಾಬಂಧು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ ಭಾರತರತ್ನ ನೀಡಬೇಕೆಂದು ವಿಶ್ವ ಮಾನವ ಸೇವಾ ಸಂಸ್ಥೆ ಸಂಸ್ಥಾಪಕ ಅಧ್ಯಕ್ಷ ಸೀಹಳ್ಳಿ ರಾಜೂಗೌಡ ಮನವಿ ಮಾಡಿದರು.

ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೈಸೂರು ಸಂಸ್ಥಾನದ ಒಡೆಯರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ ಭಾರತರತ್ನ ನೀಡಲೇಬೇಕೆಂದು ಈ ನಾಡಿನ ಜನತೆ ಪರವಾಗಿ ಒತ್ತಾಯಿಸುತ್ತೇನೆ ಎಂದರು.

ಕಸಾಪ ಉಪಾಧ್ಯಕ್ಷ ಹಾಗೂ ವೈದ್ಯಕೀಯ ವಿಭಾಗದ ಜಿಲ್ಲಾಧ್ಯಕ್ಷ ಡಾ.ಪ್ರದೀಪ್ ಮಾತನಾಡಿ, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಮೈಸೂರು ಸಂಸ್ಥಾನ ಕಟ್ಟಿ ಬೆಳೆಸಿ ಸಾರ್ವಜನಿಕ ಜೀವನದಲ್ಲಿ ತಮ್ಮ ವಿಶಿಷ್ಟ ಸೇವೆಯ ಮೂಲಕ ಜನರ ಮನಸ್ಸಿನಲ್ಲಿ ಶಾಶ್ವತವಾಗಿ ಉಳಿದಿದ್ದು, ಅವರ ಸೇವೆಯನ್ನು ಗುರುತಿಸಿ ಕೇಂದ್ರ ಸರ್ಕಾರ ಭಾರತ ರತ್ನ ನೀಡುವಂತೆ ಮನವಿ ಮಾಡಿದರು.

ಮೊಟ್ಟ ಮೊದಲ ಬಾರಿಗೆ ಕಸಾಪ ಸ್ಥಾಪಿಸಿದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಜನರ ಜೀವನಾಡಿ ಕೆಆರ್‌ಎಸ್ ಜಲಾಶಯ ನಿರ್ಮಾಣ, ಶಾಲಾ, ಕಾಲೇಜುಗಳು ಸೇರಿದಂತೆ ನೂರಾರು ಜನೋಪಯೋಗಿ ಯೋಜನೆಗಳನ್ನು ಜನರಿಗೆ ತಲುಪಿಸಿದ್ದಾರೆ. ಅವರ ಕೊಡುಗೆಗಳನ್ನು ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ತಲುಪಿಸುವ ಮೂಲಕ ಭಾರತ ರತ್ನ ಪ್ರಶಸ್ತಿಗೆ ಶಿಫಾರಸ್ಸು ಮಾಡಬೇಕೆಂದರು.

ಈ ಸಂದರ್ಭ ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಅಧ್ಯಕ್ಷ ಕನ್ನಡ ಪುಟ್ಟಸ್ವಾಮಿ, ಕೆ.ಆರ್.ನಂದೀಶ್ ಇದ್ದರು.


ದೇಶದ ಅಭಿವೃದ್ಧಿಗೆ ಪ್ರಧಾನಿ ಮೋದಿ ಕೈ ಬಲಪಡಿಸಿ

ಮಾಜಿ ಶಾಸಕ ಬಿ.ಹರ್ಷವರ್ಧನ್ ಮನವಿ

ಮಲ್ಲುಂಡಿ, ಅ.27– ದೇಶದ ಅಭಿವೃದ್ಧಿಗಾಗಿ ಪ್ರಧಾನಿ ನರೇಂದ್ರ ಮೋದಿ ಅವರ ಕೈ ಬಲಪಡಿಸಲು ಪ್ರತಿಯೊಬ್ಬರೂ ಬಿಜೆಪಿ ಸದಸ್ಯತ್ವ ಪಡೆಯಬೇಕು ಎಂದು ಮಾಜಿ ಶಾಸಕ ಬಿ.ಹರ್ಷವರ್ಧನ್ ತಿಳಿಸಿದರು.

ಇಲ್ಲಿಗೆ ಸಮೀಪದ ಕಸುವಿನಹಳ್ಳಿಯಲ್ಲಿ ಬಿಜೆಪಿ ಪಕ್ಷದ ಸದಸ್ಯತ್ವ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ನರೇಂದ್ರ ಮೋದಿಯವರು 3ನೇ ಬಾರಿ ಪ್ರಧಾನಿಯಾಗಿ ದೇಶದ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದಾರೆ. ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ನೇತೃತ್ವದಲ್ಲಿ ರಾಜ್ಯದಲ್ಲಿ ಹೆಚ್ಚಿನ ಯುವಕರು ಬಿಜೆಪಿ ಪಕ್ಷದ ಸದಸ್ಯತ್ವ ಹೊಂದುತ್ತಿದ್ದಾರೆ. ಅವರ ಕೈ ಬಲಪಡಿಸುವ ನಿಟ್ಟಿನಲ್ಲಿ ಕ್ಷೇತ್ರದ ಪ್ರತಿಯೊಬ್ಬರೂ ಬಿಜೆಪಿ ಸದಸ್ಯತ್ವ ಹೊಂದುವ ಮೂಲಕ ಪಕ್ಷವನ್ನು ತಳಮಟ್ಟದಿಂದ ಸಂಘಟಿಸಲು ಒತ್ತು ನೀಡಬೇಕಾಗಿದೆ. ಬಿಜೆಪಿ ಸರ್ಕಾರದ ಅವಧಿಯಲ್ಲಿ ಕ್ಷೇತ್ರದ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸಿದ್ದೇನೆ. ಈಗಿನ ಕಾಂಗ್ರೆಸ್ ಸರ್ಕಾರದ ಆಡಳಿತದಲ್ಲಿ ಭ್ರಷ್ಟಾಚಾರ ಬಿಟ್ಟರೆ ಅಭಿವೃದ್ಧಿ ಶೂನ್ಯವಾಗಿರುವುದನ್ನು ರಾಜ್ಯದ ಜನತೆ ನೋಡುತ್ತಿದ್ದಾರೆ. ಈಗಾಗಲೇ 3 ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಗಳು ಹೆಚ್ಚಿನ ಮತಗಳ ಅಂತರದಿಂದ ಗೆಲ್ಲುತ್ತಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಈ ವೇಳೆ ವೀರಶೈವ ಲಿಂಗಾಯತ ತಾಲೂಕು ಅಧ್ಯಕ್ಷ ಎಸ್.ಎಂ.ಕೆಂಪಣ್ಣ, ಜಿಪಂ ಮಾಜಿ ಸದಸ್ಯ ಚಿಕ್ಕರಂಗನಾಯಕ, ತಾಲೂಕು ಪ್ರಧಾನ ಕಾರ್ಯದರ್ಶಿ ವಳಗೆರೆ ಪುಟ್ಟಸ್ವಾಮಿ, ಕಳಲೆ ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಮಲ್ಲಿಕಾರ್ಜುನ, ಸಿದ್ದರಾಜು, ಗ್ರಾಪಂ ಮಾಜಿ ಅಧ್ಯಕ್ಷ ಕುಮಾರ್ ಸೇರಿದಂತೆ ಇತರರಿದ್ದರು.



ಬಿಜೆಪಿ ಸದಸ್ಯತ್ವ ಅಭಿಯಾನಕ್ಕೆ ಮಾಜಿ ಶಾಸಕ ಬಿ.ಹರ್ಷವರ್ಧನ್ ಚಾಲನೆ ನೀಡಿದರು.

ಕೋಟೆಯಲ್ಲಿ ತಂಬಾಕು ನಿಷೇಧ ದಿನಾಚರಣೆ



ಶ್ರೀಆದಿಚುಂಚನಗಿರಿ ಕಾಲೇಜಿನಲ್ಲಿ ತಂಬಾಕು ನಿಷೇಧ ದಿನಾಚರಣೆ ನಡೆಯಿತು.

ಹೆಚ್.ಡಿ.ಕೋಟೆ, ಅ.27– ಪಟ್ಟಣದ ಶ್ರೀಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಘಟಕ 1 ಮತ್ತು 2ರ ಸಂಯುಕ್ತಾಶ್ರಯದಲ್ಲಿ ತಂಬಾಕು ನಿಷೇಧ ದಿನಾಚರಣೆ ನಡೆಯಿತು.

ಇದೇ ವೇಳೆ ಕಾಲೇಜಿನ ಪ್ರಾಂಶುಪಾಲರು, ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಪಟ್ಟಣದ ಮುಖ್ಯ ರಸ್ತೆಗಳಲ್ಲಿ ಬೈಕ್ ರ‍್ಯಾಲಿ ನಡೆಸಿ ತಂಬಾಕು ಸೇವನೆಯಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸಿದರು.

ಪ್ರಾಂಶುಪಾಲ ಡಾ.ಜೆ.ಎನ್.ವೆಂಕಟೇಶ್ ಮಾತನಾಡಿ, ಪ್ರಸ್ತುತ ಧೂಮಪಾನ ಹಾಗೂ ಮದ್ಯಪಾನಗಳಂತಹ ಮಾರಕ ಅಭ್ಯಾಸಗಳಿಗೆ ವಿದ್ಯಾರ್ಥಿಗಳು ಮತ್ತು ಜನತೆ ಬಲಿಯಾಗುತ್ತಿರುವುದರಿಂದ ಉತ್ತಮ ಸಮಾಜ ನಿರ್ಮಾಣಕ್ಕೆ ಕಂಟಕವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ದೈಹಿಕ ಶಿಕ್ಷಣ ನಿರ್ದೇಶಕ ಕಲ್ಲೇಶ್‌ಗೌಡ, ರಾಷ್ಟ್ರೀಯ ಸೇವಾ ಯೋಜನೆ ಅಧಿಕಾರಿಗಳಾದ ರಾಮಚಂದ್ರ, ಸಿದ್ದೇಗೌಡ, ಚನ್ನಕೇಶವ, ಮಹೇಶ್ ಮತ್ತು ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಅಪರಿಚಿತ ಶವ ಪತ್ತೆ

ಜಯಪುರ, ಅ.27– ಸಮೀಪದ ಟಿ.ಕಾಟೂರು ಬಳಿಯ ವರುಣ ನಾಲೆಯಲ್ಲಿ ಕೊಳೆತ ಸ್ಥಿತಿಯಲ್ಲಿ ಸುಮಾರು 35 ರಿಂದ 40 ವಯೋಮಾನದ ಅಪರಿಚಿತ ಪುರುಷನ ಶವ ಪತ್ತೆಯಾಗಿದೆ. ಶವ ಕಂಡ ಸ್ಥಳೀಯರು ಜಯಪುರ ಠಾಣೆ ಪೊಲೀಸರಿಗೆ ಮಾಹಿತಿ ನೀಡಿದ್ದು, ಸ್ಥಳಕ್ಕಾಗಮಿಸಿದ ಪೊಲೀಸರು ಶವವನ್ನು ನಾಲೆಯಿಂದ ಮೇಲೆತ್ತಿ ಮೈಸೂರು ಮೆಡಿಕಲ್ ಕಾಲೇಜು ಶವಾಗಾರದಲ್ಲಿರಿಸಿದ್ದಾರೆ. ಯಾರಾದರೂ ವಾರಸುದಾರರಿದ್ದಲ್ಲಿ ಜಯಪುರ ಠಾಣೆ ಮೊ.9480805047, 0821–2595781 ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಸುರಕ್ಷಿತವಾಗಿ ಸ್ಟ್ರಾಂಗ್ ರೂಮ್ ಸೇರಿದ ಚಿನ್ನದ ಸಿಂಹಾಸನ, ಬೆಳ್ಳಿಯ ಭದ್ರಾಸನ

ಬಿಗಿ ಭದ್ರತೆಯಲ್ಲಿ ಬಿಡಿಭಾಗಗಳ ರವಾನೆ



ಮೈಸೂರು, ಅ.27(ಎಂಟಿವೈ)– ದಸರಾ ಮಹೋತ್ಸವದ ವೇಳೆ ಅರಮನೆಯಲ್ಲಿ ರಾಜವಂಶಸ್ಥರು ಖಾಸಗಿ ದರ್ಬಾರ್ ನಡೆಸಲು ದರ್ಬಾರ್ ಹಾಲ್‌ನಲ್ಲಿ ಜೋಡಣೆ ಮಾಡಲಾಗಿದ್ದ ಚಿನ್ನದ ಸಿಂಹಾಸನ ಹಾಗೂ ಕನ್ನಡಿತೊಟ್ಟಿಯಲ್ಲಿ ಇಡಲಾಗಿದ್ದ ಬೆಳ್ಳಿಯ ಭದ್ರಾಸನವನ್ನು ಇಂದು ಬೆಳಗ್ಗೆ ಬಿಗಿ ಭದ್ರತೆಯಲ್ಲಿ ಬಿಡಿಭಾಗಗಳಾಗಿ ವಿಂಗಡಿಸಿ, ಸ್ಟ್ರಾಂಗ್ ರೂಮ್‌ನಲ್ಲಿ ಸುರಕ್ಷಿತವಾಗಿಡಲಾಯಿತು.

ಪ್ರಸಕ್ತ ಸಾಲಿನ ದಸರಾ ಮಹೋತ್ಸವದ ಅಂಗವಾಗಿ ಸೆ.27ರಂದು ಅರಮನೆಯಲ್ಲಿರುವ ಸ್ಟ್ರಾಂಗ್ ರೂಮ್‌ನಿಂದ ಶಸ್ತ್ರಸಜ್ಜಿತ ಸಿಬ್ಬಂದಿಗಳ ಕಣ್ಗಾವಲಿನಲ್ಲಿ ಚಿನ್ನದ ಸಿಂಹಾಸನ ಹಾಗೂ ಬೆಳ್ಳಿ ಭದ್ರಾಸನದ ಬಿಡಿಭಾಗಗಳನ್ನು ತಂದು ಕ್ರಮವಾಗಿ ದರ್ಬಾರ್ ಹಾಲ್ ಹಾಗೂ ಕನ್ನಡಿ ತೊಟ್ಟಿಯಲ್ಲಿ ಜೋಡಣೆ ಮಾಡಲಾಗಿತ್ತು. ಅ.3ರಿಂದ ನವರಾತ್ರಿ ಆರಂಭವಾಗಿದ್ದರಿಂದ ರಾಜವಂಶಸ್ಥರು ಹಾಗೂ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಸಂಪ್ರದಾಯದಂತೆ ಚಿನ್ನದ ಸಿಂಹಾಸನ ಏರಿ ದರ್ಬಾರ್ ನಡೆಸಿದ್ದರು. ಅ.11ರವರೆಗೂ ಖಾಸಗಿ ದರ್ಬಾರ್ ನಡೆಸಿ, ಆಯುಧಪೂಜೆ ದಿನ ಸಿಂಹಾಸನಕ್ಕೆ ಜೋಡಣೆ ಮಾಡಲಾಗಿದ್ದ ಸಿಂಹದ ತಲೆಯನ್ನು ವಿಸರ್ಜಿಸಲಾಗಿತ್ತು.

ನಿಗದಿತ ಮುಹೂರ್ತದಂತೆ ಇಂದು ಬೆಳಗ್ಗೆ 9.30ರಿಂದ ದರ್ಬಾರ್ ಹಾಲ್‌ನಲ್ಲಿದ್ದ ಚಿನ್ನದ ಸಿಂಹಾಸನವನ್ನು 8 ಬಿಡಿಭಾಗಗಳಾಗಿ ವಿಂಗಡಿಸಲಾಯಿತು. ಬಳಿಕ ಕನ್ನಡಿ ತೊಟ್ಟಿಯಲ್ಲಿದ್ದ ಬೆಳ್ಳಿಯ ಭದ್ರಾಸನವನ್ನು 8 ಬಿಡಿ ಭಾಗಗಳಾಗಿ ವಿಂಗಡಿಸಲಾಯಿತು. ಬಿಡಿಭಾಗಗಳನ್ನು ಸ್ಟ್ರಾಂಗ್ ರೂಮ್‌ಗೆ ಕೊಂಡೊಯ್ಯುವ ವೇಳೆ ಗೌಪ್ಯತೆ ಕಾಪಾಡುವ ನಿಟ್ಟಿನಲ್ಲಿ ಅರಮನೆ ಒಳಾವರಣದಲ್ಲಿ ಅಳವಡಿಸಿದ್ದ ಸಿಸಿ ಕ್ಯಾಮರಾಗಳಿಗೆ ಪರದೆ ಬಿಡಲಾಗಿತ್ತು. ಶಸ್ತ್ರಸಜ್ಜಿತ ಸಿಬ್ಬಂದಿಗಳ ಭದ್ರತೆಯಲ್ಲಿ ಬಿಡಿಭಾಗಗಳನ್ನು ಸ್ಟ್ರಾಂಗ್ ರೂಮ್‌ನಲ್ಲಿಟ್ಟು ಬೀಗ ಹಾಕಲಾಯಿತು. ಬಳಿಕ ಸ್ಟ್ರಾಂಗ್ ರೂಮ್ ಬೀಗಕ್ಕೆ ಸೀಲ್ ಮಾಡಲಾಯಿತು.

ಸೆ.27ರಂದು ಜೋಡಣೆ ಮಾಡಿದ ನಂತರ ಸೆ.28ರಿಂದ ಅರಮನೆ ವೀಕ್ಷಿಸಲು ಬರುವ ಪ್ರವಾಸಿಗರು ಪ್ರತ್ಯೇಕ ಟಿಕೆಟ್ ಪಡೆದ ಸಿಂಹಾಸನ ವೀಕ್ಷಿಸಿ, ಸಂಭ್ರಮಿಸಿದ್ದರು. ಸುಮಾರು ಒಂದು ತಿಂಗಳು ದರ್ಬಾರ್ ಹಾಲ್‌ನಲ್ಲಿದ್ದ ಸಿಂಹಾಸನವನ್ನು ಸಾವಿರಾರು ಪ್ರವಾಸಿಗರು ಕಣ್ತುಂಬಿಕೊಂಡಿದ್ದರು.

ರಾಜಮನೆತನದವರ ಗೈರು: ಇಂದು ಸಿಂಹಾಸನ ವಿಸರ್ಜನೆ ವೇಳೆ ರಾಜವಂಶಸ್ಥರು ಗೈರಾಗಿದ್ದರು. ರಾಜವಂಶಸ್ಥರ ಆಪ್ತರ ವರ್ಗದ ಸಮ್ಮುಖದಲ್ಲಿ ಅರಮನೆ ಸಿಬ್ಬಂದಿಗಳು ಸಿಂಹಾಸನ ಹಾಗೂ ಭದ್ರಾಸನವನ್ನು ಬಿಡಿಭಾಗಗಳಾಗಿ ವಿಂಗಡಿಸಿ ಸ್ಟ್ರಾಂಗ್ ರೂಂಗೆ ಕೊಂಡೊಯ್ದರು.

ಮಧ್ಯಾಹ್ನದ ನಂತರ ಪ್ರವಾಸಿಗರ ಪ್ರವೇಶ: ಬೆಳಗ್ಗಿನಿಂದ ಮಧ್ಯಾಹ್ನದವರೆಗೆ ಅರಮನೆ ಪ್ರವೇಶಕ್ಕೆ ನಿರ್ಬಂಧ ಹೇರಲಾಗಿತ್ತು. ಈ ಹಿನ್ನೆಲೆಯಲ್ಲಿ ಸಿಂಹಾಸನ ವಿಸರ್ಜನೆ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ಮಧ್ಯಾಹ್ನ 1 ಗಂಟೆ ನಂತರ ಅರಮನೆಗೆ ಪ್ರವಾಸಿಗರ ಪ್ರವೇಶಕ್ಕೆ ಅವಕಾಶ ನೀಡಲಾಯಿತು. ವಾರಾಂತ್ಯ ರಜೆ ಹಿನ್ನೆಲೆಯಲ್ಲಿ ಮೈಸೂರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಆಗಮಿಸಿದ್ದರು. ಅರಮನೆ ವೀಕ್ಷಿಸಲು ಬಂದ ಪ್ರವಾಸಿಗರಿಗಾಗಿ ಧ್ವನಿವರ್ಧಕದ ಮೂಲಕ ಮಧ್ಯಾಹ್ನದ ನಂತರ ಪ್ರವೇಶಾವಕಾಶ ಕಲ್ಪಿಸುವುದಾಗಿ ಬಿತ್ತರಿಸಲಾಗುತ್ತಿತ್ತು. ಮಧ್ಯಾಹ್ನದ ವೇಳೆ ನೂರಾರು ಮಂದಿ ಅರಮನೆ ಪ್ರವೇಶಿಸಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	**(ದೂ: 2521923)**
ನಸಾಬ್ (ಕ)	1 ಪ್ರದರ್ಶನಗಳು
ಅನ್ನ (ಕ)	3 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಎಲ್ಲಿಗೆ ಪಯಣ ಯಾವುದೋ ದಾರಿ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ದಿ ಹಂಟರ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಯಲಾ ಕುನ್ನಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಾರ್ಟಿನ್ (ಕ)	4 ಪ್ರದರ್ಶನಗಳು
ರಾಜಕಮಲ್	
ದೇವರ (ತೆ)	4 ಪ್ರದರ್ಶನಗಳು
ಸಂಗಂ	
ಮಾರ್ಟಿನ್ (ಕ)	4 ಪ್ರದರ್ಶನಗಳು
ಲಿಡೋ	
ಕೃಷ್ಣಂ ಪ್ರಣಯ ಸಖಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ವೇಟೇಯನ್ (ತ)	4 ಪ್ರದರ್ಶನಗಳು
ಪ್ರಭಾ	
ಭೀಮಾ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ವೇನಂ ದಿ ಲಾಸ್ಟ್ ಡ್ಯಾನ್ಸ್ (3ಡಿ)(ಇಂ): ಬೆ.11.05ಕ್ಕೆ, ಮ.1.30ಕ್ಕೆ, ರಾ.7.15ಕ್ಕೆ, ರಾ.9.45ಕ್ಕೆ, ವೆಟ್ಟೈಯನ್ (ತ): ಸಂ.4ಕ್ಕೆ.
ಸ್ಕ್ರೀನ್ 2	ದಿ ವೈಲ್ಡ್ ರೋಬೋಟ್ (3ಡಿ)(ಇಂ): ಬೆ.11ಕ್ಕೆ, ಮಾರ್ಟಿನ್ (ಕ): ಮ.1.10ಕ್ಕೆ, ವೆಟ್ಟೈಯನ್ (ತ): ಸಂ.4.05ಕ್ಕೆ, ಯಲಾ ಕುನ್ನಿ (ಕ): ರಾ.7.10ಕ್ಕೆ, ನರುಡಿ ಬ್ರದುಕು ನಟನ (ತೆ): ರಾ.9.50ಕ್ಕೆ.
ಸ್ಕ್ರೀನ್ 3	ಎಲ್ಲಿಗೆ ಪಯಣ ಯಾವುದೋ ದಾರಿ (ಕ): ಬೆ.10.35ಕ್ಕೆ, ಇಬ್ಬನಿ ತಬ್ಬಿದ ಇಳೆಯಲಿ (ಕ): ಮ.1.15ಕ್ಕೆ, ಅನ್ನ (ಕ): ಸಂ.4.30ಕ್ಕೆ, ಮರ್ಫಿ (ಕ): ರಾ.7ಕ್ಕೆ, ಪಣಿ (ಮ): ರಾ.9.50ಕ್ಕೆ.
ಸ್ಕ್ರೀನ್ 4	ನಸಾಬ್ (ಕ): ಬೆ.10.20ಕ್ಕೆ, ವೆಟ್ಟೈಯನ್ (ತ): ಮ.1.05ಕ್ಕೆ, ಸಂ.6.55ಕ್ಕೆ, ಯಲಾಕುನ್ನಿ (ಕ): ಸಂ.4.15ಕ್ಕೆ, ರಾ.10.05ಕ್ಕೆ.

INOX LIVE THE MOVIE ಐನಾಕ್ಸ್ ಮೂವೀಸ್
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ವೆಟ್ಟೈಯನ್ (ತ): ಮ.1ಕ್ಕೆ, ಎಲ್ಲಿಗೆ ಪಯಣ ಯಾವುದೋ ದಾರಿ (ಕ): ಸಂ.4ಕ್ಕೆ, ಮಾರ್ಟಿನ್ (ಕ): ಸಂ.6.30ಕ್ಕೆ, ವೆಟ್ಟೈಯನ್ (ತ): ರಾ.9.15ಕ್ಕೆ.
ಸ್ಕ್ರೀನ್ 2	ವೇನಂ ದಿ ಲಾಸ್ಟ್ ಡ್ಯಾನ್ಸ್ (3ಡಿ)(ಇಂ): ಮ.1.30ಕ್ಕೆ, ಸಂ.4ಕ್ಕೆ, ರಾ.7ಕ್ಕೆ.
ಸ್ಕ್ರೀನ್ 3	ಯಲಾಕುನ್ನಿ (ಕ): ಮ.1.30ಕ್ಕೆ, ಒಬ್ಬಟ್ಟು (ಕ): ಸಂ.4.30ಕ್ಕೆ, ಉದಾಹರಣೆ (ಕ): ರಾ.7ಕ್ಕೆ, ವೇನಂ ದಿ ಲಾಸ್ಟ್ ಡ್ಯಾನ್ಸ್ (3ಡಿ)(ಇಂ): ರಾ.9.15ಕ್ಕೆ.
ಸ್ಕ್ರೀನ್ 4	ಮಾರ್ಟಿನ್ (ಕ): ಮ.1.10ಕ್ಕೆ, ಯಲಾಕುನ್ನಿ (ಕ): ಮ.3.55ಕ್ಕೆ, ವೆಟ್ಟೈಯನ್ (ತ): ಸಂ.6.30ಕ್ಕೆ, ಪಣಿ (ಮ): ರಾ.9.30ಕ್ಕೆ.

PVR CINEMAS ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಜನಾಕರ್ಷಿಸುತ್ತಿದೆ ಮೈಸೂರು ಯುವಕರ 'ವಿಸ್ಮಯ–360'





'ವಿಸ್ಮಯ–360' ಡಿಗ್ರಿ ಡೋಮ್ ಕಿರುಚಿತ್ರ ಪ್ರದರ್ಶನದ ದೃಶ್ಯ.

ಮೈಸೂರು, ಅ.27(ಎಂಟಿವೈ)– ಮೈಸೂರಿನ ಯುವಕರ ತಂಡವೊಂದು ನಂಜರಾಜ ಬಹದ್ದೂರ್ ಕಲ್ಯಾಣ ಮಂಟಪದ ಆವರಣದಲ್ಲಿ ನೂತನ ತಂತ್ರಜ್ಞಾನ ಬಳಸಿ 'ವಿಸ್ಮಯ–360' ಡಿಗ್ರಿ ಡೋಮ್ ಕಿರುಚಿತ್ರ ಪ್ರದರ್ಶನ ಏರ್ಪಡಿಸಿದ್ದು, ಜನಾಕರ್ಷಿಸುತ್ತಿದೆ.

ದಸರಾ ಮಹೋತ್ಸವದ ವೇಳೆ ಮೈಸೂರಿನ ವಿವಿಧೆಡೆ ನಡೆಯುತ್ತಿದ್ದ ಮನರಂಜನಾ ಕಾರ್ಯಕ್ರಮ ವೀಕ್ಷಿಸಿ ಸಂಭ್ರಮಿಸುತ್ತಿದ್ದ ಮೈಸೂರಿಗರಿಗೆ ಇದೀಗ ದಸರಾ ವಸ್ತು ಪ್ರದರ್ಶನ ಹೊರತುಪಡಿಸಿದರೆ ಯಾವುದೇ ಮನರಂಜನಾ ಕಾರ್ಯಕ್ರಮವಿಲ್ಲ. ಅದರ ಕೊರತೆ ನೀಗಿಸುವ ನಿಟ್ಟಿನಲ್ಲಿ ವಿಸ್ಮಯ 360 ಡಿಗ್ರಿ ಡೋಮ್ ಚಿತ್ರ ಪ್ರದರ್ಶನ ಎಲ್ಲರ ಗಮನ ಸೆಳೆಯುತ್ತಿದೆ.

ವೃತ್ತಾಕಾರದ ವಾಟರ್‌ಪ್ರೂಫ್ ಡೋಮ್ ಮಾದರಿಯಲ್ಲಿ 12–15 ಮಂದಿ ಕುಳಿತು 360 ಡಿಗ್ರಿಯಲ್ಲಿ ಕಿರುಚಿತ್ರಗಳನ್ನು ವೀಕ್ಷಿಸಬಹುದಾಗಿದೆ. ಮಕ್ಕಳಿಂದ ಹಿರಿಯ ನಾಗರಿಕರವರೆಗೂ ಅವರ ಅಭಿರುಚಿಗೆ ಅನುಗುಣವಾದ ಕಿರುಚಿತ್ರಗಳನ್ನು ಪ್ರದರ್ಶಿಸಲಾಗುತ್ತಿದೆ. ಅನಿಮೇಶನ್ ಮಾದರಿಯಲ್ಲಿ ಕಿರುಚಿತ್ರಗಳನ್ನು ತಯಾರಿಸಿದ್ದು, ಹವಾನಿಯಂತ್ರಿತ ವ್ಯವಸ್ಥೆಯೊಳಗೆ ಉತ್ತಮ ಧ್ವನಿಯೊಂದಿಗೆ ಕಿರುಚಿತ್ರಗಳನ್ನು ವೀಕ್ಷಿಸಬಹುದಾಗಿದೆ. ವಿಸ್ಮಯ ತಂಡ 360 ಡಿಗ್ರಿ ಡೋಮ್‌ನಲ್ಲಿ ಇದೇ ಮೊದಲ ಬಾರಿಗೆ ಕಿರುಚಿತ್ರ ಪ್ರದರ್ಶನದ ವ್ಯವಸ್ಥೆ ಮಾಡಿ ಎಲ್ಲರ ಪ್ರಶಂಸೆಗೆ ಪಾತ್ರವಾಗಿದೆ. ಡಿ.31ರವರೆಗೆ ಈ ಪ್ರದರ್ಶನ ನಡೆಯಲಿದೆ.

ಕುಮಾರಸ್ವಾಮಿ ಕುಟುಂಬಕ್ಕೆ ಸಿದ್ದೇಶ್ವರ ಸ್ವಾಮಿ ಪ್ರಸಾದ!

ಹಾಸನ, ಅ.27– ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಪೂಜೆ ಸಲ್ಲಿಸುತ್ತಿದ್ದ ವೇಳೆ ಸಿದ್ದೇಶ್ವರ ಸ್ವಾಮಿ ಬಲಗಡೆಯಿಂದ ಹೂವು ಬಿದ್ದಿದ್ದು, ಸಿದ್ದೇಶ್ವರ ಸ್ವಾಮಿ ಶುಭ ಸೂಚನೆ ನೀಡಿದರೆ ಎನ್ನುವ ಚರ್ಚೆ ಶುರುವಾಗಿದೆ.

ಪತ್ನಿ, ಸೊಸೆ, ಮೊಮ್ಮಗನ ಜೊತೆ ಹಾಸನಾಂಬೆ ದರ್ಶನ ನಂತರ ಸಿದ್ದೇಶ್ವರಸ್ವಾಮಿ ದರ್ಶನ ಮಾಡಿದ ವೇಳೆ, ಸಿದ್ದೇಶ್ವರ ಸ್ವಾಮಿ ಬಲಗಡೆಯಿಂದ ಹೂ ಬಿದ್ದಿದೆ. ದೇವರ ಮೇಲಿಂದ ಹೂವು ಬಿದ್ದಾಗ, ಪತ್ನಿ ಅನಿತಾ ಅವರು ಕುಮಾರಸ್ವಾಮಿ ಅವರಿಗೆ ಕೈ ಸನ್ನೆಮಾಡಿ ತಿಳಿಸಿದ್ದಾರೆ.

ಚನ್ನಪಟ್ಟಣ ಚುನಾವಣೆ ನಡುವೆ ಹಾಸನಾಂಬೆ, ಸಿದ್ದೇಶ್ವರ ಸ್ವಾಮಿ ದರ್ಶನ ಪಡೆದ ವೇಳೆ ಈ ರೀತಿಯ ಶುಭ ಸೂಚನೆ ಸಿಕ್ಕಿರುವುದು ಕುಮಾರಸ್ವಾಮಿ ಕುಟುಂಬಕ್ಕೆ ಸಂತಸ ತಂದಂತಾಗಿದೆ ಎಂದು ಜೆಡಿಎಸ್ ಮುಖಂಡರು ಹೇಳುತ್ತಿದ್ದಾರೆ.

ಶುಭ ಸಮಾರಂಭ ಆಯೋಜಿಸುವ ಮುನ್ನ ಭಕ್ತರು ಸಿದ್ದೇಶ್ವರ ಸ್ವಾಮಿಗೆ ವಿಶೇಷ ಪೂಜೆ, ಅಭಿಷೇಕದ ನಂತರ ಪ್ರಸಾದ ಕೇಳುವುದು ವಾಡಿಕೆ. ಅದರಂತೆ ಪ್ರಸಾದವಾದ ನಂತರ ಶುಭ ಕಾರ್ಯ ನೆರವೇರಿರುವ ನಂಬಿಕೆ ಇದೆ ಎಂದು ಸ್ಥಳೀಯರು ತಿಳಿಸಿದ್ದಾರೆ.

ಟ್ರೋಫಿ ವಿತರಣೆ



'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ರೇಸಿಂಗ್ ಪ್ರತಿನಿಧಿ ಪಿ.ಜಿ.ಚಂದ್ರಶೇಖರ್ ಅವರಿಗೆ ಮೈಸೂರ್ ಕ್ಲಬ್ ವತಿಯಿಂದ ಎಂಆರ್‌ಸಿ ಸ್ಟೀವರ್ಡ್ ನಾಗಪ್ಪನ್ ಅವರಿಂದ ಟಿಪ್‌ಸ್ಟರ್ ಟ್ಯಾಲಿ ವಿನ್ನರ್ ಟ್ರೋಫಿ ವಿತರಿಸಲಾಯಿತು. ಈ ವೇಳೆ ಎಂಆರ್‌ಸಿ ಛೇರ್‌ಮನ್ ಕೆ.ಎನ್.ಸುರೇಶ್‌ಕುಮಾರ್, ಸ್ಟೀವರ್ಡ್‌ಗಳು ಮತ್ತು ಕಮಿಟಿ ಸದಸ್ಯರು ಉಪಸ್ಥಿತರಿದ್ದರು.

ಆರೋಗ್ಯದ ಮಹತ್ವ ಸಾರಿದ ಮ್ಯಾರಥಾನ್

7ರಿಂದ 64 ವರ್ಷದ ಉತ್ಸಾಹಿಗಳು ಭಾಗಿ, ಮೂರು, ಏಳು ಕಿ.ಮಿ.ವಿಭಾಗದಲ್ಲಿ ನಡೆದ ಸ್ಪರ್ಧೆಗಳು



ಟೋಸ್ಟ್ ಮಾಸ್ಟರ್ ಅಂತಾರಾಷ್ಟ್ರೀಯ ಸಂಸ್ಥೆಯ ಶತಮಾನೋತ್ಸವದ ಅಂಗವಾಗಿ ಆಯೋಜಿಸಿದ್ದ 3 ಕಿಮೀ ಮ್ಯಾರಥಾನ್‌ಗೆ ಪರ್ವತಾರೋಹಿ ಪ್ರೊ.ಡಾ.ಉಷಾ ಹೆಗ್ಗಡೆ, ಟೋಸ್ಟ್ ಮಾಸ್ಟರ್‌ನ ಮೈಸೂರು ಘಟಕದ ಮುಖ್ಯಸ್ಥ ಎಲ್.ಶ್ರೀಹರಿ ಚಾಲನೆ ನೀಡಿದರು.

ಮೈಸೂರು, ಅ.27(ಜಿಎ)–ಟೋಸ್ಟ್ ಮಾಸ್ಟರ್ ಅಂತಾರಾಷ್ಟ್ರೀಯ ಸಂಸ್ಥೆಯ ಶತಮಾನೋತ್ಸವದ ಅಂಗವಾಗಿ ಎಸ್‌ಜೆಸಿಇ ಕ್ಯಾಂಪಸ್‌ನಿಂದ ಆಯೋಜಿಸಿದ್ದ ಮ್ಯಾರಥಾನ್‌ನಲ್ಲಿ 7 ರಿಂದ 64 ವರ್ಷದ ಉತ್ಸಾಹಿಗಳು ಹೆಜ್ಜೆ ಹಾಕಿ ಆರೋಗ್ಯದ ಮಹತ್ವ ಸಾರಿದರು.

ಮೂರು ಕಿಮೀ, ಏಳು ಕಿಮೀ ಅಂತರದ ಎರಡು ವಿಭಾಗಗಳಲ್ಲಿ ಮಹಿಳೆಯರು ಹಾಗೂ ಪುರುಷರಿಗಾಗಿ ಪ್ರತ್ಯೇಕ ಸ್ಪರ್ಧೆಗಳು ನಡೆಯಿತು. 3 ಕಿಮೀ ಓಟಕ್ಕೆ ಪರ್ವತಾರೋಹಿ ಪ್ರೊಡಾ.ಉಷಾ ಹೆಗ್ಗಡೆ, ಟೋಸ್ಟ್ ಮಾಸ್ಟರ್‌ನ ಮೈಸೂರು ಘಟಕದ ಮುಖ್ಯಸ್ಥ ಎಲ್.ಶ್ರೀಹರಿ ಹಾಗೂ ಏಳು ಕಿಮೀ ಓಟಕ್ಕೆ ಸ್ಟೆಪ್‌ನ ಸಿಇಓ ಶಿವಶಂಕರ್, ಟೋಸ್ಟ್ ಮಾಸ್ಟರ್‌ನ ಪ್ರಾದೇಶಿಕ ನಿರ್ದೇಶಕ ಗೋಕುಲ್ ಮೆನನ್ ಚಾಲನೆ ನೀಡಿದರು.

ಮೂರು ಕಿಮೀ ಓಟ ಆರಂಭಿಸಿದ ಸ್ಪರ್ಧಿಗಳು ಎಸ್‌ಜೆಸಿಇ ಕ್ಯಾಂಪಸ್‌ನಿಂದ ಚಂದುರಂಗ ರಸ್ತೆ, ಮೈಸೂರು–ಹುಣಸೂರು ರಸ್ತೆ ಮೂಲಕ ಪಡುವಾರಹಳ್ಳಿ ಜಂಕ್ಷನ್, ಮಾನಸಗಂಗೋತ್ರಿ ಬಯಲು ರಂಗ ಮಂಟಪ ಹಾಗೂ ಸ್ಪೀಚ್ ಅಂಡ್ ಹಿಯರಿಂಗ್ ಮೂಲಕ ಸಾಗಿ ಎಸ್‌ಜೆಇ ಕ್ಯಾಂಪಸ್‌ಗೆ ಮರಳಿದರು.

ಏಳು ಕಿಮೀ ಸ್ಪರ್ಧಿಗಳು ಎಸ್‌ಜೆಸಿಇ ಕ್ಯಾಂಪಸ್‌ನಿಂದ ಚದುರಂಗ ರಸ್ತೆ, ಮೈಸೂರು–ಹುಣಸೂರು ರಸ್ತೆ ಮೂಲಕ ಪಡುವಾರಹಳ್ಳಿ ಜಂಕ್ಷನ್, ಕಲಾಮಂದಿರ ಜಂಕ್ಷನ್, ಕುಕ್ಕರಹಳ್ಳಿ ಜಂಕ್ಷನ್ ಸ್ಪೀಚ್ ಅಂಡ್ ಹಿಯರಿಂಗ್ ಮೂಲಕ ಸಾಗಿ ಎಸ್‌ಜೆಸಿಇ ಕ್ಯಾಂಪಸ್‌ನ ಆರಂಭಿಕ ಸ್ಥಳ ತಲುಪುವ ಮೂಲಕ ಮ್ಯಾರಥಾನ್‌ನಲ್ಲಿ ಆರೋಗ್ಯದ ಮಹತ್ವ ಸಾರಿದರು.

ಸ್ಪರ್ಧೆಯಲ್ಲಿ ಭಾಗವಹಿಸಿದ ಎಲ್ಲರಿಗೂ ಪದಕ ಹಾಗೂ ಪ್ರಮಾಣ ಪತ್ರ ವಿತರಿಸಲಾಯಿತು.

ಮೂರು ಕಿಮೀ : ಜೂನಿಯರ್ ವಿಭಾಗದಿಂದ ಸುದೇಶ್, ಜಯಶ್ರೀ, ಪುರುಷ ವಿಭಾಗದಿಂದ ಸುಮಂತ್, ಮಹಿಳಾ ವಿಭಾಗದಿಂದ ಎಸ್.ಎಂ.ಸುಮಾ, ಅನುಭವಿ ಪುರುಷ ವಿಭಾಗದಿಂದ ಪೊನ್ನಣ್ಣ, ಮಹಿಳಾ ವಿಭಾಗದಿಂದ ಎಂ.ಎಸ್. ಸರೋಜ ಪ್ರಥಮ ಸ್ಥಾನ ಪಡೆದುಕೊಂಡರು.

ಏಳು ಕಿಮೀ : ಪುರುಷ ವಿಭಾಗದಿಂದ ಮಾದೇಶ್ ಗೌಡ, ಮಹಿಳಾ ವಿಭಾಗದಿಂದ ಮೀರಾ, ಅನುಭವಿ ಪುರುಷ ವಿಭಾಗದ ವತಿಯಿಂದ ಟಿ.ಎಂ.ಗಣೇಶ್, ಅನುಭವಿ ಮಹಿಳೆ ವಿಭಾಗದಿಂದ ಬೀನಾ ಫರ್ನಾಂಡಿಸ್ ಪ್ರಥಮ ಸ್ಥಾನ ತಮ್ಮದಾಗಿಸಿಕೊಂಡರು.

ಕನ್ನಡಿಗರ ಉಳಿಸಿ, ಕನ್ನಡ ಬೆಳೆಸಿ ಎಂದು ಆಗ್ರಹಿಸಿ ವಾಟಾಳ್ ಪ್ರತಿಭಟನೆ



ಕನ್ನಡಿಗರನ್ನು ಉಳಿಸಿ, ಕನ್ನಡ ಬೆಳೆಸಿ ಎಂದು ಆಗ್ರಹಿಸಿ ಕನ್ನಡ ಪರ ಹೋರಾಟಗಾರ ವಾಟಾಳ್ ನಾಗರಾಜ್ ಅವರು ಮೈಸೂರಿನ ಹಾರ್ಡಿಂಜ್ ವೃತ್ತದ ಮುಂಭಾಗ ಭಾನುವಾರ ಪ್ರತಿಭಟನೆ ನಡೆಸಿದರು.

ಮೈಸೂರು, ಅ.27(ಜಿಎ)–ರಾಜ್ಯದಲ್ಲಿ ಕನ್ನಡಿಗರ ಪರಿಸ್ಥಿತಿ ಕಣ್ಣೀರಿನ ಕಥೆಯಾಗಿದ್ದು, ಹಿಂದಿ ದಬ್ಬಾಳಿಕೆ ಹಾಗೂ ಪರ ಭಾಷಿಗರ ವಲಸೆ ತಪ್ಪಿಸಿ ಕನ್ನಡಿಗರನ್ನು ಉಳಿಸಿ, ಕನ್ನಡ ಬೆಳೆಸಿ ಎಂದು ಆಗ್ರಹಿಸಿ ಕನ್ನಡ ಪರ ಹೋರಾಟಗಾರ ವಾಟಾಳ್ ನಾಗರಾಜ್ ಅವರು ಮೈಸೂರಿನ ಹಾರ್ಡಿಂಜ್ ವೃತ್ತದ ಮುಂಭಾಗ ಭಾನುವಾರ ಪ್ರತಿಭಟನೆ ನಡೆಸಿದರು.

ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ನ.1ರಂದು ಮಾತ್ರ ನಾವು ಕನ್ನಡಿಗರಾಗುತ್ತಿದ್ದೇವೆ. ಇದು ನಿರಂತರವಾಗಿರಬೇಕು. ಈ ಹಿನ್ನೆಲೆಯಲ್ಲಿ ನಾನು ಕನ್ನಡ ಉಳಿಸಿ ಎಂದು ರಾಜ್ಯದಾದ್ಯಂತ ಪ್ರವಾಸ ಮಾಡುತ್ತಿದ್ದೇನೆ ಎಂದು ತಿಳಿಸಿದರು.

ಮಂಡ್ಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ನೇಮಕಗೊಳ್ಳುವ ಕುರಿತು ಪ್ರತಿಕ್ರಿಯಿಸಿದ ಅವರು, ಸಾಹಿತ್ಯ ಸಮ್ಮೇಳನಕ್ಕೆ ಯಾವುದೇ ಆಹ್ವಾನ ಬಂದಿಲ್ಲ. ಸಾಹಿತ್ಯ ಪರಿಷತ್ ಅವರಿಗೆ ಧೈರ್ಯ, ಪ್ರಾಮಾಣಿಕತೆ ಹಾಗೂ ಪ್ರೀತಿ ಇದ್ದರೆ ಆಹ್ವಾನಿಸಲಿ. ಆದರೆ, ನಾನು ಹೋಗಿ ಮಾತನಾಡುವ ವಿಷಯಕ್ಕೂ ಅಜಗಜಾಂತರವಿದೆ. ಅದು ಮಡಿ, ನಾವು ಮೈಲಿಗೆ. ಆದರಿಂದ ನಮ್ಮನ್ನು ಮುಟ್ಟಿಕೊಳ್ಳುವುದಿಲ್ಲ. ಈ ಹಿಂದೆ ಸಾಹಿತಿ ಚಂದ್ರಶೇಖರ್ ಪಾಟೀಲ್(ಚಂಪಾ) ಅವರು ಒಂದು ಹಂತದಲ್ಲಿ ಅಧ್ಯಕ್ಷನಾಗಿ ಮಾಡುತ್ತೇನೆ. ಇಲ್ಲವಾದರೆ ಒಂದು ದಿನ ಗೌರವಿಸುವುದಕ್ಕೂ ಚಿಂತನೆ ಮಾಡಿದರೂ, ಆ ವೇಳೆಗೆ ಸರ್ಕಾರ ಉರುಳಿ ಹೋಯಿತು ಎಂದರು.

ಉಪ ಚುನಾವಣೆಯ ಕುರಿತು ಮಾತನಾಡಿದ ಅವರು, ಚನ್ನಪಟ್ಟಣದಲ್ಲಿ ಇದು ಚುನಾವಣೆ ಇದು ನಡೆಯುತ್ತಿರುವುದು ಚುನಾವಣೆಯಲ್ಲ. ಅದು ದರೋಡೆ. ಎರಡು ಪಕ್ಷದವರು ದರೋಡೆಗೆ ನಿಂತಿದ್ದಾರೆ. ಸಿದ್ದರಾಮಯ್ಯ ಅವರಿಂದ ಎಲ್ಲರಿಗೂ ಮರ್ಯಾದೆ ಇದೆ ಅಷ್ಟೇ ಎಂದರು.

ಚುನಾವಣಾ ಆಯೋಗದ ಆಯುಕ್ತರು ಅಲ್ಲಿ ಕ್ಯಾಂಪ್ ಮಾಡಿ. ಒಬ್ಬೊಬ್ಬರ ಬಳಿಯೂ 500 ಕೋಟಿ ರೂ. ಇದ್ದು, ಒಂದು ಓಟಿಗೆ 2,500 ರಿಂದ ಲಕ್ಷ ರೂ. ವರೆಗೆ ತಲುಪಿದೆ. ಆದ್ದರಿಂದ ಚುನಾವಣಾ ಆಯೋಗ ತೆರಳಿ ಕೇಸ್ ದಾಖಲಿಸಿ ಚುನಾವಣೆ ರದ್ದುಗೊಳಿಸಿ, ಮರು ಚುನಾವಣೆ ಮಾಡಬೇಕು. ಯಾರ ಒತ್ತಡಕ್ಕೆ ಮಣಿಯಬಾರದು ಎಂದು ಆಗ್ರಹಿಸಿದರು.

ವಿದುಷಿ ಕಾಶಿ ವಿಶಾಲಾಕ್ಷಿ ಅವರಿಗೆ 'ವೈಣಿಕ ಬ್ರಹ್ಮ' ಪ್ರಶಸ್ತಿ ಪ್ರದಾನ



ನಾದಬ್ರಹ್ಮ ಸಂಗೀತ ಸಭಾದಲ್ಲಿ ವಿದುಷಿ ಕಾಶಿ ವಿಶಾಲಾಕ್ಷಿ ಅವರಿಗೆ 'ವೈಣಿಕ ಬ್ರಹ್ಮ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಮೈಸೂರು, ಅ.27(ಎಂಕೆ)– ಪದ್ಮ ಭೂಷಣ ಪುರಸ್ಕೃತ ವಿದ್ವಾನ್ ಡಾ.ಮೈಸೂರು ವಿ.ದೊರೆಸ್ವಾಮಿ ಅಯ್ಯಂಗಾರ್ ಅವರ 104ನೇ ಜನ್ಮ ವಾರ್ಷಿಕೋತ್ಸವದ ಅಂಗವಾಗಿ ಹಿರಿಯ ವೀಣಾ ವಾದಕರೂ ಆದ ವಿದುಷಿ ಕಾಶಿ ವಿಶಾಲಾಕ್ಷಿ ಅವರಿಗೆ 'ವೈಣಿಕ ಬ್ರಹ್ಮ' ಪ್ರಶಸ್ತಿ ನೀಡಿ, ಗೌರವಿಸಲಾಯಿತು.

ಶ್ರೀ ನಾದಬ್ರಹ್ಮ ಸಂಗೀತ ಸಭಾದಲ್ಲಿ ಭಾನುವಾರ ನಡೆದ 'ವೈಣಿಕ ವೈಭವ' ವೀಣಾ ವಾದನ ಕಾರ್ಯಕ್ರಮದಲ್ಲಿ ಸಭಾ ಟ್ರಸ್ಟ್ ಉಪಾಧ್ಯಕ್ಷ ಕೀರ್ತಿಕುಮಾರ್ ಹಾಗೂ ವಿದ್ವಾನ್ ಡಾ.ಮೈಸೂರು ವಿ.ದೊರೆಸ್ವಾಮಿ ಅಯ್ಯಂಗಾರ್ ಪುತ್ರ ವಿದ್ವಾನ್ ಡಿ.ಬಾಲಕೃಷ್ಣ ಪ್ರಶಸ್ತಿ ಪ್ರದಾನ ಮಾಡಿದರು.

ಪ್ರಶಸ್ತಿ ಸ್ವೀಕರಿಸಿದ ಬಳಿಕ ಮಾತನಾಡಿದ ವಿದುಷಿ ಕಾಶಿ ವಿಶಾಲಾಕ್ಷಿ, ವೀಣಾ ವಾದನದಲ್ಲಿ ನಾನು ಮುಂದುವರೆಯಲು ಕಾರಣರಾದವರಲ್ಲಿ ವಿದ್ವಾನ್ ದೊರೆಸ್ವಾಮಿ ಅಯ್ಯಂಗಾರ್ ಅವರೂ ಒಬ್ಬರಾಗಿದ್ದಾರೆ. ಅವರ ಬಳಿಯೂ ನಾನು ವೀಣಾವಾದನ ಕಲಿತಿದ್ದೇನೆ. ಹೊಸ ಹೊಸ ಪ್ರಯೋಗಗಳನ್ನು ಹೇಳಿಕೊಡುತ್ತಿದ್ದ ಅವರು ಪ್ರೇರಣೆಯಾಗಿದ್ದಾರೆ ಎಂದು ಸ್ಮರಿಸಿದರು.

ಹೆಸರಿಗೆ ತಕ್ಕಂತೆ ಮೈಸೂರು ಸಾಂಸ್ಕೃತಿಕ ನಗರಿ. ವೀಣಾವಾದನ ಸಂಗೀತ ಕ್ಷೇತ್ರದಲ್ಲಿ ಮೈಸೂರಿಗೆ ದೊಡ್ಡ ಮಟ್ಟದ ಹೆಸರಿದೆ. ಇದಕ್ಕೆ ಮೊದಲಿದ್ದ ವೀಣಾ ವಿದ್ವಾಂಸರು ಕಾರಣರಾಗಿದ್ದಾರೆ. ಇಂತಹ ಸಾಂಸ್ಕೃತಿಕ ನಗರದಲ್ಲಿ ನನ್ನನ್ನು ಸನ್ಮಾನಿಸಿ, ಅಭಿನಂದಿಸಿರುವುದು ಮಹತ್ವವೆನಿಸಿದೆ ಎಂದು ಹರ್ಷವ್ಯಕ್ತಪಡಿಸಿದರು. ನಾದಬ್ರಹ್ಮ ಸಂಗೀತ ಸಭಾ ಎಕ್ಸಿಕ್ಯೂಟಿವ್ ಕಮಿಟಿ ಸದಸ್ಯ ಕೇಶವ ಸರಳಾಯ ಮತ್ತಿತರರು ಉಪಸ್ಥಿತರಿದ್ದರು.

ದ್ವಂದ್ವ ವೀಣಾವಾದನ: ಇದಕ್ಕೂ ಮುನ್ನ ವಿದುಷಿ ಕಾಶಿ ವಿಶಾಲಾಕ್ಷಿ ಹಾಗೂ ವಿದುಷಿ ಪದ್ಮ ರವಿಶಂಕರ್ ಜುಗಲ್ ಬಂದಿಯಲ್ಲಿ ದ್ವಂದ್ವ ವೀಣಾವಾದನ ಕಾರ್ಯಕ್ರಮ ನಡೆಯಿತು. ಮೃದಂಗ ವಾದನದಲ್ಲಿ ವಿದ್ವಾನ್ ಸುನೀಲ್ ಸುಬ್ರಹ್ಮಣ್ಯ, ಘಟಂನಲ್ಲಿ ವಿದ್ವಾನ್ ಸಮಿತ್ ಎಸ್ ಗೌಡ ಉತ್ತಮ ಸಹಕಾರ ನೀಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ವಿಪಕ್ಷಗಳ ಪಿತೂರಿಗೆ ಖಂಡನೆ

ನವೆಂಬರ್‌ನಲ್ಲಿ ಸಿದ್ದರಾಮಯ್ಯ ಸ್ವಾಭಿಮಾನಿ ಜನಾಂದೋಲನ ಸಮಾವೇಶಕ್ಕೆ ನಿರ್ಧಾರ



ಮೈಸೂರಿನ ಯಾದವ (ಗೊಲ್ಲ) ಸಮುದಾಯ ಭವನದಲ್ಲಿ ಭಾನುವಾರ ನಡೆದ ವಿವಿಧ ಸಂಘಟನೆ ಹಾಗೂ ಪ್ರಗತಿಪರರ ಸಭೆಯಲ್ಲಿ ಕರ್ನಾಟಕ ವಕೀಲರ ಜಾಗೃತ ವೇದಿಕೆ ಪ್ರಕಟಿಸಿರುವ ಮುಡಾ ಹಗರಣ– ಸತ್ಯಾಸತ್ಯತೆ ಕಿರು ಹೊತ್ತಿಗೆಯನ್ನು ಬಿಡುಗಡೆ ಮಾಡಲಾಯಿತು.

ಮೈಸೂರು, ಅ.27(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತೇಜೋವಧೆಗೆ ಇಳಿದಿರುವ ಬಿಜೆಪಿ, ಜೆಡಿಎಸ್ ಕಾರ್ಯಚಟುವಟಿಕೆಗಳನ್ನು ಖಂಡಿಸಿ ನವೆಂಬರ್‌ನಲ್ಲಿ ಸಿದ್ದರಾಮಯ್ಯ ಸ್ವಾಭಿಮಾನಿ ಜನಾಂದೋಲನ ಸಮಾವೇಶ ನಡೆಸಲು ನಿರ್ಧರಿಸಲಾಗಿದೆ.

ಮೈಸೂರಿನ ಯಾದವ (ಗೊಲ್ಲ) ಸಮುದಾಯ ಭವನದಲ್ಲಿ ಇಂದು ನಡೆದ ವಿವಿಧ ಸಂಘಟನೆ ಹಾಗೂ ಪ್ರಗತಿಪರರ ಪೂರ್ವಭಾವಿ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಯಿತು.

ನಗರದ ಮಹಾರಾಜ ಕಾಲೇಜು ಮೈದಾನದಲ್ಲಿ ಅಂದು ನಡೆಯುವ ಸಭೆಯಲ್ಲಿ ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು, ಹಾಸನ ಜಿಲ್ಲೆಯ ಸಾವಿರಾರು ಜನರನ್ನು ಸೇರಿಸಲು ನಿರ್ಧರಿಸಲಾಯಿತು.

ಈ ವೇಳೆ ಪ್ರಾಸ್ತಾವಿಕ ನುಡಿಗಳನ್ನಾಡಿದ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ, ಈ ಸಮಾವೇಶದಲ್ಲಿ ಪಾಲ್ಗೊಳ್ಳುವಂತೆ ಸಿದ್ದರಾಮಯ್ಯ ಅವರಲ್ಲಿ ಮನವಿ ಮಾಡಲಾಗುವುದು. ಅವರು ಸಮಾವೇಶದಲ್ಲಿ ಭಾಗವಹಿಸುವ ಬಗ್ಗೆ ದಿನಾಂಕ ಖಚಿತ ಮಾಡಿಕೊಳ್ಳಲಾಗುವುದು ಎಂದರು.

ಪ್ರಾಮಾಣಿಕತೆಗೆ ಹೆಸರಾಗಿರುವ ಸಿದ್ದರಾಮಯ್ಯ ವಿರುದ್ಧ ವಿಪಕ್ಷಗಳು ಷಡ್ಯಂತ್ರ ರೂಪಿಸಿವೆ. ಮುಡಾ ಹಗರಣದ ಹೆಸರಿನಲ್ಲಿ ಸಿದ್ದರಾಮಯ್ಯ ವ್ಯಕ್ತಿತ್ವಕ್ಕೆ ಮಸಿ ಬಳಿಯಲು ಯತ್ನಿಸುತ್ತಿದ್ದು, ಈ ನಾಡಿನ ಶೋಷಿತರು, ಅಲ್ಪ ಸಂಖ್ಯಾತರು, ಹಿಂದುಳಿದ ವರ್ಗದವರು, ದಲಿತರು ಸೇರಿದಂತೆ ಎಲ್ಲಾ ವರ್ಗದವರು ಇದಕ್ಕೆ ಮನ್ನಣೆ ನೀಡಬಾರದು. ಈ ಹಿನ್ನೆಲೆ ಜನರಲ್ಲಿ ಜಾಗೃತಿ ಮೂಡಿಸಲು ಸಿದ್ದರಾಮಯ್ಯ ಸ್ವಾಭಿಮಾನಿ ಜನಾಂದೋಲನ ಸಮಾವೇಶ ನಡೆಸಲಾಗುವುದು ಎಂದು ತಿಳಿಸಿದರು.

ಈ ವೇಳೆ ಮಾತನಾಡಿದ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ, ಕೇರಳದ ವಯನಾಡಿನಲ್ಲಿ ಪ್ರಿಯಾಂಕ ಗಾಂಧಿ ನಾಮಪತ್ರ ಸಲ್ಲಿಸುವ ಸಂದರ್ಭದಲ್ಲಿ ಸಿದ್ದರಾಮಯ್ಯಗೆ ಸಿಕ್ಕ ಮೆಚ್ಚುಗೆ ತಿಳಿಯಬೇಕು. ಇಂತಹ ನಾಯಕನನ್ನು ಅರಿಯಲು ನಾಡಿನ ಜನತೆ ಎಡವಿದ್ದಾರೆ ಎಂದರು.

ಸಿದ್ದರಾಮಯ್ಯ ವಿರುದ್ಧ ಪಿತೂರಿ ನಡೆಯುತ್ತಿರುವ ಸಂದರ್ಭದಲ್ಲಿ ಶೋಷಿತರು ಹಾಗೂ ಅಹಿಂದ ವರ್ಗ ಸಿದ್ದರಾಮಯ್ಯ ಅವರನ್ನು ಸಮರ್ಥಿಸಿಕೊಳ್ಳಲು ಹಿಂದೆ ಬಿದ್ದಿರುವುದು ದುರದೃಷ್ಟಕರ ಸಂಗತಿ ಎಂದು ಬೇಸರ ವ್ಯಕ್ತಪಡಿಸಿದರು.

ಪೂರ್ವಭಾವಿ ಸಭೆಯಲ್ಲಿ ಕರ್ನಾಟಕ ವಕೀಲರ ಜಾಗೃತ ವೇದಿಕೆ ಪ್ರಕಟಿಸಿರುವ ಮುಡಾ ಹಗರಣ– ಸತ್ಯಾಸತ್ಯತೆ ಕಿರು ಹೊತ್ತಿಗೆಯನ್ನು ಬಿಡುಗಡೆ ಮಾಡಲಾಯಿತು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ. ಬಿ.ಜೆ.ವಿಜಯ್ ಕುಮಾರ್, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯರಾದ ಬೀರಿಹುಂಡಿ ಬಸವಣ್ಣ, ಸುಧಾ ಮಹದೇವಯ್ಯ, ಮಾದೇಗೌಡ, ನಾಯಕ ಸಮುದಾಯದ ಮುಖಂಡರಾದ ದ್ಯಾವಪ್ಪ ನಾಯಕ, ರಾಜೇಶ್ವರಿ, ಬೋವಿ ನಿಗಮದ ಮಾಜಿ ಅಧ್ಯಕ್ಷ ಜಿ.ವಿ.ಸೀತಾರಾಮ್, ದಲಿತ ಮುಖಂಡ ವಿ.ರಾಮಸ್ವಾಮಿ, ಮಾಜಿ ಕಾರ್ಪೋರೇಟರ್ ಡಿ.ನಾಗಭೂಷಣ್, ಮಂಡ್ಯ ಕುರುಬರ ಸಂಘದ ಅಧ್ಯಕ್ಷ ಸುರೇಶ್, ಮೈಸೂರು ಜಿಲ್ಲಾಧ್ಯಕ್ಷ ಶಿವಪ್ಪ ಕೋಟೆ, ಹೆಚ್.ಡಿ.ಕೋಟೆ ತಾಲೂಕು ಕುರುಬರ ಸಂಘದ ಅಧ್ಯಕ್ಷ ಆನಂದ್ ಸೇರಿದಂತೆ ಹಲವರು ಭಾಗವಹಿಸಿದ್ದರು.

ಸಂಗೀತಕ್ಕೆ ಪ್ರೋತ್ಸಾಹ ನೀಡಿದರೆ ಮನಸ್ಸಿಗೆ ತೃಪ್ತಿ

ಕರ್ನಾಟಕ ಸುಗಮ ಸಂಗೀತ ಪರಿಷತ್ ಜಿಲ್ಲಾಧ್ಯಕ್ಷ ನಾಗರಾಜ ವಿ.ಭೈರಿ ಅಭಿಮತ

ಮೈಸೂರು, ಅ.27(ಎಂಕೆ)– ಸಂಗೀತಕ್ಕೆ ಪ್ರೋತ್ಸಾಹ ನೀಡುವುದರಿಂದ ಮನಸ್ಸಿಗೆ ತೃಪ್ತಿ ದೊರೆಯುವುದಲ್ಲದೆ ಹೊಸ ಪ್ರತಿಭೆಗಳ ಉಗಮಕ್ಕೆ ವೇದಿಕೆಯಾಗಲಿದೆ ಎಂದು ಕರ್ನಾಟಕ ಸುಗಮ ಸಂಗೀತ ಪರಿಷತ್ ಜಿಲ್ಲಾಧ್ಯಕ್ಷ ನಾಗರಾಜ ವಿ.ಭೈರಿ ಹೇಳಿದರು.

ಮೈಸೂರಿನ ವಿಜಯನಗರ 1ನೇ ಹಂತದಲ್ಲಿರುವ ಜಿಲ್ಲಾ ಕಸಾಪ ಸಾಹಿತ್ಯ ಭವನದಲ್ಲಿ ಭಾನುವಾರ ನಡೆದ ಅಲೆಯನ್ಸ್ ಕ್ಲಬ್ ಆಫ್ ಮೈಸೂರು ಸ್ಟಾರ್ ಸಿಂಗರ್ಸ್ ಉದ್ಘಾಟನೆ ಹಾಗೂ ವಿವಿಧ ಕ್ಷೇತ್ರದ ಸಾಧಕರಿಗೆ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಹಲವಾರು ಕ್ಷೇತ್ರಗಳಲ್ಲಿ ಕೆಲಸ ಮಾಡಿ, ಸಾಕಷ್ಟು ಪ್ರೋತ್ಸಾಹ ನೀಡುತ್ತಿದ್ದೇನೆ. ಆದರೆ ಸುಗಮ ಸಂಗೀತ ಪರಿಷತ್ ಸ್ಥಾಪಿಸಿಕೊಂಡು ಕಳೆದ ಏಳೆಂಟು ತಿಂಗಳಿಂದ ನಡೆಸುತ್ತಿರುವ ಚಟುವಟಿಕೆಗಳು ಮಾನಸಿಕವಾಗಿ ತೃಪ್ತಿ ನೀಡಿದೆ. ಸಂಗೀತ ಕಾರ್ಯಕ್ರಮಗಳ ಆಯೋಜನೆಯಿಂದ ಸಾಕಷ್ಟು ಯುವಪ್ರತಿಭೆಗಳು ಬೆಳಕಿಗೆ ಬರುತ್ತಿವೆ ಎಂದರು.

ಪ್ರಜಾಪ್ರಭುತ್ವದಲ್ಲಿ ನಾಲ್ಕನೇ ಅಂಗವಾಗಿರುವ ಪತ್ರಿಕಾ ರಂಗವಿಲ್ಲದಿದ್ದರೆ, ಸಮಾಜಕ್ಕೆ ಯಾವುದೇ ಸಂದೇಶಗಳು, ಸುದ್ದಿ–ಸಮಾಚಾರಗಳು ಅಷ್ಟು ಸುಲಭವಾಗಿ ತಲುಪುವುದಿಲ್ಲ. ಈ ನಿಟ್ಟಿನಲ್ಲಿ ಮಾಧ್ಯಮ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವವರನ್ನು ಗುರ್ತಿಸಿ ಅಭಿನಂದಿಸುತ್ತಿರುವುದು ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸನ್ಮಾನ, ಗಾಯನ: ಇದೇ ವೇಳೆ ರಂಗನಾಥ್ ಮೈಸೂರು, ಆರ್.ಕೃಷ್ಣ, ಶ್ರೀಧರ್ ಆರ್.ಭಟ್ಟ ಹಾಗೂ ಮಹದೇವಸ್ವಾಮಿ ಅವರಿಗೆ 'ಮಾಧ್ಯಮರತ್ನ', ಎಸ್. ಜ್ಞಾನೇಶ್ವರ್ ಅವರಿಗೆ 'ಕ್ರೀಡಾರತ್ನ', ಗೀತಾ ಕುಮಾರ್ ಅವರಿಗೆ 'ಯೋಗರತ್ನ' ಪ್ರಶಸ್ತಿಯನ್ನು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಪ್ರದಾನ ಮಾಡಿದರು. ನಂತರ ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಡಾ.ವೈ.ಡಿ. ರಾಜಣ್ಣ, ಅಲೆಯನ್ಸ್ ಕ್ಲಬ್ ಆಫ್ ನಾಲ್ವಡಿ ಮತ್ತು ಸ್ಟಾರ್ ಸಿಂಗರ್ಸ್ ಅಧ್ಯಕ್ಷ ಎನ್. ಬೆಟ್ಟೇಗೌಡ, ಗಾಯಕರಾದ ಅಬ್ದುಲ್ ಖಯ್ಯಾಮ್, ಡಾ.ಪೂರ್ಣಿಮಾ, ಶ್ರೀಲತಾ, ಸಿ.ಎಸ್. ವಾಣಿ, ಗೀತಾಲಕ್ಷ್ಮಿ ಕಿಣಿ, ನಾಗಮಣಿ, ಸುಜಾತಾ, ನಾಗರತ್ನ ಅವರು ಗಾಯನ ಪ್ರಸ್ತುತಪಡಿಸಿದರು.

ನೇಗಿಲಯೋಗಿ ಸಂಸ್ಥೆಯ ಸಂಸ್ಥಾಪಕ ಡಿ.ರವಿಕುಮಾರ್, ಸಿದ್ಧಾರ್ಥನಗರ ಶಾಂತಲಾ ವಿದ್ಯಾಪೀಠದ ಕಾರ್ಯದರ್ಶಿ ಸಂತೋಷ್ ಕುಮಾರ್, ಕನ್ನಡ ಚಳವಳಿಗಾರ ಮೂಗೂರು ನಂಜುಂಡ ಸ್ವಾಮಿ, ಶೋಭಾರಾಣಿ ಉಪಸ್ಥಿತರಿದ್ದರು.



ಅಲೆಯನ್ಸ್ ಕ್ಲಬ್ ಆಫ್ ಮೈಸೂರು ಸ್ಟಾರ್ ಸಿಂಗರ್ಸ್ ವತಿಯಿಂದ ವಿವಿಧ ಕ್ಷೇತ್ರದ ಸಾಧಕರಿಗೆ ಸನ್ಮಾನಿಸಲಾಯಿತು.

ಕಣಿವೆಗೆ ಉರುಳಿದ ಕಾರು, ಐವರು ಸಾವು

ಮಂಡಿ, ಅ.27– ಹಿಮಾಚಲ ಪ್ರದೇಶದ ಮಂಡಿ ಜಿಲ್ಲೆಯ ಚೌಹಾರ್ ಕಣಿವೆಯಲ್ಲಿ ಕಾರೊಂದು ಕಣಿವೆಗೆ ಉರುಳಿ ಬಿದ್ದಿದ್ದು, ಭೀಕರ ಅಪಘಾತದಲ್ಲಿ 16 ವರ್ಷದ ಬಾಲಕ ಸೇರಿದಂತೆ ಐವರು ಮೃತಪಟ್ಟಿದ್ದಾರೆ ಎಂದು ಪೊಲೀಸರು ಭಾನುವಾರ ಹೇಳಿದ್ದಾರೆ.

ಶನಿವಾರ ರಾತ್ರಿ ಈ ಘಟನೆ ನಡೆದಿದ್ದು, ಕಾರು ಮದುವೆ ಸಮಾರಂಭದಿಂದ ಹಿಂತಿರುಗುತ್ತಿದ್ದಾಗ ಅಪಘಾತ ಸಂಭವಿಸಿದೆ. ಮೃತರಲ್ಲಿ ಒಬ್ಬನನ್ನು 16 ವರ್ಷದ ಬಾಲಕ ಎಂದು ಗುರುತಿಸಲಾಗಿದ್ದು, ಉಳಿದ ನಾಲ್ವರು 20 ರಿಂದ 25 ವರ್ಷ ವಯಸ್ಸಿನವರು ಎಂದು ಮಂಡಿ ಪೊಲೀಸ್ ವರಿಷ್ಠಾಧಿಕಾರಿ ಸಾಕ್ಷಿ ವರ್ಮಾ ತಿಳಿಸಿದ್ದಾರೆ.



ಸಾರ್ವಜನಿಕರಿಗೆ ತಿಳುವಳಿಕೆ

ನನ್ನ ಕಕ್ಷಿದಾರರಾದ ಮೈಸೂರು ಸಿಟಿ. ಕನಕದಾಸ ನಗರ, 5ನೇ ಮೇನ್, ಡಿ. ಬ್ಲಾಕ್. ಮನೆ ನಂ 2538, ರಲ್ಲಿ ವಾಸವಾಗಿರುವ ಕೆ. ಉಮಕಾಂತ್ ರವರ ಧರ್ಮಪತ್ನಿ ಶ್ರೀಮತಿ ಸಿ.ಸುಭದ್ರ ರವರ ಇರಾದೆಯ ಮೇರೆಗೆ ಸಮಸ್ತ ನಾಗರೀಕರಿಗೂ ತಿಳಿಯ ಪಡಿಸುವುದೇನೆಂದರೆ : ನಮ್ಮ ಕಕ್ಷಿದಾರರು ಮೈಸೂರು ವಿಶ್ವವಿದ್ಯಾನಿಲಯ ಗೃಹ ನಿರ್ಮಾಣ ಸಹಕಾರ ಸಂಘದಿಂದ ನಿರ್ಮಿತವಾಗಿರುವ ಲಿಂಗಾಬುದಿ ಗ್ರಾಮದಲ್ಲಿರುವ ನಿವೇಶನ ಸಂಖ್ಯೆ 188 ಪೂರ್ವ ಪಶ್ಚಿಮ 12 ಮೀಟರ್ ಉತ್ತರ ದಕ್ಷಿಣ 18 ಮೀಟರ್‌ವುಳ್ಳ ನಿವೇಶನವನ್ನು ಅದರ ಮಾಲೀಕರಾದ ಶ್ರೀ. ವಿ. ಸತ್ಯಕುಮಾರ್ ರವರಿಂದ ಶುದ್ಧ ಕ್ರಮಕ್ಕೆ ದಿ. 17.12.2005 ರಂದು ಶುದ್ಧ ನೋಂದಾಯಿತ ಕ್ರಯ ಪತ್ರ ಸಂಖ್ಯೆ ಎಂ.ವೈ.ಎನ್– 1–15312/2005–06 ಮೂಲಕ ಖರೀದಿಸಿರುತ್ತಾರೆ. ಆ ಲಾಗಾಯ್ತು ಸ್ವತ್ತು ನಮ್ಮ ಕಕ್ಷಿದಾರರ ಸ್ವಾಧೀನಾನುಭವದಲ್ಲಿರುತ್ತದೆ. ವಸ್ತುಸ್ಥಿತಿ ಹೀಗಿರುವಾಗ ನಮ್ಮ ಕಕ್ಷಿದಾರರ ಸ್ವಾಧೀನಕ್ಕೆ ಧಕ್ಕೆ ಬರುವ ಮತ್ತು ತಾವೇ ಮಾಲೀಕರೆಂದು ಹೇಳಿಕೊಂಡು ಏನೂ ಹಕ್ಕಿಲ್ಲದ ವ್ಯಕ್ತಿಗಳು ಅಕ್ರಮವಾಗಿ ಕ್ರಯ ಮಾಡಲು ಮುಂದಾಗಿರುತ್ತಾರೆ. ಆದುದರಿಂದ ಈ ತಿಳುವಳಿಕೆ, ಈ ಮೂಲಕ ಸಮಸ್ತನಾಗರೀಕರಿಗೂ ತಿಳಿಯ ಪಡಿಸುವುದೇನೆಂದರೆ ನಮ್ಮ ಕಕ್ಷಿದಾರರ ಏನಃ ನಿವೇಶನ ಸಂಖ್ಯೆ 188ಕ್ಕೆ ಬೇರೆ ಯಾರಿಗೂ ಯಾವ ರೀತಿಯಾದ ಹಕ್ಕು ಬಾಧ್ಯತೆಗಳು ಇರುವುದಿಲ್ಲ. ಹೀಗಿದ್ದು ಯಾರಾದರು ನಾಗರೀಕರು ಕ್ರಯ ಮುಂತಾದ ವ್ಯವಹಾರಕ್ಕೆ ಕೈ ಹಾಕಿದ್ದಲ್ಲಿ ಸದರಿ ವ್ಯವಹಾರವು ನಮ್ಮ ಕಕ್ಷಿದಾರರ ಹಕ್ಕನ್ನು ಬಾಧ್ಯಪಡಿಸುವುದಿಲ್ಲವೆಂದು ಈ ಮೂಲಕ ತಿಳಿಯಪಡಿಸಲಾಗಿದೆ.


ಷೆಡ್ಯೂಲ್

ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಲಿಂಗಾಬುದಿ ಗ್ರಾಮಕ್ಕೆ ಸೇರಿದ ಮೈಸೂರು ವಿಶ್ವವಿದ್ಯಾನಿಲಯ ಗೃಹ ನಿರ್ಮಾಣ ಸಹಕಾರ ಸಂಘದಿಂದ ನಿರ್ಮಿತವಾದ ಬಡಾವಣೆಯ ನಿವೇಶನ ಸಂಖ್ಯೆ 188, 12 * 18 ಮೀಟರ್ ವಿಸ್ತೀರ್ಣವುಳ್ಳ ನಿವೇಶನಕ್ಕೆ ಚೆಕ್ಕುಬಂಧಿ: ಪೂರ್ವಕ್ಕೆ: ನಿವೇಶನ ಸಂಖ್ಯೆ 189, ಪಶ್ಚಿಮಕ್ಕೆ : ನಿವೇಶನ ಸಂಖ್ಯೆ 187, ಉತ್ತರಕ್ಕೆ : ನಿವೇಶನ ಸಂಖ್ಯೆ 172, ದಕ್ಷಿಣಕ್ಕೆ : ರಸ್ತೆ

ವಕೀಲರು : ಬಿ.ಎಸ್.ರವಿಶಂಕರ್
ಕೆ.ಎ.ಆರ್.2394/2003 ರೂಂ ನಂ.6.
ಮಾರಮ್ಮ ದೇವಸ್ಥಾನದ ಹಿಂಭಾಗ, ಬಜಣ್ಣ ಲೇನ್, ಚಾಮರಾಜಪುರಂ, ಮೈಸೂರು– 05.
ಮೊ: 9980408840

ಸ್ಥಳ: ಮೈಸೂರು
ದಿನಾಂಕ : 28–10–2024





ಪ್ರಥಮ ವರ್ಷದ ಪುಣ್ಯಸ್ಮರಣೆ

ಲಿಂಗೈಕ್ಯ ಶ್ರೀ ಬಿ.ಪಿ.ವೀರಭದ್ರಪ್ಪ
ಬದನಗುಪ್ಪೆ, ಚಾಮರಾಜನಗರ ತಾ||
ದಿ: 28.10.2024 ಸೋಮವಾರ ಬೆಳಗ್ಗೆ 9 ಗಂಟೆಗೆ ದೇವನೂರು ಶ್ರೀ ಗುರುಮಲ್ಲೇಶ್ವರ ದಾಸೋಹ ಮಹಾಸಂಸ್ಥಾನ ಮಠದ ಶ್ರೀ ಮಹಾಂತ ಸ್ವಾಮೀಜಿ ಅವರ ಪಾದಪೂಜೆ ಏರ್ಪಡಿಸಲಾಗಿದೆ.
ಸ್ಮರಣೆ: ಲಿಂಗೈಕ್ಯ ಶ್ರೀಮತಿ ಕಮಲಮ್ಮ
ಬಿ.ಪಿ ವೀರಭದ್ರಪ್ಪ ಅವರ ಕುಟುಂಬವರ್ಗ



3rd year in loving Memory of Papa....

People say that time is a healer, but as the time goes on, I seem to find it just as hard to face the fact you've gone.
Daddy we wish you were still here may be things would be better than they are right now. Dad, your guiding hand on our shoulder will remain with us forever.

Sunanda Raj
Date birth : 22.07.1958
Demise: 28.10.2021


Your's grieving Daughters
Ramya.S and Vinutha.S and family

FINAL TRIBUTE
RAMACHANDRA RAO S.R.
June 30, 1939 to October 27, 2024




Final Rites - 28th October 2024, 12 PM
5/107 Mahalakshmi Nilaya, Old Post Office Road, Opposite Raghavendra Mutt, Srirangapatna.
Grieving Family Members - Son: S.R. Raghukulendra, Daughter-in-law: Shalini & Family

ಪುಣ್ಯಸ್ಮರಣೆ



ಶ್ರೀಮತಿ ಪುಟ್ಟತಾಯಮ್ಮ ಉ|| ಬೋರಮ್ಮ
(ಲೇ|| ಯ|| ಎಂ.ಜೆ.ಸಿದ್ದೇಗೌಡರ ಧರ್ಮಪತ್ನಿ)
ದಿನಾಂಕ 29–10–2024ನೇ ಮಂಗಳವಾರದಂದು ಇವರ ಪುಣ್ಯಸ್ಮರಣೆ ಕಾರ್ಯಕ್ರಮವನ್ನು (ತಿಂಗಳ ಕಾರ್ಯಕ್ರಮ) ಮೈಸೂರು ತಾಲ್ಲೂಕು ಜಯಪುರ ಹೋಬಳಿ ಮರಟಿಕ್ಯಾತನಹಳ್ಳಿ ಗ್ರಾಮದ ನಮ್ಮ ಸ್ವಗೃಹದಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ದುಃಖತಪ್ತರು:
ಶ್ರೀಮತಿ ಶಾರದಮ್ಮ ಮತ್ತು ಯ|| ಶ್ರೀ ಎಂ.ಎಸ್. ಗಂಗಾಧರ, ಶ್ರೀಮತಿ ಸಾವಿತ್ರಮ್ಮ ಮತ್ತು ಶ್ರೀ ಎಂ.ಎಸ್. ಜಗದೀಶ, ಶ್ರೀಮತಿ ಪುಷ್ಪಲತಾ ಮತ್ತು ಶ್ರೀ ಎಂ.ಎಸ್. ಏಕಾಂಬರೀಶ, ಶ್ರೀಮತಿ ಗೌರಮ್ಮ ಮತ್ತು ಲೇ|| ಶ್ರೀ ಎಂ. ರಾಮಚಂದ್ರೇಗೌಡರು, ಶ್ರೀಮತಿ ಲಕ್ಷ್ಮಮ್ಮ ಮತ್ತು ಲೇ|| ಶ್ರೀ ಚೆಲುವೇಗೌಡರು ಶ್ರೀಮತಿ ಅಂಕಮ್ಮ ಮತ್ತು ಶ್ರೀ ಆರ್. ಸತ್ಯನಾರಾಯಣ ಮೊಮ್ಮಕ್ಕಳು, ಯ|| ಜೋಗೇಗೌಡರ ಕುಟುಂಬದವರು ಗ್ರಾಮಸ್ಥರು ಹಾಗೂ ಬಂಧುಮಿತ್ರರು
ಭೋಜನ: ಮಧ್ಯಾಹ್ನ 1 ಗಂಟೆಗೆ
ರಾತ್ರಿ 8.00 ಗಂಟೆಗೆ ಮನು ಸಿಂಚನ (ರೂಪ) ಇವರಿಂದ ಹರಿಕಥೆ

ಎರಡನೇ ವರ್ಷದ ಸವಿನೆನಪು



ದಿ|| ಶ್ರೀ. ನಂಜುಂಡೇಗೌಡರು
ಜನನ:12.08.1937 - ನಿಧನ: 28.10.2022
ನಿವೃತ್ತ ಡಿವೈ.ಎಸ್‌ಪಿ ಹಾಗೂ ಮಾಜಿ ಅಧ್ಯಕ್ಷರು,
ಕರ್ನಾಟಕ ಪೊಲೀಸ್ ಗೃಹ ನಿರ್ಮಾಣ ಸಹಕಾರ ಸಂಘ (ನಿ) ನೇತಾಜಿನಗರ, ಮೈಸೂರು
ನಿಮ್ಮ ಆತ್ಮಕ್ಕೆ ಚಿರಶಾಂತಿ ಕೋರುವ
ಶ್ರೀ ಟಿ.ಎನ್. ನಾಗೇಶ್, ಅಧ್ಯಕ್ಷರು
ಕರ್ನಾಟಕ ಪೊಲೀಸ್ ಗೃಹ ನಿರ್ಮಾಣ ಸಹಕಾರ ಸಂಘ (ನಿ) ನೇತಾಜಿನಗರ, ಮೈಸೂರು
ಶ್ರೀ ಟಿ.ಎನ್. ಶಶಿಕುಮಾರ್, ಅಧ್ಯಕ್ಷರು
ನೇತಾಜಿ ಗೃಹನಿರ್ಮಾಣ ಸಹಕಾರ ಸಂಘ, (ನಿ) ಸಿದ್ಧಾರ್ಥನಗರ, ಮೈಸೂರು
ಹಾಗೂ ಬಂಧುಮಿತ್ರರು